## ಅಧ್ಯಾಯ 2

# ಉಪದೇಶ

## ಕ್ರಿಸ್ತನ ಎರಡನೆಯ ಬರೋಣ (2:1-12)

### ಆತನ ಎರಡನೆಯ ಬರೋಣವು ಇನ್ನೂ ಸಂಭವಿಸಿರುವದಿಲ್ಲ (2:1, 2)

**[1]ಸಹೋದರರೇ, ನಮ್ಮ ಕರ್ತನಾದ ಯೇಸು ಕ್ರಿಸ್ತನ ಪ್ರತ್ಯಕ್ಷತೆಯ ವಿಷಯವಾಗಿಯೂ ನಾವು ಆತನ ಬಳಿಯಲ್ಲಿ ಕೂಡಿಕೊಳ್ಳುವದರ ವಿಷಯವಾಗಿಯೂ ನಿಮ್ಮನ್ನು ಬೇಡಿಕೊಳ್ಳುವದೇನಂದರೆ-[2]ಕರ್ತನ ದಿನವು ಈಗಲೇ ಹತ್ತಿರವಾಯಿತೆಂಬದಾಗಿ ದೇವರಾತ್ಮಪ್ರೇರಿತವಾದ ನುಡಿ ಇದೆ ಎಂಬದಾಗಲಿ ಪೌಲನು ಹಾಗೆ ಹೇಳಿದನೆಂದಾಗಲಿ ಪೌಲನು ಹಾಗೆ ಬರೆದನೆಂದಾಗಲಿ ಯಾರಾದರೂ ಹೇಳಿದರೂ ನೀವು ಬೇಗನೆ ಬುದ್ಧಿಗೆಟ್ಟು ಚಂಚಲರಾಗಿ ಕಳವಳಪಡಬೇಡಿರಿ.**

**ವಚನ 1.** ಮತ್ತೊಂದಾವರ್ತಿ, ಪೌಲನು ಅಕ್ಕರೆಯ **ಸಹೋದರರೇ** ಎಂಬ ಮಾತಿನೊಂದಿಗೆ ಒಂದು ಹೊಸ ಪರಿಚ್ಛೇದವನ್ನು ಆರಂಭಿಸುತ್ತಾನೆ. **ನಮ್ಮ ಕರ್ತನಾದ ಯೇಸು ಕ್ರಿಸ್ತನ ಪ್ರತ್ಯಕ್ಷತೆ** ಎಂದು ಹೇಳಲ್ಪಟ್ಟಿರುವದು ನಾವು ಸಾಮಾನ್ಯವಾಗಿ ಕರೆಯುವ "ಎರಡನೆಯ ಬರೋಣ" ಎಂಬದು ಸ್ಪಷ್ಟವಾಗಿರುತ್ತದೆ. ಇದನ್ನೇ ಪೌಲನು "ನಮ್ಮ ಕರ್ತನ ಪ್ರತ್ಯಕ್ಷತೆ" ಎಂದು ಕರೆದನು (1 ಥೆಸಲೋನಿಕ 4:15) ಮತ್ತು "ಕರ್ತನ ದಿನ" ಎಂದು ಕರೆದನು (1 ಥೆಸಲೋನಿಕ 5:2; 2 ಥೆಸಲೋನಿಕ 1:10 ರೊಂದಿಗೆ ಹೋಲಿಸಿರಿ). ಅಲ್ಲದೆ ಪೌಲನು 1 ಥೆಸಲೋನಿಕ 5:23ರಲ್ಲಿ ಸಹ "ನಮ್ಮ ಕರ್ತನಾದ ಯೇಸು ಕ್ರಿಸ್ತನು" ಎಂಬ ಮಾತುಗಳನ್ನು ಬಳಸಿದನು.

ಈ ಪತ್ರಿಕೆಯಲ್ಲಿ, ಪೌಲನು ಕರ್ತನು ಆಕಾಶದಿಂದ ಪ್ರತ್ಯಕ್ಷನಾಗುವ ಭವಿಷ್ಯದ ಒಂದು ಕಾಲದ ಕುರತಾಗಿ ಈಗಾಗಲೇ ಮಾತಾಡಿದ್ದನು (1:7); ಅದು ಒಂದು ಮಹಾ ಪರಿಗಣನೆಯ ದಿನವಾಗಿರಲಿದ್ದು ಅಂದು ಕರ್ತನು ಕೆಲವರನ್ನು "ದಂಡಿಸಲ್ಪಡುವರು" ಮತ್ತು ಇನ್ನು ಕೆಲವರಲ್ಲಿ "ಮಹಿಮೆ ಹೊಂದುವನು" (1:8-10). 1ನೇ ವಚನದಲ್ಲಿ, ಆ ಕ್ಷಣದಲ್ಲಿ, ತಾನು, ಥೆಸಲೋನಿಕದವರು, ಮತ್ತು ಇತರ ನಂಬಿಗಸ್ತರು **ಆತನ ಬಳಿಯಲ್ಲಿ ಕೂಡಿಕೊಳ್ಳುವರು** ಎಂಬುದನ್ನು ಗಮನಕ್ಕೆ ತರುತ್ತಾನೆ. "ಕೂಡಿಕೊಳ್ಳುವರು" ಎಂಬುದು ἐπισυναγωγή (*episunagōgē*) ಪದದಿಂದ ಬರುತ್ತದೆ.[1] ತಾನು "ಆದುಕೊಂಡವರನ್ನು . . . ಒಟ್ಟುಗೂಡಿಸುವನು" ಎಂದು ಯೇಸು ಹೇಳಿದನು (ಮತ್ತಾಯ 24:31). ಕ್ರಿಸ್ತನು ಯಾರಲ್ಲಿ

"ಮಹಿಮೆ ಹೊಂದುವನೋ" ಅವರು ಆಗ "ಸದಾಕಾಲವೂ ಕರ್ತನ ಜೊತೆಯಲ್ಲಿ" ಇರುವರು (1 ಥೆಸಲೋನಿಕ 4:17). ನಂಬಿಗಸ್ತರು "ಆತನ ಬಳಿಯಲ್ಲಿ" ಕೂಡಿಸಲ್ಪಡುವರು.

**ವಚನ 2.** ಆ ಕರ್ತನ ಬರೋಣದ ವಿಷಯದಲ್ಲಿ ಥೆಸಲೋನಿಕದವರು ಆ ವಿಷಯದ ಕುರಿತ ಕೆಲವು ನಿರಾಧಾರವಾದ, ಸುಳ್ಳು ಬೋಧನೆಗಳ ಕಾರಣದಿಂದಾಗಿ **ಬೇಗನೆ ಬುದ್ಧಿಗೆಟ್ಟು ಚಂಚಲರಾಗಬಾರದು** ("ಶೀಘ್ರವೇ ಮನಸ್ಸಿನಲ್ಲಿ ನಡುಗಿಸಲ್ಪಡಬಾರದು"; RSV) ಅಥವಾ **ಕಳವಳಪಡಬಾರದು** ("ಭಾವೋದ್ವೇಗಕ್ಕೆ ಒಳಗಾಗಬಾರದು"; RSV) ಎಂಬುದು ಪೌಲನ ಬಯಕೆಯಾಗಿತ್ತು. ಸುಲಭವಾಗಿ ಚಂಚಲರಾಗುವ ಬದಲಾಗಿ "ಅವರು ಮತಾಂಧ ಕಲ್ಪನೆಗಳಿಂದ ತಮ್ಮ ತಲೆಗಳನ್ನು ಕಾಪಾಡಿಕೊಳ್ಳಬೇಕು" ಎಂಬುದು ಆತನ ಬಯಕೆಯಾಗಿತ್ತು.[2]

"ಬುದ್ಧಿಗೆಟ್ಟು ಚಂಚಲ" ಎಂಬುದು ಗ್ರೀಕ್‌ನ σαλεύω (*saleuō*) ಎಂಬ ಪದದಿಂದ ಬರುತ್ತದೆ. ಹೊಸ ಒಡಂಬಡಿಕೆಯಲ್ಲಿ, *saleuō* ಎಂಬುದರ ಸಾಮಾನ್ಯ ಅರ್ಥವು "ಅಲ್ಲೋಲಕಲ್ಲೋಲ ಮಾಡು ಅಥವಾ ಭಾವೋದ್ವೇಗಗೊಳಿಸು" ಎಂದಾಗಿರುತ್ತದೆ (ಲೂಕ 6:38; ಅಪೊಸ್ತಲರ ಕೃತ್ಯಗಳು 17:13 ರೊಂದಿಗೆ ಹೋಲಿಸಿರಿ), ಮತ್ತು ಒಂದು ಬಿರುಗಾಳಿಯಲ್ಲಿ ಅಲೆಗಳು ಅಲ್ಲೋಲ ಕಲ್ಲೋಲಗೊಳ್ಳುವದು ಎಂಬ ವಿಚಾರದಿಂದ ಬಂದಿರುತ್ತದೆ. ಹೇಗೂ, ಗ್ರೀಕ್ ಸಾಹಿತ್ಯದಲ್ಲಿ, "ಅದರರ್ಥವು 'ಒಂದರಿಂದ ದೂರಕ್ಕೆ ಚಲಿಸು' ಎಂದಾಗಿರುತ್ತದೆ, ಒಂದು ಹಡಗು ಚಂಡಮಾರುತದ ವೇಳೆ ತನ್ನ ಲಂಗರು ಕಂಬದಿಂದ ಕದಲುವ ರೀತಿಯಲ್ಲಿಯೇ; ಇಲ್ಲಿ ಮತ್ತು ಅಪೊಸ್ತಲರ ಕೃತ್ಯಗಳು 2:25ರಲ್ಲಿ ಈ ಎರಡನೆಯ ಅರ್ಥವೇ ಇರುವಂತೆ ತೋರುತ್ತದೆ."[3] ಕ್ರೈಸ್ತರು ಇದಕ್ಕಿಂತ ಹೆಚ್ಚು ಅಚಲತೆಯಿರುವಂತ ಸ್ಥಿತಿಯಲ್ಲಿರುವವರಾಗಿ ಬೆಳೆಯಬೇಕು (ನೋಡಿರಿ ಎಫೆಸ 4:14).

ಈ ಅಲ್ಲೋಲಕಲ್ಲೋಲವು ಯಾವ ಮೂಲ ಅಥವಾ ಮೂಲಗಳಿಂದ ಬರುತ್ತಿತ್ತು? ಪೌಲನು ಹೇಳಿದ ಹಾಗೆ, ಒಂದು ಮೂಲವೆಂದರೆ **ಒಂದು ಆತ್ಮ,** ಅಥವಾ ಅಕ್ಷರಶಃ "ಆತ್ಮನ ಮೂಲಕ" (KJV; RSV). ಆತನು ಬಹುಶಃ ಥೆಸಲೋನಿಕದಲ್ಲಿರುವ ಸುಳ್ಳು ಪ್ರವಾದಿಗಳನ್ನು ಸೂಚಿಸಿ ಹೇಳುತ್ತಿರಬಹುದು, ಅವರನ್ನು ಕುರಿತು ತನ್ನ ಮೊಲದ ಪತ್ರಿಕೆಯಲ್ಲಿ ಬರೆದಿದ್ದನು (1 ಥೆಸಲೋನಿಕ 5:19-22). ಸುಳ್ಳು ಬೋಧಕರು ಬಹುಶಃ ತಾವು ಪ್ರಚಾರ ಮಾಡುವದಕ್ಕೆ ಬಯಸಿದ ತಮ್ಮ ಸುಳ್ಳು ಸಿದ್ಧಾಂತವನ್ನು ಸಮರ್ಥಿಸುವ ಒಂದು ಪ್ರಕಟನೆ ತಮಗಾಗಿದೆ ಎಂದು ಹೇಳಿಕೊಳ್ಳುತ್ತಿದ್ದರು.

ಪ್ರಶ್ನೆಯಲ್ಲಿರುವಂಥ ಸುಳ್ಳು ಸಿದ್ಧಾಂತವು ಬರುತ್ತಿದ್ದ ಎರಡನೆಯ ಮೂಲವೆಂದರೆ **ಒಂದು ಸಂದೇಶ** ಅಥವಾ "ನುಡಿ" (KJV; RSV). ಇದು ಹೆಚ್ಚುಕಡಿಮೆ ಖಚಿತವಾಗಿ ಸೂಚಿಸುವದೇನೆಂದರೆ ಅದೊಂದು ಸಂದೇಶ ಅಥವಾ ಒಂದು ಖಾಸಗಿ ಸಂಭಾಷಣೆಯಂತಹ ಒಂದು ಮೌಖಿಕ ಬೋಧನೆಯಾಗಿತ್ತು ಎಂಬದೆ. **ನಮ್ಮಿಂದ ಎನೋ ಎಂಬಂತೆ** ಎಂಬುದು ಎಂಬುದು ಸಹ "ಸಂದೇಶ" ಎಂದಾಗಿಸುತ್ತದೆ. ಇದು ನಿಜವಾಗಿದ್ದಲ್ಲಿ, ಬಹುಶಃ ಈ ಸಿದ್ಧಾಂತವನ್ನು ಪ್ರತಿಪಾದಿಸುತ್ತಿದ್ದವರಲ್ಲಿ ಕೆಲವರು ತಾವು ಪೌಲನು ಥೆಸಲೋನಿಕದಲ್ಲಿದ್ದ ವೇಳೆ ಆತನೊಂದಿಗೆ ಮಾತಾಡಿದ್ದೇವೆಂದೂ ಆತನು ಪ್ರಶ್ನೆಯಲ್ಲಿರುವ ಈ ಸಿದ್ಧಾಂತವನ್ನು ಸಮರ್ಥಿಸಿದನೆಂದೂ ಹೇಳಿಕೊಳ್ಳುತ್ತಿದ್ದರೆಂದು ತೋರುತ್ತದೆ.

ಸುಳ್ಳು ಸಿದ್ಧಾಂತದ ಮೂರನೆಯ ಮೂಲವು "ಪೌಲನಿಂದ ಬಂದದ್ದೋ ಎಂಬಂತೆ" **ಒಂದು ಪತ್ರಿಕೆ**. ಇದು 1 ಥೆಸಲೋನಿಕದವರಿಗೆ ಪತ್ರಿಕೆಯನ್ನು ಸೂಚಿಸುವದಾಗಿದ್ದು, ಅದನ್ನು ಸುಳ್ಳು ಬೋಧಕರು ಅಪಾರ್ಥಮಾಡಿಕೊಂಡು ದುರುಪಯೋಗ ಮಾಡಿಕೊಂಡಿದ್ದರೆಂದು ಕೆಲವು ವ್ಯಾಖ್ಯಾನಕಾರರು ನಂಬುತ್ತಾರೆ. ಹೇಗೂ, ಪೌಲನು ಬಳಸಿದ ಭಾಷೆಯು ಅದನ್ನು ಹೊರಗಿಡುವಂತೆ ತೋರುತ್ತದೆ. ಆತನು ಯಾವ "ಪತ್ರಿಕೆ" ಬಗ್ಗೆ ಮಾತಾಡಿದ್ದರೂ ಅದು ಆತನ ಪತ್ರಿಕೆಯಾಗಿರಲಿಲ್ಲ. ಆದುದರಿಂದ, ಸುಳ್ಳು ಬೋಧಕರಲ್ಲಿ ಕೆಲವರು ತಮಗೊಂದು ಖಾಸಗಿ ಪತ್ರಿಕೆಯು ಬಂದಿರುತ್ತದೆಂದು, ಅದು ಅವರ ಪ್ರಕಾರ ಪೌಲನಿಂದ ಬಂದದ್ದೆಂದು ಹೇಳಿಕೊಳ್ಳುತ್ತಿದ್ದರೆಂದು ತೋರುತ್ತದೆ. ಈ ಸಿದ್ಧಾಂತಕ್ಕೂ ತನಗೂ ಯಾವದೇ ಸಂಬಂಧವು ಇರುವದನ್ನು ಪೌಲನು ನಿರಾಕರಿಸುತ್ತಾನೆ.

ಯಾವ ಸುಳ್ಳು ಸಿದ್ಧಾಂತವು ಪ್ರಶ್ನೆಯಲ್ಲಿತ್ತು? ಅದು **ಕರ್ತನ ದಿನವು ಈಗಲೇ ಬಂದಿದೆ** (ಹತ್ತಿರವಾಯಿತು) ಎಂದು ಹೇಳುವದಾಗಿರಬಹುದು. KJV ಯು "ಕರ್ತನ ದಿನವು ಸಮೀಪವಾಗಿದೆ" ಎಂದು ಹೇಳುತ್ತದೆ, ಆದರೆ NIV, RSV, NASB ಮತ್ತು ಇತರ ತರ್ಜುಮೆಗಳು "ಬಂದಿದೆ" ಎಂದು ಅನುವಾದಿಸಿರುವದು ಹೆಚ್ಚುಕಡಿಮೆ ನಿಖರವಾಗಿ ಸರಿಯಿರುತ್ತದೆ. ಇದನ್ನು ಸಮರ್ಥಿಸುವದಕ್ಕೆ ಹಲವಾರು ಕಾರಣಗಳಿರುತ್ತವೆ.

ಮೊದಲನೆಯದಾಗಿ, ಹೊಸ ಒಡಂಬಡಿಕೆಯಲ್ಲಿ ಕಾಣಿಸಿಕೊಳ್ಳುವ ಇತರ ಬಹುಪಾಲು ಕಾಣಿಸಿಕೊಳ್ಳುವಿಕೆಗಳಲ್ಲಿ ἐνίστημι (*enistēmi*) ಎಂಬ ಗ್ರೀಕ್ ಪದವನ್ನು ಈಗಾಗಲೆ ಇರುತ್ತದೋ ಎಂಬ ಅರ್ಥದಲ್ಲಿ ಅನುವಾದ ಮಾಡಲಾಗಿರುತ್ತದೆ (ರೋಮಾ 8:38; 1 ಕೊರಿಂಥ 3:22; 7:26; ಗಲಾತ್ಯ 1:4; 2 ತಿಮೊಥೆ 3:1; ಇಬ್ರಿಯ 9:9). ನಂತರ, ಕ್ರಿಸ್ತನ ಬರೋಣವು "ಹತ್ತಿರವಾಯಿತು" ಎಂಬುದನ್ನು ಪ್ರೇರಿತ ಬರಹಗಾರರು ನಿರಾಕರಿಸುವದಕ್ಕಿಂತಲೂ ಹೆಚ್ಚಾಗಿ ಅದನ್ನು ದೃಢಪಡಿಸಿ ಬರೆದಿರುತ್ತಾರೆ (ಫಿಲಿಪ್ಪಿ 4:5; ಯಾಕೋಬ 5:8).[4] ಆದುದರಿಂದ, ಅದು "ಹತ್ತಿರವಾಯಿತು" ಎಂದು ಹೇಳುವದರಿಂದ ಅದನ್ನು "ಸುಳ್ಳು" ಸಿದ್ಧಾಂತವಾಗಿಸುವದಿಲ್ಲ. ಮೂರನೆಯದಾಗಿ, ಪುನರುತ್ಥಾನವು-ಎರಡನೆಯ ಬರೋಣದಲ್ಲಿನ ಒಂದು ಅತ್ಯಂಥ ಮಹತ್ವವಾದ ಭಾಗ-ಈಗಾಗಲೇ ಸಂಭವಿಸಿರುತ್ತದೆ ಎಂಬ ಸುಳ್ಳು ಸಿದ್ಧಾಂತದ ಬಗ್ಗೆ ಶಾಸ್ತ್ರಗಳೊಳಗೆ ಬೇರೆ ಕಡೆಗಳಲ್ಲಿ ಪ್ರಸ್ತಾಪಿಸಲಾಗಿರುತ್ತದೆ. ಉದಾಹರಣೆಗೆ, 2 ತಿಮೊಥೆ 2:17, 18ರಲ್ಲಿ, ಹುಮೆನಾಯ ಮತ್ತು ಫಿಲೇತ ಎಂಬವರು ಈ ಸಿದ್ಧಾಂತವನ್ನು ಬೋಧಿಸುತ್ತಿದ್ದರೆಂದು ಹೇಳಲಾಗಿರುತ್ತದೆ.

ನಿಖರವಾಗಿ ಈ ಸುಳ್ಳು ಬೋಧಕರು ಹೇಗೆ ತಮ್ಮ ಸಿದ್ಧಾಂತವನ್ನು ಅಭಿವೃದ್ಧಿ ಪಡಿಸಿಕೊಂಡರೆಂಬುದು ವಿವರಿಸಲ್ಪಟ್ಟಿಲ್ಲ. ಕ್ರೈಸ್ತರಿಗಾಗುವ ಏಕೈಕ ಪುನರುತ್ಥಾನವು ಸಾಂಕೇತಿಕವಾಗಿದ್ದು ಅದು ದೀಕ್ಷಾಸ್ನಾನ ಮಾಡಿಸಿಕೊಳ್ಳುವ ವೇಳೆ ಸಂಭವಿಸುತ್ತದೆ ಎಂಬದಾಗಿ ಬೋಧಿಸುತ್ತಿದ್ದರೆಂದು ಕೆಲವರು ಊಹಿಸಿಕೊಳ್ಳುತ್ತಾರೆ. ಅವರು ಹೀಗೆ ಪುನರುತ್ಥಾನವು ಈಗಾಗಲೇ ಸಂಭವಿಸಿ ಬಿಟ್ಟಿದೆ ಎಂಬ ಮುಕ್ತಾಯಕ್ಕೆ ಬಂದಿದ್ದರು. ನಾವು ಪರಿವರ್ತನೆಗೊಳ್ಳುವಾಗ ಕರ್ತನು ನಮ್ಮೊಬ್ಬೊಬ್ಬರಿಗಾಗಿ ವೈಯಕ್ತಿಕವಾಗಿ "ಬರುತ್ತಾನೆ" ಎಂದು ಬೋಧಿಸುತ್ತಿರುವ ಸಾಧ್ಯತೆಯಿರುತ್ತದೆ, ಮತ್ತು ಆದಕಾರಣ ಅವರು ಇಲ್ಲಿ ಮತ್ತು ಬೇರೆ ವಾಕ್ಯಭಾಗಗಳಲ್ಲಿ ಶಾಸ್ತ್ರಗಳು ಬಣ್ಣಿಸುವಂಥ ಯಾವದೇ ಸಾರ್ವತ್ರಿಕವಾಗಿ

ಗೋಚರವಾಗುವ "ಬರೋಣ"ವನ್ನು ಅವರು ನಿರೀಕ್ಷಿಸದವರಾಗಿದ್ದರು (ನೋಡಿರಿ ಪ್ರಕಟನೆ 1:7).

ಆ ಸಿದ್ಧಾಂತವು ಯಾವ ಸ್ವಭಾವದ್ದಾಗಿದ್ದರೂ ಸರಿಯೇ, ಈ ಕ್ರೈಸ್ತರು ಅದಕ್ಕೆ ತಮ್ಮ ಮೇಲೆ ಪ್ರಭಾವ ಬೀರುವಂತೆ ಅನುಮತಿಸಬಾರದುಅಥವಾ ಅದು ತೋರಿಬರುವಂತೆಯೇ ಒಂದು ಸುಳ್ಳು ಸಿದ್ಧಾಂತವಾಗಿದ್ದರಿಂದ ಅದರಿಂದ ಅವರು ಚಂಚಲರಾಗಬಾರದು ಎಂಬುದು ಪೌಲನ ಬಯಕೆಯಾಗಿತ್ತು.

## ಆತನ ಬರೋಣಕ್ಕೆ ಮುಂಚೆ ಸಂಭವಿಸಬೇಕಾದ ಘಟನೆಗಳು **(2:3-12)**

**3ಯಾರೂ ಯಾವ ವಿಧದಲ್ಲಿಯೂ ನಿಮ್ಮನ್ನು ಮೋಸಗೊಳಿಸದಂತೆ ನೋಡಿಕೊಳ್ಳಿರಿ; ಯಾಕಂದರೆ ಮೊದಲು ಮತಭ್ರಷ್ಟತೆಯು ಉಂಟಾಗಿ ಅಧರ್ಮಸ್ವರೂಪನು ಬೈಲಿಗೆ ಬಂದ ಹೊರತು ಆ ದಿನವು ಬರುವದಿಲ್ಲ. 4ಯಾವದು ದೇವರೆನಿಸಿಕೊಳ್ಳುತ್ತದೋ ಯಾವದು ಪೂಜೆ ಹೊಂದುತ್ತದೋ ಅದನ್ನೆಲ್ಲಾ ನಾಶನಕ್ಕೆ ಅಧೀನನಾದ ಆ ಪುರುಷನು ಎದುರಿಸಿ ಅದಕ್ಕಿಂತ ಮೇಲಾಗಿ ತನ್ನನ್ನು ತಾನೇ ಹೆಚ್ಚಿಸಿಕೊಂಡು ತಾನು ದೇವರೆಂದು ಹೇಳಿಕೊಂಡು ದೇವರ ಗರ್ಭಗುಡಿಯಲ್ಲೇ ಕೂತುಕೊಳ್ಳುತ್ತಾನೆ. 5ನಾನು ನಿಮ್ಮ ಸಂಗಡ ಇದ್ದಾಗ ಈ ಸಂಗತಿಗಳನ್ನು ಹೇಳಿದ್ದು ಜ್ಞಾಪಕವಿಲ್ಲವೋ? 6ಇದಲ್ಲದೆ ಆ ಮನುಷ್ಯನು ನೇಮಕವಾದ ಸಮಯದಲ್ಲೇ ಹೊರತು ಬೈಲಿಗೆ ಬರುವದಕ್ಕೆ ಏನು ಅಡ್ಡಿಮಾಡುತ್ತದೋ ಅದು ನಿಮಗೆ ತಿಳಿದೇ ಇದೆ. 7ಅಧರ್ಮವು ಈಗಲೂ ಗುಪ್ತವಾಗಿ ತನ್ನ ಕಾರ್ಯವನ್ನು ಸಾಧಿಸುತ್ತದೆ; ಆದರೆ ಇದುವರೆಗೆ ಅಡ್ಡಿಮಾಡುವವನು ತೆಗೆದು ಬಿಡಲ್ಪಡುವ ತನಕ ಅದು ಗುಪ್ತವಾಗಿಯೇ ಇರುವದು. 8ಅವನು ತೆಗೆದುಬಿಡಲ್ಪಟ್ಟ ಕೂಡಲೆ ಆ ಅಧರ್ಮಸ್ವರೂಪನು ಕಾಣಬರುವನು; ಅವನನ್ನು ಯೇಸು ಕರ್ತನು ತನ್ನ ಬಾಯ ಉಸುರಿನಿಂದ ಕೊಲ್ಲುವನು, ತನ್ನ ಪ್ರತ್ಯಕ್ಷತೆಯ ಪ್ರಕಾಶದಿಂದ ಸಂಹರಿಸುವನು. 9ಅಧರ್ಮಸ್ವರೂಪನ ಪ್ರತ್ಯಕ್ಷತೆಯು ಸೈತಾನನ ಮಾಟಕ್ಕನುಗುಣವಾಗಿರುವದು. ಅದು ಮೋಸಗೊಳಿಸುವ ಸಕಲವಿಧವಾದ ಮಹತ್ಕಾರ್ಯ ಸೂಚಕಕಾರ್ಯ ಅದ್ಭುತಕಾರ್ಯ ಇವುಗಳಿಂದಲೂ ದುರ್ನೀತಿಯ ಎಲ್ಲಾ ವಂಚನೆಯಿಂದಲೂ ಕೂಡಿ ನಾಶನ ಮಾರ್ಗದಲ್ಲಿರುವವರಿಗೋಸ್ಕರ ಸಂಭವಿಸುವದು. 10ಅವರು ಸತ್ಯದ ಮೇಲೆ ಪ್ರೀತಿಯನ್ನಿಡದ ಕಾರಣದಿಂದ ರಕ್ಷಣೆಯನ್ನು ಹೊಂದದೆ ನಾಶವಾಗುತ್ತಾರೆ. 11ಅದೇ ಕಾರಣದಿಂದ ದೇವರು ಅಸತ್ಯನಡಿಸುವ ಭ್ರಮೆಯನ್ನು ಅವರಲ್ಲಿಗೆ ಕಳುಹಿಸಿ ಆ ಸುಳ್ಳನ್ನು ನಂಬುವದಕ್ಕೆ ಅವರನ್ನು ಬಿಡುತ್ತಾನೆ. 12ಸತ್ಯವನ್ನು ನಂಬದೆ ಅನೀತಿಯಲ್ಲಿ ಆನಂದಪಡುವವರೆಲ್ಲರೂ ಈ ಪ್ರಕಾರ ನ್ಯಾಯತೀರ್ಪಿಗೆ ಒಳಗಾಗುವರು.**

**ವಚನ 3.** ಕರ್ತನ ಬರೋಣವು ಈಗಾಗಲೆ ಬಂದದೆ ಎಂಬ ಯೋಚನೆಯು ಸುಳ್ಳು ಎಂಬುದನ್ನು ತೋರಿಸುವದಕ್ಕೆ, ಪೌಲನು ಆತನ ಬರೋಣಕ್ಕೆ ಮುಂಚೆ ಕೆಲವೊಂದು ಕಾರ್ಯಗಳು ಸಂಭವಿಸತಕ್ಕದ್ದು ಎಂಬದನ್ನು ವಿವರಿಸುವದಕ್ಕಾರಂಭಿಸುತ್ತಾನೆ. ಅವರು ಸ್ವಲ್ಪ ತಡೆದು ಆಲೋಚನೆಯನ್ನು ಮಾಡಿಕೊಳ್ಳುವದಾದರೆ, ಆತನು ಥೆಸಲೋನಿಕದಲ್ಲಿರುವ ವೇಳೆ ಅವರಿಗೆ ಇದನ್ನು ಹೇಳಿದ್ದನೆಂಬುದನ್ನು ಅವರು ಜ್ಞಾಪಿಸಿಕೊಳ್ಳುವರು (ನೋಡಿರಿ ವ.

5). ಯಾರೂ ತಮ್ಮನ್ನು **ಮೋಸಗೊಳಿಸುವಂತೆ** ಬಿಡಬಾರದಿತ್ತು. ಮೋಸಹೋಗುವದು ಎಂದರೆ ಬಹುಶಃ ಕುತಂತ್ರ ಅಥವಾ ವಂಚನೆಯ ಮೂಲಕ ದಾರಿತಪ್ಪಿಸಲ್ಪಡುವದು ಎಂದಾಗಿದೆ. ಅವರು **ಯಾವ ವಿಧದಲ್ಲಿಯೂ** ಇದನ್ನು ನಡೆಯುವಂತೆ ಬಿಡಬಾರದು ಎಂದು ಪೌಲನು ಹೇಳುತ್ತಾನೆ, ಅದು ಆತನಿಂದ ಬಂದಿದೆ ಎಂದು ಹೇಳಬಹುದಾದ ಪತ್ರಿಕೆಯಿರಬಹುದು (ವ. 2) ಅಥವಾ ಬೇರೆ ಯಾವ ರೀತಿಯಲ್ಲಾದರೂ ಸರಿಯೇ, ಅದಕ್ಕೆ ಅವಕಾಶ ಕೊಡಬಾರದಿತ್ತು. **ಮೊದಲು ಮತಭ್ರಷ್ಟತೆಯು ಉಂಟಾಗುವ . . . ಹೊರತು ಆ ದಿನವು** [ಕ್ರಿಸ್ತನು ಹಿಂದಿರುಗಿ ಬರುವ, ಕರ್ತನ ದಿನ] **ಬರುವದಿಲ್ಲ**. "ಮತಭ್ರಷ್ಟತೆ" (ἀποστασία, *apostasia*; "ಬಂಡಾಯ," NIV; "ಸ್ವಧರ್ಮ ತ್ಯಜಿಸುವಿಕೆ," KJV) ಧರ್ಮಚ್ಯುತಿ ಅಥವಾ ವಿರೋಧವನ್ನು ಸೂಚಿಸುತ್ತದೆ, ಅದು ದೇವರ ಮತ್ತು ಆತನ ಚಿತ್ತಕ್ಕೆ ವಿರುದ್ಧವಾಗಿರುವದು, ಮನುಷ್ಯರಿಗಾಗಿರುವ ಆತನ ಯೋಜನೆಯಿಂದ ಪಕ್ಕಕ್ಕೆ ಹೋಗುವದು ಅಥವಾ ಧರ್ಮಭ್ರಷ್ಟತೆ ಆಗಿರುವದು (ಮತ್ತಾಯ 7:15; ಅಪೊಸ್ತಲರ ಕೃತ್ಯಗಳು 20:28–31). "ಬಂಡಾಯ"ವು **ಅಧರ್ಮಸ್ವರೂಪನ** "ಬೈಲಿಗೆ ಬರುವಿಕೆ" ಅಥವಾ ತೋರ್ಪಡಿಸಿಕೊಳ್ಳುವಿಕೆಯ ಮುಖ್ಯಲಕ್ಷಣವನ್ನು ಹೊಂದಿರುತ್ತದೆ. "ಮನುಷ್ಯ"ನು ಅಧರ್ಮಸ್ವರೂಪ ಜನರ ವರ್ಗಕ್ಕೆ ಸೇರಿದವನು. ವಾಸ್ತವದಲ್ಲಿ, ಆತನು **ನಾಶನದ ಮಗನು** (ಅಧೀನನು) ಅಥವಾ ಅಕ್ಷರಶಃ "ವಿನಾಶದ ಮಗನು" (KJV). ಆತನು ನಾಶನಕ್ಕೆ "ಸೇರಿದವನು" ಅಥವಾ ನಾಶನದ "ಲಕ್ಷಣವನ್ನು ಹೊಂದಿರುತ್ತಾನೆ." ಆತನು ನಾಶನವಾಗುವದಕ್ಕೆ ನೇಮಿಸಲ್ಪಟ್ಟವನು. ὁ υἱὸς τῆς ἀπωλείας (*ho huios tēs apōleias*) ಎಂಬ ಮಾತು ಯೂದನನ್ನು ಬಣ್ಣಿಸುವದಕ್ಕೆ ಸಹ ಬಳಸಲ್ಪಟ್ಟಿದೆ (ಯೋಹಾನ 17:12), ಅದು ಈ ಸಂದರ್ಭದಲ್ಲಿ NASB ಯೊಳಗೆ "ನಾಶನದ ಮಗನು" ಎಂದು ಅನುವಾದಿಸಲ್ಪಟ್ಟಿದೆ. ಯೇಸು ಹೇಗೆ ನೀತಿಯ ವ್ಯಕ್ತಿಕರಣವಾಗಿರುತ್ತಾನೋ ಹಾಗೆಯೇ, ಈ ಮನುಷ್ಯನು ಪಾಪ ಅಥವಾ ಅಧರ್ಮತೆಯು ವ್ಯಕ್ತಿಕರಣವಾಗಿರುತ್ತಾನೆ.

"ಅಧರ್ಮಸ್ವರೂಪನು" ಎಂಬ ಪದಗುಚ್ಛದ ವಿಷಯದಲ್ಲಿ Bruce M. Metzger ಹೀಗೆ ಬರೆಯುತ್ತಾನೆ:

> ಬಹುಪಾಲು ಸಾಕ್ಷಿಗಳಲ್ಲಿ ಬರೆಲ್ಪಟ್ಟಿರುವ ಪ್ರಕಾರ, ಅಪೊಸ್ತಲನು "ಪಾಪದ ಮನುಷ್ಯನು" ಎಂದು ಬರೆದನೋ, ಅಥವಾ ℵ, B, 81, 88mg, 1739, cop, sa, bo arm Marcion Tertullian ಮತ್ತು ಇತರರು ಪ್ರಮಾಣಿಕರಿಸುವ ಪ್ರಕಾರ "ಅಧರ್ಮಸ್ವರೂಪನು" ಎಂದು ಬರೆದನೋ? ἁμαρτίας [*hamartias*] (ಮೂರು ವಿಧವಾದ ಸಾಕ್ಷಿಗಳಿಂದ: A; D G it vg; K L P ಬಹುಪಾಲು ಸಣ್ಣಕ್ಷರದ ಮೋಡಿ ಪ್ರತಿಗಳು) ಎಂಬುದರ ಪರವಾಗಿ ಬಾಹ್ಯ ಆಧಾರಗಳಿದ್ದಾಗ್ಯೂ, ಒಟ್ಟಾತೆಯಲ್ಲಿ ಅಲೆಗ್ಜಾಂಡ್ರಿಯಾದ ಸಾಕ್ಷಿಗಳು ἀνομίας [*anomias*] ಎಂಬ ಮೂಲ ವಾಚನವನ್ನು ಸಂರಕ್ಷಿಸಿದರೆಂದು ಕಂಡು ಬರುತ್ತದೆ, ಅದು ಪೌಲನಿಂದ ವಿರಳವಾಗಿ ಬಳಸಲ್ಪಟ್ಟಿರುವ ಪದವಾಗಿದ್ದು ನಕಲುಗಾರರು ಅದನ್ನು ಹೆಚ್ಚು ಆಗಾಗ್ಗೆ ಬಳಸಲ್ಪಡುವ ἁμαρτίας ಎಂಬದಾಗಿ ಬದಲಾವಣೆ ಮಾಡಿದರು. ಅಷ್ಟುಮಾತ್ರವಲ್ಲದೆ, 7ನೇ ವಚನದಲ್ಲಿರುವ γὰρ . . . ἀνομίας . . . ಎಂಬುದು ἀνομίας ಪದ ಬಳಕೆಯ ಪೂರ್ವಕಲ್ಪನೆ ಮಾಡುತ್ತದೆ.[5]

ಆದುದರಿಂದ, ಪೌಲನು ಬಹುಶಃ "ಪಾಪದ ಮನುಷ್ಯ" ಎಂದಲ್ಲ, "ಅಧರ್ಮಸ್ವರೂಪನು" ಎಂದು ಬರೆದನು.

ಪೌಲನು "ಮತಭ್ರಷ್ಟತೆ"ಯನ್ನು ನಿರ್ದಿಷ್ಟ ಗುಣವಾಚಿಯಿಂದ ಉಲ್ಲೇಖಿಸುವ ಮೂಲಕ, ಆತನು ಥೆಸಲೋನಿಕದವರಿಗೆ ಈ ಮುಂಚೆಯೇ ತಿಳಿಸಿದ್ದ ಯಾವದೋ ಒಂದರ ಬಗ್ಗೆ ಬರೆಯುತ್ತಿದ್ದಾನೆಂಬುದು ಸ್ಪಷ್ಟವಾಗಿರುತ್ತದೆ. ದುರಾದೃಷ್ಟಕರವಾಗಿ, ಆತನು ಅವರಿಗೆ ಏನು ಹೇಳಿದ್ದನೆಂಬುದರ ಮಾಹಿತಿ ನಮಗಿರುವದಿಲ್ಲ, ಆದ್ದರಿಂದ ಆತನ ಮಾತಿನ ತಾತ್ಪರ್ಯವು ಏನಾಗಿತ್ತೆಂಬುದನ್ನು ಅರ್ಥಮಾಡಿಕೊಳ್ಳುವದು ಹೆಚ್ಚು ಕಠಿಣವಾಗಿರುತ್ತದೆ. ಈ ಚೆನ್ನಾಗಿ ಪರಿಚಿತವಿರುವ ಬಂಡಾಯವು ಕ್ರಿಸ್ತನು ಹಿಂದಿರುಗಿ ಬರುವ ಮುನ್ನ ಸಂಭವಿಸುವದು. ಇದು ಸಂಭವಿಸುವಾಗ ಕ್ರಿಸ್ತನು ತನ್ನ ಬರೋಣದ ವೇಳೆ ಬಯಲುಗೊಳ್ಳುವ ಪ್ರಕಾರವೇ, ಈ "ಮನುಷ್ಯನು" **ಬೈಲಿಗೆ ಬರುವನು.**

**ವಚನ 4.** ಪೌಲನು ಬಂಡಾಯದ ಕುರಿತ ಇತರ ವಾಸ್ತವಾಂಶಗಳನ್ನು ಮುಂದುವರೆಸುತ್ತಾನೆ. ಈ "ಮನುಷ್ಯನು" **ಯಾವದು ದೇವರೆನಿಸಿಕೊಳ್ಳುತ್ತದೋ ಪೂಜೆ ಹೊಂದುತ್ತದೋ ಅದಕ್ಕಿಂತ ಮೇಲಾಗಿ ತನ್ನನ್ನು ತಾನೇ ಹೆಚ್ಚಿಸಿಕೊಳ್ಳುವನು.** ಈ "ಮನುಷ್ಯನು" ದೇವರ ಬದಲಾಗಿ ತನ್ನನ್ನು **ಹೆಚ್ಚಿಸಿಕೊಳ್ಳುವವನಾಗಿ,** ಸಕ್ರಿಯವಾದ ರೀತಿಯಲ್ಲಿ ದೇವರನ್ನು ಮತ್ತು ದೇವರ ಮಾರ್ಗವನ್ನು ಎದುರಿಸುವನು. ಆರಾಧನೆಯು ದೇವರಿಗೆ ಸಲ್ಲುವಂತೆ ಬಿಡುವ ಬದಲಾಗಿ ಆತನು ತನಗೆ ಆರಾಧನೆಯ ಸಲ್ಲಬೇಕೆಂದು ಬಯಸುವನು. ಅಷ್ಟುಮಾತ್ರವಲ್ಲದೆ, ಆತನು **ದೇವರೆಂದು ಹೇಳಿಕೊಂಡು ದೇವರ ಗರ್ಭಗುಡಿಯಲ್ಲೇ ಕೂತುಕೊಳ್ಳುತ್ತಾನೆ.** "ಗರ್ಭಗುಡಿ" (ದೇವಾಲಯ) ಎಂಬುದಕ್ಕೆ ಬಳಸಲ್ಪಟ್ಟಿರುವ ಗ್ರೀಕ್ ಪದವು ἱερόν (*hieron*) ಎಂಬುದಲ್ಲ, ಅದು ಅಂಗಳಗಳನ್ನೊಳಗೊಂಡ ದೇವಾಲಯದ ಇಡೀ ಕ್ರೇತ್ರವನ್ನು ಬಣ್ಣಿಸುತ್ತದೆ; ಬದಲಾಗಿ, ಅದು ναός (*naos*) ಎಂಬ ಪದವಾಗಿದೆ. Naos "ಗರ್ಭಗುಡಿ, ದೇವಾಲಯದ ಸಮುಚ್ಚಯದಲ್ಲಿನ ಅತಿ ಪರಿಶುದ್ಧ ಭಾಗ, ದೇವತ್ವವು ವಾಸಿಸುವ ಸ್ಥಳ" ಆಗಿರುತ್ತದೆ.[6] ಹೇಗೂ, "ದೇವಾಲಯ" ಎಂಬುದು ಇಲ್ಲಿ ದುರಾಕ್ರಮಣಕ್ಕೊಳಗಾಗುವ ಸಾಂಕೇತಿಕ ಅರ್ಥವಿರಬಹುದಾಗಿದೆ. ಅಂದರೆ, "ಮನುಷ್ಯನು" ಆತ್ಮೀಕ ದೇವಾಲಯವಾದ ಸಭೆಯಲ್ಲಿ ದೇವರ ಸ್ಥಾನವನ್ನು ತೆಗೆದುಕೊಳ್ಳಲು ಬಯಸುತ್ತಾನೆಂದಾಗಿರಬಹುದು. "ಕೂತುಕೊಳ್ಳುತ್ತಾನೆ" ಮತ್ತು ತಾನು "ದೇವರೆಂದು ಹೇಳಿಕೊಂಡು" ಎಂಬದು ಒಂದು ಅಧಿಕೃತವಾಗಿ ಪ್ರತಿಷ್ಠಾಪಿಸಲ್ಪಡುವಿಕೆಯ ಸ್ವಾಧವನ್ನು ನೀಡುತ್ತದೆ.

ಹಾಗಾದರೆ ಈ "ಅಧರ್ಮಸ್ವರೂಪನು" ಯಾರು? ಇದು Presbyterian Albert Barnesನು ನಂಬಿದ ಪ್ರಕಾರ, *ಒಟ್ಟಾರೆಯಾದ ಪೋಪ್ ಗಳ ವರ್ಗವನ್ನು ಸೂಚಿಸುತ್ತದೋ?*[7] ಆತನು ಪೋಪ್ ಗಳು "ಮಾಡದೆ ಬಿಟ್ಟಿರುವ ಪಾಪಗಳೇ ಇಲ್ಲ" ಎಂಬುದಕ್ಕೆ ಆತನು ಸಾಕಷ್ಟು ಪುರಾವೆ ನೀಡುತ್ತಾನೆ. ಅಷ್ಟುಮಾತ್ರವಲ್ಲದೆ, ಅವರು ಧರಿಸಿರುವ "Vicar of Christ" (ಅಥವಾ "ಕ್ರಿಸ್ತನ ಸ್ಥಾನದಲ್ಲಿ ಇರುವವನು") ಮತ್ತು "ನಮ್ಮ ಕರ್ತನಾದ ದೇವರು ಪೋಪ್," ಬಿರುದುಗಳು, ಜೊತೆಗೆ ಅವರು ತಾತ್ಕಾಲಿಕ ಪ್ರಭುಗಳ ಮೇಲೆ ತಮಗೆ ಅಧಿಕಾರವಿದೆಯೆಂದು ಅವರು ಹೇಳಿಕೊಳ್ಳುವಂತದ್ದು ಈ ಯೋಚನೆಯನ್ನು

ಆಕರ್ಷಕಗೊಳಿಸುತ್ತದೆ.[8]

ಹೇಗೂ, ಪೋಪ್‌ಗಳಲ್ಲಿ "ಅಧರ್ಮಸ್ವರೂಪ ನುಷ್ಯನು" ಹುದುಗಿರುತ್ತಾನೆಂಬುದು ಸಂಶಯಕರವಾಗಿದೆ. ಪೋಪಾಧಿಪತ್ಯವು ತಾನು ದೋಷಾತೀತವೆಂದು ಹೇಳಿಕೊಳ್ಳುತ್ತದೆ. ಪೌಲನು ನೀಡಿದ "ಮನುಷ್ಯನ" ಚಿತ್ರಣದಲ್ಲಿರುವಂತೆ, ಸಂಪೂರ್ಣ ಅಧರ್ಮತೆ ಮತ್ತು ಕೆಟ್ಟತನವು ಅವರ ವೈಶಿಷ್ಟ್ಯತೆಯಾಗಿರುವದಿಲ್ಲ. ಅಷ್ಟುಮಾತ್ರವಲ್ಲದೆ, ಪೌಲನು ಕ್ರಿಸ್ತನ ಎರನೆಯ ಬರೋಣಕ್ಕೆ ಸ್ವಲ್ಪ ಕಾಲದ ಮುಂಚೆ ಪರಾಕಾಷ್ಠೆಗೆ ಬರುವ ದುಷ್ಟತನದ ಬಗ್ಗೆ ಮಾತಾಡುವಂತೆ ಕಾಣಿಸುತ್ತದೆ. ಆಗ ಆತನು ಕ್ರಿಸ್ತನ ಬರುವಿಕೆಯಿಂದ ನಾಶಗೊಳಿಸಲ್ಪಡುವನು (ವಚನಗಳು 8-10). ಪೋಪ್‌ಗಳ ಅಧಿಕಾರದ ಪರಾಕಾಷ್ಠತೆಯು ಮಧ್ಯ ಯುಗಗಳಲ್ಲಿ ಬಂದಿತ್ತು.

ಇನ್ನು ಕೆಲವರು "ಅಧರ್ಮಸ್ವರೂಪನನ್ನು" *ಒಟ್ಟಾರೆಯಾದ ರೋಮನ್ ಚಕ್ರವರ್ತಿಗಳ ವರ್ಗಕ್ಕೆ ಹೋಲಿಸುತ್ತಾರೆ.* ವಾಸ್ತವಾಂಶದಲ್ಲಿ, ಚಕ್ರವರ್ತಿಗಳು ತಮ್ಮನ್ನು ದೇವರೆಂದು ಹೇಳಿಕೊಂಡರು ಮತ್ತು ಅವರಲ್ಲಿ ಅನೇಕರು ಕ್ರಿ.ಶ. ಪ್ರಥಮ ಶತಮಾನದಿಂದ ಆರಂಭಗೊಂಡು ತಮ್ಮನ್ನು ಆರಾಧಿಸಬೇಕೆಂದು ಬೇಡಿಕೆ ಇಟ್ಟರು. ಕ್ರಿ.ಶ. 64ರಿಂದ, ನಿರೋ ಚಕ್ರವರ್ತಿಯ ಆಳ್ವಿಕೆಯ ವೇಳೆ, ಅವರು ಕ್ರೈಸ್ತತ್ವವನ್ನು ಹಿಂಸಿಸಿದರು ಅಥವಾ "ವಿರೋಧ" ಮಾಡಿದರು. Caligula (ಕ್ರಿ.ಶ. 12-41) ಎಂಬ ಒಬ್ಬ ಚಕ್ರವರ್ತಿಯು, ಯೆರೂಸಲೇಮಿನ ದೇವಾಲಯದ ಒಳಗೆ ತನ್ನ ಪ್ರತಿಮೆಯನ್ನು ಸ್ಥಾಪಿಸುವ ಮೂಲಕ ಅದನ್ನು ಅಪವಿತ್ರಗೊಳಿಸುವದಕ್ಕೆ ಸಹ ಪ್ರಯತ್ನವನ್ನು ಮಾಡಿದ್ದನು. ಪೌಲನು ಬಣ್ಣಿಸಿದ್ದು ಇದೇ ರೀತಿಯ ಕಾರ್ಯವನ್ನೇ ಆಗಿದೆಯಾದರೂ, ಆತನು ಅದನ್ನೇ ಸೂಚಿಸಿ ಹೇಳುತ್ತಿದ್ದನೆಂಬದು ಅಸಾಧ್ಯವಾದದ್ದು. ಪೌಲನು ಭವಿಷ್ಯವನ್ನು ಸೂಚಿಸಿ ಹೇಳುತ್ತಿದ್ದಾನೆ, ಚಕ್ರವರ್ತಿಯನ್ನು ಆರಾಧಿಸುವಂತೆ ಮಾಡಬೇಕೆಂಬ Caligulaನು ಮಾಡಿದ ಪ್ರಯತ್ನವು ಪೌಲನು 2 ಥೆಸಲೋನಿಕದವರಿಗೆ ಪತ್ರಿಕೆಯನ್ನು ಬರೆಯುವದಕ್ಕೆ ಮುಂಚೆಯೇ ಸಂಭವಿಸಿತ್ತು.

ಅಲ್ಲದೆ, ರೋಮನ್ ಸಾಮ್ರಾಜ್ಯವು, ಎಲ್ಲಾ ಸಂಭಾವ್ಯ ಕಾರಣಗಳಿಗಾಗಿ ಕ್ರಿ.ಶ. 5ನೇ ಶತಮಾನದ ಕಡೇ ಭಾಗದ ಹೊತ್ತಿಗೆ ಸಂಪೂರ್ಣ ನಾಶಗೊಂಡಿತು; ಮತ್ತು ಪೌಲನು ಕ್ರಿಸ್ತನ ಬರೋಣಕ್ಕೆ ಸ್ವಲ್ಪ ಮುಂದೆ ಪರಾಕಾಷ್ಠೆಯನ್ನು ತಲುಪುವ ಅಧಿಕಾರವನ್ನು ಕುರಿತು ಮಾತಾಡುತ್ತಿದ್ದಾನೆ. ಆತನು ಹೇಗೆ ಚಕ್ರವರ್ತಿಗಳನ್ನು ಮನಸ್ಸಿನಲ್ಲಿಟ್ಟುಕೊಂಡು ಹೇಳಿರುವದಕ್ಕೆ ಸಾಧ್ಯ? "ಅಧರ್ಮಸ್ವರೂಪ"ನು ಕ್ರಿಸ್ತನ ಬರೋಣದ ವೇಳೆ ಇರಬೇಕಾದವನು ಮತ್ತು ಆತನಿಂದ ನಾಶಗೊಳಿಸಲ್ಪಡತಕ್ಕವನು (ವಚನಗಳು 8-10).

ಇನ್ನೊಂದು ಊಹೆ ಏನೆಂದರೆ, "ಅಧರ್ಮಸ್ವರೂಪನು" *ಸ್ವತಃ ಸೈತಾನನೇ ಎಂಬದು.* "ಸೈತಾನ" ಎಂಬ ಪದದ ಅರ್ಥವು "ವಿರೋಧಿ," ಮತ್ತು ಈ "ಮನುಷ್ಯನು" ದೇವರನ್ನು ಮತ್ತು ಆತನ ಮಾರ್ಗವನ್ನು "ಎದುರಿಸುತ್ತಾನೆ" ಎಂದು 4ನೇ ವಚನವು ಹೇಳುತ್ತದೆ. ಈ ನಿಲುವು ಹೊಂದಿರುವ ಕೆಲವರು ಹೇಳುವದೇನೆಂದರೆ ಸೈತಾನನು ಲೋಕಾಂತ್ಯದ ಮುಂಚೆ ನರಾವತಾರವೆತ್ತುವನು ಮತ್ತು ಮಹಾ ಯುದ್ಧಕ್ಕಾಗಿ ತನ್ನ ಕೆಲಸಗಾರರನ್ನು ಶೇಖರಿಸಿಕೊಳ್ಳುವನು ಎಂಬದೆ. ಈ ಯೋಚನೆಯು ಆಕರ್ಷಣೆಯುಳ್ಳದ್ದು, ವಿಶೇಷವಾಗಿ ಇಲ್ಲಿ ನೀಡಲಾಗಿರುವ ಅನೇಕ ವರ್ಣನೆಗಳು ಸೈತಾನನ ಕುರಿತು ಬೇರೆ ವಾಕ್ಯಭಾಗಗಳಲ್ಲಿ

ನೀಡಲಾಗಿರುವ ವರ್ಣನೆಗಳೊಂದಿಗೆ ಹೋಲಿಕೆಯಾಗುತ್ತವೆ. ಖಂಡಿತವಾಗಿಯೂ ಕ್ರಿಸ್ತನು ಸೈತಾನನನ್ನು ತನ್ನ ಬರೋಣದ ವೇಳೆ ನಾಶಗೊಳಿಸುವನು (ಪ್ರಕಟನೆ 20:10). ಹೇಗೂ, ಈ ಊಹೆಗೆ ಒಂದು ಕಠಿಣವಾದ ಅಡ್ಡಿಯು 9ನೇ ವಚನದಲ್ಲಿ ಸಿಕ್ಕುತ್ತದೆ, ಅಲ್ಲಿ ಪೌಲನು "ಅಧರ್ಮಸ್ವರೂಪನ ಪ್ರತ್ಯಕ್ಷತೆಯು ಸೈತಾನನ ಮಾಟಕ್ಕನುಗುಣವಾಗಿ ಇರುವದು" ಎಂಬದಾಗಿ ಪೌಲನು ಹೇಳುತ್ತಾನೆ. ಆದುದರಿಂದ, ಆತನು ಸ್ವತಃ ಸೈತಾನನೇ ಆಗಿರುವದಿಲ್ಲ ಎಂಬುದು ಅನಿವಾರ್ಯವಾಗುತ್ತದೆ; ಬದಲಾಗಿ, ಆತನು ಸೈತಾನನಿಗೆ ಸಮನಾಗಿ ಆತನ ದಾರಿಯಲ್ಲಿ ಕೆಲಸ ಮಾಡುವವನು ಆಗಿರುವನು.

ಇನ್ನೂ ಒಂದು ಊಹೆಯೇನೆಂದರೆ "ಅಧರ್ಮಸ್ವರೂಪನು" ಕೆಲವು ಸಾರಿ ಕೆಟ್ಟತನವು ವ್ಯಕ್ತಿಕರಣಗೊಳಿಸಲ್ಪಡುವ ಅರ್ಥದಲ್ಲಿ ಕೇವಲ "ಮನುಷ್ಯನು" ಅಷ್ಟೇ. ಈ ಯೋಚನೆಯ ಪ್ರಕಾರವಾಗಿ "ಅಧರ್ಮಸ್ವರೂಪನು" *ಕೆಟ್ಟತನದ ವ್ಯಕ್ತಿಕರಣವಾಗಿರುವನು.* ಇಲ್ಲಿರುವ ವಿಚಾರವೇನೆಂದರೆ ಕ್ರೈಸ್ತ ಯುಗದ ಕಡೇ ಭಾಗದಲ್ಲಿ, ಪೌಲನ ಕಾಲದ ನಂತರ-ಅನಂತರದಲ್ಲಿ ಎಷ್ಟು ಕಾಲದ ವರೆಗೆ ಎಂದು ಆತನು ಹೇಳಲಿಲ್ಲ-ಕೆಟ್ಟತನವು ಅತ್ಯಂಥ ತೀವ್ರವಾಗಿ ಅಧಿಕಗೊಳ್ಳಲಿತ್ತು (1 ತಿಮೊಥೆ 4:1-3; 2 ತಿಮೊಥೆ 3:13; 4:3 ರೊಂದಿಗೆ ಹೋಲಿಸಿರಿ). ಲೋಕಾಂತ್ಯದ ಹತ್ತಿರದಲ್ಲಿ, ದೇವರ ಎಲ್ಲಾ ಆರಾಧಿಸುವಿಕೆಯನ್ನು ದುಷ್ಟಶಕ್ತಿಗಳು ಹತ್ತಿಕ್ಕುವದಕ್ಕೆ ಪ್ರಯತ್ನಿಸುವವು.

ಈ ದುಷ್ಟಶಕ್ತಿಗಳೊಳಗೆ ಸುಳ್ಳು ಧರ್ಮಗಳು, ನಾಸ್ತಿಕ ಶಕ್ತಿಗಳು, ಮತ್ತು ಅದೇ ರೀತಿಯ ಎಲ್ಲಾ ಶಕ್ತಿಗಳು ಸೇರಿರುತ್ತವೆ. ಇವುಗಳನ್ನು ವ್ಯಕ್ತಿಕರಣಗೊಳಿಸಿ "ಅಧರ್ಮಸ್ವರೂಪನು" ಎಂದು ಕರೆಯಲಾಗಿರುತ್ತದೆ. ಹಾಗಾದರೆ, ಈ "ಮನುಷ್ಯನು" ಯುದ್ಧವನ್ನು ಗೆದ್ದುಬಿಟ್ಟನೆಂದು ತೋರುವಾಗ (ಲೂಕ 18:8 ರೊಂದಿಗೆ ಹೋಲಿಸಿರಿ), ಕ್ರಿಸ್ತನು ಬರುವನು ಮತ್ತು ತನ್ನ ಪ್ರತ್ಯಕ್ಷತೆಯ ಪ್ರಕಾಶದಿಂದ ಇವನನ್ನು ಸಂಹರಿಸುವನು.

ಈ ಅಭಿಪ್ರಾಯವು ಬೇರೆ ಎಲ್ಲವುಗಳಿಗಿಂತಲೂ ಉತ್ತಮವಾಗಿ ಸರಿಹೊಂದುವಂತೆ ತೋರುತ್ತದೆ, ಆದರೆ ಯಾವದೇ ಅಭಿಪ್ರಾಯವನ್ನು ಪರಿಶೀಲನೆಯಲ್ಲಿರುವವುಗಳೆಂದು ಪರಿಗಣಿಸಲ್ಪಡತಕ್ಕದ್ದು.

ಕಡೇ ಅಭಿಪ್ರಾಯವು ಸೇರಿದಂತೆ ಪಟ್ಟಿ ಮಾಡಿರುವ ಕೆಲವು ಅಭಿಪ್ರಾಯಗಳು ಯೋಚಿಸುವದೇನೆಂದರೆ, "ಅಧರ್ಮಸ್ವರೂಪನು" 1 ಯೋಹಾನ 2:18ರಲ್ಲಿ ಹೇಳಲಾಗಿರುವ "ಕ್ರಿಸ್ತವಿರೋಧಿ"ಯೊಂದಿಗೆ ಹೋಲಿಕೆಯಾಗುತ್ತಾನೆಂದು ಭಾವಿಸುತ್ತವೆ. ಜಾಗರೂಕವಾಗಿ ಅಧ್ಯಯನ ಮಾಡಿದರೆ ತೋರಿ ಬರುವದೇನೆಂದರೆ ಯೋಹಾನನು, ಕ್ರಿಸ್ತವಿರೋಧಿಯನ್ನು ಬಣ್ಣಿಸುತ್ತಾ, ಕೆಟ್ಟತನವನ್ನು, ವಿಶೇಷವಾಗಿ ಕ್ರಿಸ್ತನು ಶರೀರಧಾರಿಯಾಗಿ ಬಂದನೆಂಬುದನ್ನು ನಿರಾಕರಿಸುತ್ತಿದ್ದ ಸುಳ್ಳು ಬೋಧಕರಲ್ಲಿ ಕಾರ್ಯಮಾಡುತ್ತಿದ್ದ ದುಷ್ಟತನವನ್ನು, ವ್ಯಕ್ತಿಕರಣಗೊಳಿಸುತ್ತಿದ್ದಾನೆಂಬದೆ (1 ಯೋಹಾನ 4:1-3). ಆತನು "ಅನೇಕ ಕ್ರಿಸ್ತವಿರೋಧಿಗಳು" ಎಂದು ಹೇಳಿದ್ದರ ನಿಮಿತ್ತ ಇದು ಸ್ಪಷ್ಟವಾಗಿ ತೋರಿಬರುತ್ತದೆ (1 ಯೋಹಾನ 2:18).

**ವಚನ 5.** ವಾಸ್ತವಿಕವೆಂದರೆ, ಆತನು ಅವರಿಗೆ **ಈ ಸಂಗತಿಗಳನ್ನು ಹೇಳಿದ್ದು ಜ್ಞಾಪಕವಿರಬೇಕಿತ್ತು.** "ಹೇಳಿದ್ದು" ಎಂಬುದರ ಅನುವಾದಿತ ಗ್ರೀಕ್ ಪದ λέγω (*legō*)

ಎಂಬುದು ಅಸಂಪೂರ್ಣ ಕಾಲರೂಪವಾಗಿದ್ದು ಪುನರಾವರ್ತಿತ ಕ್ರಿಯೆಯನ್ನು ಸೂಚಿಸುತ್ತದೆ.

ಎರಡನೆಯ ಬರೋಣವು ಇನ್ನೂ ಸಂಭವಿಸಿರುವದಕ್ಕೆ ಸಾಧ್ಯವಿಲ್ಲವೆಂಬುದನ್ನು ಥೆಸಲೋನಿಕದವರು ತಿಳಿದಿರಬೇಕಿತ್ತು. ಎರಡನೆಯ ಬರೋಣಕ್ಕೆ ಮುಂಚೆ ಇದೆಲ್ಲವೂ ಸಂಭವಿಸುವದು ಅಗತ್ಯವೆರಂದು ಪೌಲನು ಅವರಿಗೆ ಹೇಳಿದ್ದನ್ನು ಅವರು ಜ್ಞಾಪಕದಲ್ಲಿಟ್ಟುಕೊಂಡಿರಬೇಕಿತ್ತು. "ಅಧರ್ಮಸ್ವರೂಪನು" ಇನ್ನೂ ತನ್ನನ್ನು ಬಯಲುಪಡಿಸಿಕೊಂಡಿರಲು ಸಾಧ್ಯವಿರಲಿಲ್ಲ ಯಾಕೆಂದರೆ ಆತನಿಗೆ ಏನೋ ಒಂದು "ತಡೆಯುತ್ತಿತ್ತು" (ವ. 6; NIV).

**ವಚನ 6.** "ಆ ಮನುಷ್ಯನು" ಎಂಬುದು "ಅಧರ್ಮಸ್ವರೂಪ"ನನ್ನು ಸೂಚಿಸುತ್ತದೆ (ವಚನಗಳು 3, 4), ಮತ್ತು ಆತನಿಗೆ **ಏನು ಅಡ್ಡಿಮಾಡುತ್ತದೋ ಅದು** ಥೆಸಲೋನಿಕದ ವರಿಗೆ ಗೊತ್ತಿತ್ತು, ಯಾಕೆಂದರೆ ಪೌಲನು ಅವರ ಮಧ್ಯದಲ್ಲಿದ್ದ ವೇಳೆ ಅವರಿಗೆ ತಿಳಿಸಿದ್ದನು. ಪೌಲನು ಈ ಪತ್ರಿಕೆಯನ್ನು ಬರೆಯುವ ಸಮಯದಲ್ಲಿ, ಆಗಲೂ ಯಾವದೋ ಒಂದು "ಈ ಮನುಷ್ಯನು" ಬೈಲಿಗೆ ಬರದಂತೆ ಅಡ್ಡಿಮಾಡುತ್ತಿತ್ತು. ಇಲ್ಲಿ "ಏನು" ಎಂಬುದು ನಿರಾಕಾರ ಆಗಿರುತ್ತದೆ, ಆದರೆ ಆತನನ್ನು ಅಡ್ಡಿಮಾಡುವಂತದ್ದು 7ನೇ ವಚನದಲ್ಲಿ "ಅವನು" ಎಂದು ಬಣ್ಣಿಸಲ್ಪಟ್ಟಿದೆ, ಅದು ವ್ಯಕ್ತಿರೂಪವಾಗಿದೆ. ಅಡ್ಡಿಪಡಿಸುವ ಶಕ್ತಿಯನ್ನು ಸೂಚಿಸುವ ಎರಡೂ ರೀತಿಗಳು ಸರಿಯಾದವುಗಳೇ. "ಆತನಿಗೆ ಅಡ್ಡಿ ಮಾಡುವದು" ಯಾರು ಅಥವಾ ಯಾವದು? ವಿವಿಧ ಊಹೆಗಳನ್ನು ಮುಂದಿಡಲಾಗಿರುತ್ತದೆ.

ಮೊದಲನೆಯದಾಗಿ, ಅಡ್ಡಿ ಪಡಿಸುವ ಶಕ್ತಿಯು ಇನ್ನೊಬ್ಬ ಚಕ್ರವರ್ತಿಯೆಂದು ಕೆಲವರು ಹೇಳುತ್ತಾರೆ. ಈ ನಿಲುವು ಹೊಂದಿರುವವರು ಯಾರೆಂದರೆ ಚಕ್ರವರ್ತಿಗಳು "ಅಧರ್ಮಸ್ವರೂಪ" ಮನುಷ್ಯರು ಎಂದು ನಂಬುವವರೇ ಆಗಿದ್ದಾರೆ. ಈ ಊಹೆಯು ಸರಿಯಾಗಿರಲಾರದು ಯಾಕೆಂದರೆ "ಮನುಷ್ಯನು" ಇನ್ನೂ ಪೂರ್ಣವಾಗಿ ಬಯಲಿಗೆ ಬಂದವನಲ್ಲ ಎಂಬುದು ಸ್ಪಷ್ಟವಾಗಿರುತ್ತದೆ, ಮತ್ತು ಆತನನ್ನು ಬಯಲಿಗೆ ಬರದಂತೆ ಅಡ್ಡಿ ಮಾಡುವದಕ್ಕೆ ಯಾವ ಚಕ್ರವರ್ತಿಯೂ ಇರುವದಿಲ್ಲ (ಸಾಮ್ರಾಜ್ಯವು ಹದಿನೈದು ಶತಮಾಣಗಳಷ್ಟು ಮುಂಚೆಯೇ ಬಿದ್ದು ಹೋಗಿರುತ್ತದೆ). ಎರಡನೆಯದಾಗಿ, ಅದು ಸ್ವತಃ ಸಾಮ್ರಾಜ್ಯವೇ ಎಂದು ಇನ್ನು ಕೆಲವರು ಹೆಳುತ್ತಾರೆ. ಹೀಗೆ ನಂಬುವವರು ಯಾರೆಂದರೆ "ಮನುಷ್ಯನು" ಎಂಬುದು ಪೋಪ್ ಸ್ಥಾನದಲ್ಲಿರುವವರೇ ಎಂದು ಯೋಚಿಸುವವರಾಗಿದ್ದಾರೆ. ಈ ಅಭಿಪ್ರಾಯವು ಸಹ ಅದೇ ಕಾರಣಕ್ಕಾಗಿಯೇ ಅಸಾಧ್ಯವಾಗಿರುತ್ತದೆ: ಈಗ ಸಾಮ್ರಾಜ್ಯವು ಅಸ್ತಿತ್ವದಲ್ಲಿರುವದಿಲ್ಲ, ಆದರೆ "ಮನುಷ್ಯನು" ಇನ್ನೂ ಪೂರ್ಣವಾಗಿ ಬಯಲಿಗೆ ಬಂದಿರುವದಿಲ್ಲ. ಮೂರನೆಯದಾಗಿ, ಅದು ಪವಿತ್ರಾತ್ಮನು ಎಂದು ಕೆಲವರು ಹೇಳುತ್ತಾರೆ. ಇವರು ಈ "ಮನುಷ್ಯನು" ಸೈತಾನನೇ ಎಂದು ನಂಬುವವರು, ಆದರೆ ಇದು ಸಹ ಸಂಶಯಾತ್ಮಕವೆಂದು ತೋರುತ್ತದೆ. 7ನೇ ವಚನದಲ್ಲಿರುವ "ತೆಗೆದು ಬಿಡಲ್ಪಡುವ ತನಕ" ಎಂಬುದು ಅಡ್ಡಿ ಪಡಿಸುವವನನ್ನು ತೆಗೆದು ಹಾಕುವಂತಹ ಹಿಂಸಾತ್ಮಕ ದುಷ್ಟ ಕೃತ್ಯವನ್ನು ಸೂಚಿಸುತ್ತದೆ. ಯಾವ ದುಷ್ಟಶಕ್ತಿಯು ಪವಿತ್ರಾತ್ಮನನ್ನು ಜಯಿಸುವದಕ್ಕೆ ಸಾಧ್ಯತೆಯಿದೆ? ನಾಲ್ಕನೆಯದಾಗಿ, "ಅಡ್ಡಿಪಡಿಸುವವನು" ಕಾನೂನು ಮತ್ತು ಸುವ್ಯವಸ್ಥೆಯ ತತ್ವವೆಂದು ಇನ್ನು ಕೆಲವರು ಹೇಳುತ್ತಾರೆ. ಈ "ಮನುಷ್ಯನು" ಕೆಟ್ಟತನ ವ್ಯಕ್ತಿಕರಣವಾಗಿರುತ್ತಾನೆಂಬುದಾಗಿ

ಯೋಚಿಸುವವರು ಈ ಅಭಿಪ್ರಾಯವನ್ನು ಹೊಂದಿರುತ್ತಾರೆ. ಕಾನೂನು ಹಾಗೂ ಸುವ್ಯವಸ್ಥೆಯಲ್ಲಿ ನಂಬಿಕೆಯಿರುವಂತಹ ಸರ್ಕಾರಗಳಲ್ಲಿ ಮತ್ತು ಸಮಾಜಗಳಲ್ಲಿರುವ ವಿವಿಧ ಅಂಶಗಳಾಗಿರುತ್ತವೆ. ಅಡ್ಡಿ ಪಡಿಸುವ ಶಕ್ತಿಯು ಬಣ್ಣಿಸಲ್ಪಟ್ಟಿರುವ ವಿಧದ ವಿಷಯವಾಗಿ, Robertson ಬರೆದದ್ದೇನೆಂದರೆ "*ಏನು ಅಡ್ಡಿಮಾಡುತ್ತದೋ* (ತಡೆಯುತ್ತದೆ, [κατέχω ಎಂಬುದರಿಂದ ಬಂದದ್ದು] *katechōn*) ಎಂಬುದು ಇಲ್ಲಿ ನಪುಂಸಕ ಮತ್ತು 7ನೇ ವಚನದಲ್ಲ ಪುಲ್ಲಿಂಗವಾಗಿರುತ್ತದೆ [ὁ κατέχων] *ho katechōn*."[9]

ಯಾವ ರೀತಿಯಿದ್ದರೂ, ಆತನು "ಸಮರ್ಪಕವಾದ ಸಮಯದಲ್ಲೇ" (NIV), ದೇವರು ಅದಕ್ಕೆ ಅನುಮತಿಸುವಾಗ, ಬಯಲಿಗೆ ಬರುವಂತಾಗುವ ಹಾಗೆ ಯಾವನೋ ಒಬ್ಬನು ಅಥವಾ ಯಾವದೋ ಒಂದು ಆತನಿಗೆ ಅಡ್ಡಿ ಮಾಡುತ್ತಿತ್ತು. "ದೇವರು ಈಗಲೂ ನಿಯಂತ್ರಣ ಹೊಂದಿದ್ದಾನೆ. ಥೆಸಲೋನಿಕದವರೇ, ಈಗ ನೀವು ಹಿಂಸೆಗೊಳಗಾಗುತ್ತಿದ್ದರೂ, ದೇವರು ತನ್ನ ಜನರನ್ನು ಮರೆತಿರುವದಿಲ್ಲ ಎಂಬುದನ್ನು ನೀವು ಜ್ಞಾಪಕದಲ್ಲಿಟ್ಟುಕೊಳ್ಳಬೇಕು" ಎಂಬದಾಗಿ ಇದು ಪೌಲನು ಹೇಳುವ ರೀತಿಯಾಗಿತ್ತು.

**ವಚನ 7. ಅಧರ್ಮವು ಈಗಲೂ ಗುಪ್ತವಾಗಿ** ಎಂಬುದು ಪೌಲನ ಕಾಲದ ಜಗತ್ತಿನಲ್ಲಿ ಗೋಚರವಾಗದಿದ್ದಾಗ್ಯೂ ಹುಳಿಯಂತೆ ಈಗಾಗಲೇ ಕ್ರಿಯೆಯಲ್ಲಿ ತೊಡಗಿದ್ದ ಪ್ರಭಾವವನ್ನು ಸೂಚಿಸುತ್ತದೆ. "ಅಧರ್ಮವು" ಎಂಬುದರ ಬಳಕೆಯು ಈ ಯೋಚನೆಯನ್ನು 3ನೇ ವಚನದಲ್ಲಿರುವ "ಅಧರ್ಮಸ್ವರೂಪ"ನಿಗೆ ಸಂಬಂಧಗೊಳಿಸುತ್ತದೆ. ಒಬ್ಬನು ಎದುರಿಸುತ್ತಿರುವದು ಸಾಮಾನ್ಯ ಅರ್ಥದಲ್ಲಿ ಕೆಟ್ಟತನವಾಗಿದ್ದು, ವ್ಯಕ್ತಿಕರಣದ ಅರ್ಥದಲ್ಲಷ್ಟೆ ಅದು "ಮನುಷ್ಯನು" ಆಗಿರುತ್ತದೆ. ಈ ಕೆಟ್ಟ ಪ್ರಭಾವಗಳು ಪೌಲನ ದಿನದಲ್ಲಿ ಕಾರ್ಯ ಮಾಡುತ್ತಿದ್ದವು, ಮತ್ತು **ಆದರೆ ಇದುವರೆಗೆ ಅಡ್ಡಿ ಮಾಡುವವನು** [ಮುಂದುವರೆಸುವನು]. ಹೀಗೆ ಈಗ "ಅಧರ್ಮಸ್ವರೂಪನ"ನ್ನು ಅಡ್ಡಿಮಾಡುವದು ["ಅಧರ್ಮಸ್ವರೂಪನು" ಬೈಲಿಗೆ ಬರುವ ದಾರಿಗೆ ಅಡ್ಡವಾಗಿರುವವನು] **ತೆಗೆದು ಬಿಡಲ್ಪಡುವ ತನಕ** ಹಾಗೆಯೇ ಮುಂದುವರೆಯುವದು. ಈ ἐκ μέσου γένηται (*ek mesou genētai*) ಎಂಬ ಪದಗುಚ್ಛವು ಬಹುಶಃ ಹಿಂಸಾತ್ಮಕವಾಗಿ ಕಿತ್ತುಹಾಕಲ್ಪಡುವದನ್ನು ಸೂಚಿಸುವದಾಗಿದ್ದು "ಅಧರ್ಮಸ್ವರೂಪನು" ಬೈಲಿಗೆ ಬರದಂತೆ "ಅಡ್ಡಿಮಾಡುವದು" ಪವಿತ್ರಾತ್ಮನು (Scofield Reference Bibleನಲ್ಲಿ ಸೂಚಿಸಲ್ಪಟ್ಟಿರುವ ಪರ್ಕಾರ) ಎಂಬ ಸಾಧ್ಯತೆಯನ್ನು ಹೊರಗಿಡುವದಾಗಿರುತ್ತದೆ. ಪವಿತ್ರಾತ್ಮನು "ತೆಗೆದು ಬಿಡಲ್ಪಡುವ ತನಕ" ಎಂದು ಪೌಲನು ಹೇಳಿರುವ ಸಾಧ್ಯತೆಯು ಇರುವದಿಲ್ಲ, ಮತ್ತು ಆತನು "ತೆಗೆದು ಬಿಡಲ್ಪಡುವದು" ಸಹ ಅಸಂಭವನೀಯವಾಗಿರುತ್ತದೆ. ದೇವರು ಮಾತ್ರವೇ ಅದನ್ನು ಮಾಡಬಲ್ಲನು, ಮತ್ತು ಆತನು ಹಾಗೆ ಮಾಡುವದಿಲ್ಲ.[10] ಇನ್ನು ಕೆಲವರು ಅಭಿಪ್ರಾಯ ಪಡುವದೇನೆಂದರೆ ಇದು ಒತ್ತಾಯದಿಂದ ತೆಗೆದುಹಾಕಲ್ಪಡುವಿಕೆಯ ಅರ್ಥವನ್ನು ಕೊಡುವದಿಲ್ಲ ಎಂಬದೆ, ಆದರೆ ಅವರ ವಾದಗಳು ಮನವರಿಕೆಯುಂಟು ಮಾಡುವಂತೆ ಇರುವದಿಲ್ಲ.[11]

ಮೇಲ್ಗಡೆಯಲ್ಲಿ ಅಭಿಪ್ರಾಯ ಪಟ್ಟ ಪ್ರಕಾರ, ಅಡ್ಡಿ ಪಡಿಸುವ ಶಕ್ತಿಯು ಕಾನೂನು ಸುವ್ಯವಸ್ಥೆಯಲ್ಲಿ ನಂಬಿಕೆಯಿಸುವ ವಿವಿಧ ಸರ್ಕಾರ ಹಾಗೂ ಸಮಾಜಗಳಲ್ಲಿರುವ ಅಂಶಗಳು ಆಗಿರುವದಾದಲ್ಲಿ, ಅಂಶಗಳು ಮತ್ತು ಜನರು ತಮ್ಮ ನಂಬಿಕೆಯನ್ನು ಹಿಡಿದುಕೊಂಡಿರುವಷ್ಟು

ಕಾಲ ಮಾತ್ರವೇ ಈ ಶಕ್ತಿಯು ಮುಂದುವರೆಯುವದು. ಒಮ್ಮೆ ಅಂಥ ಭಾವನೆಗಳು ಕೊರೆದು ಹಾಕಲ್ಪಟ್ಟು ಅಧರ್ಮವು ಪ್ರಬಲ್ಯತೆಯನ್ನು ಸಾಧಿಸುವದಕ್ಕಾರಂಭಿಸಿದರೆ, ದುಷ್ಟಶಕ್ತಿಗಳಿಗೆ ಯಾವ ಅಡ್ಡಿಯೂ ಇಲ್ಲದಂತಾಗುತ್ತದೆ. ಈ ರೀತಿಯವಾದ ಸ್ವಲ್ಪ ಮಟ್ಟಿನ ಕೊರೆತವು ಕಳೇದ ಹಲವಾರು ದಶಕಗಳಲ್ಲಿ ಅಮೆರಿಕ, ಬ್ರಿಟನ್, ಮತ್ತು ಇತರ ದೇಶಗಳೊಳಗೆ ಸಂಭವಿಸಿರುತ್ತದೆಂದು ತೋರುತ್ತದೆ. (ಅಡ್ಡಿ ಮಾಡುವವನು ಕುರಿತಾದ ಇನ್ನಷ್ಟು ಚರ್ಚೆಯನ್ನು 73 ನೇ ಪುಟದಲ್ಲಿರುವ "ಹೆಚ್ಚಿನ ಅಧ್ಯಯನಕ್ಕಾಗಿ: ಈಗ ಆತನನ್ನು '**ಏನು ಅಡ್ಡಿಮಾಡುತ್ತದೋ**' [2:6, 7].")

**ವಚನ 8.** ಈ ಅಧರ್ಮಸ್ವರೂಪನು ಬಯಲಿಗೆ ಬರದಂತೆ ಅಡ್ಡಿ ಮಾಡುತ್ತಿರುವ ವ್ಯಕ್ತಿ ಅಥವಾ ಶಕ್ತಿಗಳು ತೆಗೆದು ಹಾಕಲ್ಪಟ್ಟು ಕೂಡಲೆ, ಈತನು ಸಹ "ಬೈಲಿಗೆ ಬರುವನು." 1:7ರಲ್ಲಿ ಕ್ರಿಸ್ತನ ಪ್ರತ್ಯಕ್ಷತೆಯನ್ನ ಸೂಚಿಸುವದಕ್ಕೆ ಅದೇ ಪದವು ಬಳಸಲ್ಪಟ್ಟಿದೆ ಮತ್ತು "ತೋರ್ಪಡಿಸಿಕೊಳ್ಳುವದು" ಎಂಬ ಅರ್ಥವನ್ನು ಹೊಂದಿರುತ್ತದೆ. ಕ್ರಿಸ್ತನು ಮತ್ತು ಈ "ಅಧರ್ಮಸ್ರೂನು" ಒಂದು ನಿಜವಾದ ಅರ್ಥದಲ್ಲಿ ಪರಸ್ಪರ ವೈರಿಗಳಾಗಿದ್ದಾರೆ, ಆದರೆ ಈತನನ್ನೇ **ಕರ್ತನು** [ಯೇಸು] **ಕೊಲ್ಲುವನು** ಅಥವಾ ಸೋಲಿಸುವನು ಎಂದು ಪೌಲನು ಹೇಳಿದನು. ಈ ಮನುಷ್ಯನು ಅಪರಾಜಯಿ ಎಂಬಂತೆ ತೋರಬಹುದಾದರೂ, ಕರ್ತನು **ತನ್ನ ಬಾಯ ಉಸುರಿನಿಂದ** ಜಯವನ್ನು ಗಳಿಸುವನು (ನೋಡಿರಿ ಯೆಶಾಯ 11:4). ಆತನು ಮಾತಾನಾಡುವ ಸತ್ಯವೇ ದುಷ್ಟತ್ವವನ್ನು ಸೋಲಿಸುವದು (ನೋಡಿರಿ ಪ್ರಕಟನೆ 1:16).

ಅಲ್ಲದೆ, ಈ "ಮನುಷ್ಯನ" ಮೇಲೆ ಗಳಿಸುವ ಜಯವು ಸುಲಭವಾಗಿರುತ್ತದೆಂಬ ವಿಚಾರವು ತೋರಿ ಬರುತ್ತದೆ. ಕ್ರಿಸ್ತನು ಆತನ ವಿರುದ್ಧವಾಗಿ ಯುದ್ಧ ಮಾಡಬೇಕಾಗುವದಿಲ್ಲ; ಆತನು ಬಾಯ ಮಾತಿನಿಂದ ಆತನನ್ನು ಮರೆಯಾಗಿಸುವನು. ಆತನು ಈ ದುಷ್ಟ "ಅಧರ್ಮಸ್ವರೂಪ"ನನ್ನು "ಸಂಹರಿಸುವನು" ಅಥವಾ ನಿರಪಾಯದವನನ್ನಾಗಿ ಅಥವಾ ಶಕ್ತಿಹೀನನ್ನಾಗಿ ಮಾಡುವನು.

ಕ್ರಿಸ್ತನ ಪ್ರಸನ್ನತೆಗೆ ಗುರುತಾಗಿ "ಪ್ರಕಾಶ"ವು ಇರುವದು ಮತ್ತು **ತನ್ನ ಪ್ರತ್ಯಕ್ಷತೆಯ** ವೈಭವ ತೋರಿಸುವನು. "ಪ್ರತ್ಯಕ್ಷತೆಯ" ಎಂಬುದು ἐπιφάνεια (*epiphaneia*) ಎಂಬ ಪದದಿಂದ ಬಂದದ್ದು, ಮತ್ತು "ಬರೋಣ"ವು ಎಂಬುದು παρουσία (*parousia*)ದ ಇನ್ನೊಂದು ಉದಾಹರಣೆಯಾಗಿದೆ. *Epiphaneia* ವು McCord ತರ್ಜುಮೆಯಲ್ಲಿ "ಪ್ರಕಾಶತೆ" ಎಂದು ಅನುವಾದಿಸಲ್ಪಟ್ಟಿದೆ.[12] ಅಕ್ಷರಶಃ ಅರ್ಥವು "ಒಂದು ಹೊಳೆಯುವಿಕೆ"[13] ಎಂದಾಗಿದೆ. (ಮತ್ತಾಯ 24:27; 1 ತಿಮೊಥೆ 6:14; 2 ತಿಮೊಥೆ 1:10ರಲ್ಲಿರುವ *epiphaneia* ದೊಂದಿಗೆ ಹೋಲಿಸಿರಿ.)

ಯೇಸುವಿನ "ಪ್ರಸನ್ನತೆಯೇ ವಿರೋಧಿಯನ್ನು ಶೂನ್ಯಕ್ಕೆ ತರುವದು."[14] ಈ "ಮನುಷ್ಯ" ನಲ್ಲಿ ವ್ಯಕ್ತಿಕರಣಗೊಂಡಿರುವ ಕೆಟ್ಟತನವು ಎಷ್ಟೆ ಶಕ್ತಿಶಾಲಿ ಮತ್ತು ಪ್ರಜ್ವಲವಾಗಿದ್ದಾಗ್ಯೂ, ಕರ್ತನು ಅದನ್ನು ಮೀರಿ ಪ್ರಕಾಶಿಸುವನು, ಆರೋನನ ಕೋಲು ಮಂತ್ರವಾದಿಗಳ ಸರ್ಪವನ್ನು ನುಂಗಿ ಬಿಟ್ಟಾಗ ಮೋಶೆ ಮತ್ತು ಆರೋನನ ಕೆಲಸಗಳು ಯನ್ನ ಹಾಗೂ ಯಂಬ್ರರನ್ನು ಮೀರಿಸಿದಂತೆಯೇ ಆಗಿರುವದು (ವಿಮೋಚನಕಾಂಡ 7:6-13; 2 ತಿಮೊಥೆ 3:8).

ಪೌಲನು ತಾನು ಬಣ್ಣಿಸುತ್ತಿರುವ ಘಟನೆಗಳ ಕ್ರಮಾನುಗತಿಗಳನ್ನು ಈಗ ಮುಕ್ತಾಯಗೊಳಿಸಿದ್ದನು. ಮೊದಲನೆಯದಾಗಿ, ಅಡ್ಡಿ ಮಾಡುವ ವ್ಯಕ್ತಿ ಅಥವಾ ಶಕ್ತಿಯು ತೆಗೆದು ಹಾಕಲ್ಪಡುವದು. ಎರಡನೆಯದಾಗಿ, "ಅಧರ್ಮಸ್ವರೂಪನು" ಬೈಲಿಗೆ ಬರುವನು. ಮೂರನೆಯದಾಗಿ, ಕ್ರಿಸ್ತನು ಎರಡನೆಯ ಸಾರಿ ಬರುವನು ಮತ್ತು "ಅಧರ್ಮಸ್ವರೂಪ"ನನ್ನು ಸಂಹರಿಸುವನು ಮತ್ತು ಈ ಭೂಮಿಯ ಮೇಲೆ ಕಾರ್ಯಗಳನ್ನು ಸಮಾಪ್ತಿಗೆ ತರುವನು.

ಪೌಲನು ನಿಖರವಾಗಿ ಹಾಗೆ ಹೇಳಲಿಲ್ಲವಾದಾಗ್ಯೂ, ಒಂದು ಮೊದಲು ಸಂಭವಿಸುವಾಗ ಈ ಎಲ್ಲಾ ಘಟನೆಗಳು ವೇಗವಾಗಿ ಒಂದೊಂದೆ ಸಂಭವಿಸುವವನು ಎಂದು ತೋರುತ್ತದೆ. ನಾಶನವನ್ನು ವರ್ಣಿಸುತ್ತಲೇ ಹೋದ ಪೌಲನು, ಪುನಃ ಈ "ಮನುಷ್ಯನು" ಹೇಗೆ ತನ್ನನ್ನು ತೋರ್ಪಿಸಿಕೊಳ್ಳುವನೆಂಬ ಬಗ್ಗೆ ಇನ್ನಷ್ಟು ವಿವರಗಳನ್ನು ನೀಡುವದಕ್ಕೆ ಹಿಂದಿರುಗುತ್ತಾನೆ.

**ವಚನ 9.** ಕರ್ತನ ರೀತಿಯಲ್ಲಿಯೇ, "ಅಧರ್ಮಸ್ವರೂಪನು" **ಪ್ರತ್ಯಕ್ಷತೆಯ** (παρουσία, *parousia*) ನ್ನು ಹೊಂದಿರುವನು. ಎರಡೂ ಬರೋಣಗಳಿಗೆ ಅದೇ ಗ್ರೀಕ್ ಪದವು ಬಳಸಲ್ಪಟ್ಟಿದೆ ಮತ್ತು ಒಂದು ನಯನ ಮನೋಹರವಾದ ಘಟನೆಯನ್ನು ಬಣ್ಣಿಸುತ್ತದೆ. ಇಲ್ಲಿ ಬಣ್ಣಿಸಲಾಗಿರುವವನು ಕೆಟ್ಟತನದ ವ್ಯಕ್ತಿಕರಣವಾವನು ಆಗಿದ್ದಲ್ಲಿ, ಇದು ದುಷ್ಟಶಕ್ತಿಗಳ ಮೇಲೆ ವಿಜಯವನ್ನು ಸಾಧಿಸುವ **ಒಂದು** ಕ್ಷಣವನ್ನು ಸೂಚಿಸುತ್ತಿರಬಹುದಾಗಿದೆ. ಅಧರ್ಮಸ್ವರೂಲನ ಪ್ರತ್ಯ ಕ್ಷತೆಯು **ಸೈತಾನನ ಮಾಟಕ್ಕನುಗುಣವಾಗಿರುವದು.** ಈಗಾಗಲೇ ಗಮನಿಸಿರುವ ಪ್ರಕಾರ, ಪೌಲನು ಏನನ್ನೇ ಬಣ್ಣಿಸುತ್ತಿದ್ದರೂ ಆತನು ಇಲ್ಲಿ ಸ್ವತಃ ಸೈತಾನನನ್ನೇ ಸೂಚಿಸಿ ಹೇಳುತ್ತಿಲ್ಲ, ಆದರೆ "ಅಧರ್ಮಸ್ವರೂಪ" ಕೃತ್ಯಗಳು ಸೈತಾನನ ಕೃತ್ಯಗಳಿಗೆ ಸಮಾನವಾಗಿಯೇ ಇರುವವು ಹೇಳುತ್ತಿದ್ದಾನೆ ಎಂದು ಇದರರ್ಥವಾಗಿದೆ. ಈತನು ಯುದ್ಧದಲ್ಲಿ ಒಂದೇ ಪಕ್ಷದಲ್ಲಿರುವವನು ಮತ್ತು ಸೈತಾನನಿಂದ ಶಕ್ತಿಯನ್ನು ಕೊಡಲ್ಪಟ್ಟವನು.

ಹೆಚ್ಚು ನಿರ್ದಿಷ್ಟವಾಗಿ, ಆತನ ಚಟುವಟಿಕೆಗಳು **ಮೋಸಗೊಳಿಸುವ ಸಕಲವಿಧವಾದ ಮಹತ್ಕಾರ್ಯ ಸೂಚಕಕಾರ್ಯ ಅದ್ಭುತಕಾರ್ಯ**ಗಳನ್ನು ತೋರ್ಪಡಿಸುವವು. "ಮಹತ್ಕಾರ್ಯ," "ಸೂಚಕಕಾರ್ಯ," ಮತ್ತು "ಅದ್ಭುತಕಾರ್ಯ" ಇವೆಲ್ಲವೂ ಯೇಸುವಿನ ಮತ್ತು ಅಪೊಸ್ತಲರ ಚಟುವಟಿಕೆಯನ್ನ ಬಣ್ಣಿಸುವದಕ್ಕೆ ಬಳಸಿದ ಪದಗಳಾಗಿರುತ್ತವೆ (ಅಪೊಸ್ತಲರ ಕೃತ್ಯಗಳು 2:22; ಇಬ್ರಿಯ 2:4 ರೊಂದಿಗೆ ಹೋಲಿಸಿರಿ). "ಮಹತ್ಕಾರ್ಯ" ("ಅದ್ಭುತಕಾರ್ಯಗಳು"; NIV) ಅದನ್ನು ಕಾರ್ಯಮಾಡುವಂತೆ ಮಾಡುವ ಅತಿಮಾನುಷ ಶಕ್ತಿಯನ್ನು ಒತ್ತಿ ಹೇಳುತ್ತದೆ; "ಸೂಚಕಕಾರ್ಯಗಳು" ಎಂಬುದು ಸ್ವತಃ ತಮಗಿಂತಲೂ ಹೆಚ್ಚು ಗಹನವಾದದ್ದರ ಕಡೆಗೆ ಗಮನವನ್ನು ಸೆಳೆಯುತ್ತವೆಂಬುದನ್ನು ತೋರಿಸುತ್ತವೆ; ಮತ್ತು "ಅದ್ಭುತಕಾರ್ಯಗಳು" ಮನುಷ್ಯನು ಅವುಗಳನ್ನು ವಿವರಿಸುವದಕ್ಕೆ ಸಾಧ್ಯವಿಲ್ಲ ಎಂಬ ವಾಸ್ತವಾಂಶದ ಕಡೆಗೆ ಗಮನವನ್ನು ಸೆಳೆಯುತ್ತವೆ. ಹೇಗೂ, "ಅಧರ್ಮಸ್ವರೂಪನ" ಸಕಲ "ಅದ್ಭುತಕಾರ್ಯಗಳು" "ಸುಳ್ಳ" ಅಥವಾ "ಕಪಟ" (RSV) ದವುಗಳಾಗಿರುತ್ತವೆ.

ಅವುಗಳು ನಿಜಕ್ಕೂ ಅದ್ಭುತಗಳೇ ಆಗಿರುವದಿಲ್ಲ, ಆದರೆ ಆ ರೀತಿಯಲ್ಲಿ ಕಾಣಿಸುವಂಥವುಳಷ್ಟೆ ಆಗಿರುತ್ತವೆ ಎಂದು ಇದರರ್ಥವೋ? NIV ಮತ್ತು RSV

ಅನುವಾದಕರು ಹಾಗೆಯೆ ಭಾವಿಸಿದರೆಂಬುದು ಸ್ಪಷ್ಟವಾಗಿರುತ್ತದೆ. ಗ್ರೀಕ್ ಅಕ್ಷರಶಃ ಹೀಗೆ ಹೇಳುತ್ತದೆ, "ಮೋಸತನದ ಸಕಲ ಶಕ್ತಿ, ಮತ್ತು ಸೂಚಕಕಾರ್ಯಗಳು ಹಾಗೂ ಅದ್ಭುತಕಾರ್ಯಗಳು." ಬಳಸಲ್ಪಟ್ಟಿರುವ ಮೂರು ಪದಗಳೆಂದರೆ δύναμις (*dunamis*, "ಶಕ್ತಿ"), σημεῖον (*sēmeion*, "ಸೂಚಕಕಾರ್ಯ"), and τέρας ψεῦδους (*teras pseudous*, "ಸುಳ್ಳಿನಿಂದ ಕೂಡಿದ ಅದ್ಭುತಕಾರ್ಯಗಳು)." Morrisನು ಇದನ್ನು ಈ ಕೆಳಗಿನಂತೆ ಅರ್ಥನಿರೂಪಣೆ ಮಾಡುತ್ತಾನೆ: "ಇಲ್ಲಿ ಆಲೋಚನೆಯು ಅದ್ಭುತಗಳು ನಕಲಿ ಎಂದಾಗಿರುವದಿಲ್ಲ . . . ಆದ್ದರಿಂದ ಅಲ್ಲಿ ಅದ್ಭುತಗಳೇ ಇರುವದಿಲ್ಲ. ಅವುಗಳ ವಾಸ್ತವಿಕತೆಯು ಬಿಟ್ಟುಕೊಟ್ಟಂತದ್ದು (ಸೈತಾನನು ಹಾಗೆ ಮಾಡುವನೋ?). ಅವುಗಳು ಸುಳ್ಳಾದ ಮನೋವೃತ್ತಿಯೊಂದಿಗೆ ಮಾಡಲ್ಪಟ್ಟವುಗಳೆಂಬದಾಗಿ ಪೌಲನು ಹೇಳುತ್ತಿದ್ದಾನೆ."[15]

Nardoniಯ ಇಟಾಲಿಯನ್ ತರ್ಜುಮೆಯು Morris ನೊಂದಿಗೆ ಸಹಮತವನ್ನು ವ್ಯಕ್ತಪಡಿಸುವಂತೆ ತೋರುತ್ತದೆ, ಆದರೆ ಮತ್ತಾಯ 24:24ರ ಪ್ರಕಾರವಾಗಿ, ಕ್ರಿಸ್ತನು ಹಾಗೂ ಆತನ ಕೆಲಸಗಾರರು ಮಾಡಿದ ಸೂಷಕಕಾರ್ಯಗಳು ಹಾಗು ಅದ್ಭುತಕಾರ್ಯಗಳು ಮತ್ತು ಸೈತಾನನು ಹಾಗೂ ಆತನ ಬಳಗದಿಂದ ಮಾಡಲ್ಪಡುವ ಸೂಚಕ ಮತ್ತು ಅದ್ಭುತಕಾರ್ಯಗಳ ನಡುವೆ ಒಂದು ವ್ಯತ್ಯಾಸವನ್ನು ಮಾಡುವದು ಸಾಧ್ಯವಿದೆಯೆಂದು ತೋರುತ್ತದೆ. ಆದುಕೊಂಡವರನ್ನು (ಯಥಾರ್ಥವಾಗಿ ಸತ್ಯವನ್ನು ಬಯಸುವವರು) ಮೋಸಗೊಳಿಸುವದು ಅಸಾಧ್ಯವಿರುತ್ತದೆ; ಆದರೆ ಯಥಾರ್ಥರಲ್ಲದ ಬೇರೆಯವರು ಅಂಥ ಕಾರ್ಯಗಳಿಂದ ಮೋಸಕ್ಕೊಳಗಾಗುವರು (ನೋಡಿರಿ ವ. 10).[16] ಆದುದರಿಂದ, Morrisನ ಮಾತಿಗೆ ತದ್ವಿರುದ್ಧವಾಗಿ, ಸೈತಾನನು ಬಳಸಿದ ಸೂಚಕಕಾರ್ಯಗಳ ಸುಳ್ಳುತನದ ಆಧಾರದಲ್ಲಿ ಯಥಾರ್ಥವಾಗಿರುವ ಕ್ರೈಸ್ತರಿಂದ ವ್ಯತ್ಯಾಸವು ಗುರುತಿಸಲ್ಪಡುವದು ಎಂದು ನಾವು ಹೇಳಬಹುದು. ಇನ್ನು ಯಾವ ಆಧಾರಗಳಿಂದ ವ್ಯತ್ಯಾಸವನ್ನು ಗುರುತಿಸುವದಕ್ಕೆ ಅವಕಾಶವಿರುತ್ತದೆ?

ಅಷ್ಟುಮಾತ್ರವಲ್ಲದೆ, ಕ್ರೈಸ್ತ ಯುಗದಲ್ಲಿ ನಿಜವಾದ ಅದ್ಭುತಗಳನ್ನು ಮಾಡುವದನ್ನು ಮುಂದುವರೆಸುವಂತೆ (ಅಥವಾ ಪುನಃ ಮಾಡುವಂತೆ) "ಅಧರ್ಮಸ್ವರೂಪ"ನಿಗೆ ಅನುಮತಿಸಲ್ಪಡುವದಾದರೆ, ದೇವರು ಸಹ ಪುನಃ ತನ್ನ ಅದ್ಭುತಕರ ಶಕ್ತಿಯನ್ನು ತೋರ್ಪಡಿಸುವಂತೆ ಒತ್ತಾಯಿಸಲ್ಪಡುವನು. ಹೇಗೂ, ದೇವರು ಪುನಃ ಅದ್ಭುತಗಳನ್ನು ಬಳಸುತ್ತಾನೆಂಬುದಕ್ಕೆ ಹೊಸ ಒಡಂಬಡಿಕೆಯಲ್ಲಿ ಯಾವದೇ ಸೂಚನೆಗಳು ಇರುವದಿಲ್ಲ. ಈ ವಾಸ್ತವಾಂಶವು ಇವು ನಕಲಿ "ಅದ್ಭುತಗಳು," ಅಥವಾ ಪ್ರಾಮಾಣೀಕೃತವಲ್ಲದ ಮೋಸದ ಕೃತ್ಯಗಳು ಎಂಬರ್ಥದಲ್ಲಿ ಈ "ಅದ್ಭುತಗಳು" "ಸುಳ್ಳಾದವುಗಳು"ಎಂಬ ಮುಕ್ತಾಯಕ್ಕೆ ಬರುವಂತೆ ನಡಿಸುತ್ತವೆ.

ಯಾವ "ಸುಳ್ಳು" ಅದ್ಭುತಕಾರ್ಯಗಳ ಕುರಿತು ಬಣ್ಣಿಸಲಾಗುತ್ತಿದೆ? ಅವುಗಳು "ವಿಶ್ವಾಸದ ಸ್ವಸ್ಥತೆಗಾರರು" ಎಂದು ಕರೆಯಲ್ಪಡುವವರು ಮಾಡುವಂತಹ ಕೃತ್ಯಗಳಾಗಿರುವ ಸಾಧ್ಯತೆಯಿದೆ. ಖಂಡಿತವಾಗಿಯೂ ಈ "ಮಹತ್ತುಗಳನ್ನು" ನಾವು ಕ್ರಿಸ್ತನಿಂದ ಮತ್ತು ಅಪೊಸ್ತಲರಿಂದ ಮಾಡಲ್ಪಟ್ಟ "ಅದ್ಭುತಗಳಿಗೆ" ಹೋಲಿಸುವಾಗ, ಫಿಲಿಪ್ಪನ ಅದ್ಭುತಗಳಿಗೆ ಹೋಲಿಸಿದರೆ ಸೀಮೋನನ ಅದ್ಭುತಗಳ ರೀತಿಯಲ್ಲಿಯೇ, ವ್ಯತ್ಯಾಸವು

ಸ್ಪಷ್ಟವಾಗಿರುತ್ತದೆ (ಅಪೊಸ್ತಲರ ಕೃತ್ಯಗಳು 8:9-19). ಫಿಲಿಪ್ಪನಲ್ಲಿ ತೋರಿ ಬಂದ ದೇವರ ಶಕ್ತಿಯೊಂದಿಗೆ ಹೋಲಿಕೆ ಮಾಡುವ ತನಕ ಸೀಮೋನನ ಶಕ್ತಿಯಯು ಚೆನ್ನಾಗಿಯೇ ಕಂಡಿತು. ಅಧರ್ಮಸ್ವರೂಪನು ತನ್ನನ್ನು ತೋರ್ಪಡಿಸಿಕೊಳ್ಳುವ ಇತರ ದಾರಿಗಳ ಕುರಿತ ಬಣ್ಣಿಸುವದನ್ನು ಪೌಲನು ಮುಂದುವರೆಸುತ್ತಾನೆ.

**ವಚನ 10.** ಆತನು **ದುರ್ನೀತಿಯ ಎಲ್ಲಾ ವಂಚನೆಯಿಂದಲೂ ಕೂಡಿದವನಾಗಿ** ಬರುತ್ತಾನೆ, ಕಲ್ಪಿಸಿಕೊಳ್ಳಬಹುದಾದ ಸಕಲ ದುಷ್ಟ ಕುತಂತ್ರಗಳನ್ನು ಬಳಸುವನು. ಆನು ಮನುಷ್ಯರನ್ನು ವಂಚಿಸುವದನ್ನು ತನ್ನ ಗುರಿಯಾಗಿಟ್ಟುಕೊಂಡಿರುವನು. ವಂಚಿಸುವ ಆತನ ತಂತ್ರಗಳನ್ನು ಬಳಸಿಕೊಂಡು ಆತನ ಧ್ಯೇಯದೆಡೆಗೆ ಅನೇಕ ಹಿಂಬಾಲಕರನ್ನು ಗಳಿಸಿಕೊಳ್ಳುವನು, ಆದರೆ ಈತನ ಹಿಂಬಾಲಕರು ಯಾವ ವರ್ಗದವರಾಗಿರುತ್ತಾರೆ? ಪೌಲನು ಅವರನ್ನು **ನಾಶನಮಾರ್ಗದಲ್ಲಿರುವವರು** ಎಂದು ಬಣ್ಣಿಸುತ್ತಾನೆ. RSVಯಲ್ಲಿ "ನಾಶವಾಗಲಿರುವವರು" ಎಂದಿರುತ್ತದೆ. ನಾಶವಾಗುವದೆಂದರೆ ದುಷ್ಟರಿಗಾಗಿರುವ "ನಿತ್ಯನಾಶನ"ದಲ್ಲಿ ನಾಶವಾಗುವದು ಅಥವಾ ಧ್ವಂಸಗೊಳ್ಳುವದು ಎಂದಾಗಿರುತ್ತದೆ (1:9). ಅವರು ಈಗಾಗಲೆ "ನಾಶನಕ್ಕೆ ನಡಿಸುವ ದಾರಿಯಲ್ಲಿ" ಇರುವಂಥ ಜನರಾಗಿರುತ್ತಾರೆ.

ಪೌಲನು ಗ್ರೀಕ್ ವರ್ತಮಾನಕಾಲ ಕೃದಂತವಾದ τοῖς ἀπολλυμένοις (*tois apollumenois*) ಎಂಬುದನ್ನು ಬಳಸಿದನು, ಅದರರ್ಥವು "ನಾಶವಾಗುತ್ತಿರುವವರು" ಎಂದಾಗಿರುತ್ತದೆ.[17] ಅದನ್ನು "ನಾಶವಾಗುವವರು" ಎಂದು ಸಹ ಅನುವಾದಿಸಬಹುದು.

ಒಂದು ಸಹಜವಾದ ಪ್ರಶ್ನೆಯೇನೆಂದರೆ: ಈಗಾಗಲೇ ನಾಶನದ ಮಾರ್ಗದಲ್ಲಿರುವವರನ್ನು ಸೈತಾನನು ಏಕೆ ಮೋಸಗೊಳಿಸುವದಕ್ಕೆ ಬಯಸುವನು? ಸ್ಪಷ್ಟವಾಗಿರುವ ಹಾಗೆ, ಅವರು ಆತನ ಹಿಡಿತದಿಂದ ಬಿಡಿಸಿಕೊಳ್ಳುವದು ಮತ್ತಷ್ಟು ಕಷ್ಟಕರವಾಗುವಂತಾಗಲು ಆತನು ಅವರನ್ನು ಇನ್ನಷ್ಟು ಹೆಚ್ಚು ಆಳವಾದ ಗೊಂದಲ ಮತ್ತು ಪಾಪಕ್ಕೆ ಕರೆತರುವದಕ್ಕೆ ಬಯಸಿದ್ದನು. ಅಷ್ಟುಮಾತ್ರವಲ್ಲದೆ, Kelcy ಅಭಿಪ್ರಾಯ ಪಟ್ಟ ಪ್ರಕಾರ, ಆತನು "ಆತನು ಅವರನ್ನು ತನ್ನ ಸಕ್ರಿಯವಾದ ಮತ್ತು ಸೇನಾ ಬಂಡಾಯದೊಳಗೆ [ತನ್ನ ಸಕ್ರಿಯವಾದ ಕೆಲಸಗಾರರಾಗಿ] ನೇಮಕ ಮಾಡಿಕೊಳ್ಳುವದು ಆತನ ಬಯಕೆ."[18]

ಈ ಜನರು ನಾಶನದ ಕಡೆಗೆ ಹೋಗುತ್ತಿರುವದಕ್ಕೆ ನಿಜವಾದ ಕಾರಣವೇನು? ಅದಕ್ಕೆ ಕಾರಣವು ಅವರು **ಅವರು ಸತ್ಯದ ಮೇಲೆ ಪ್ರೀತಿಯನ್ನಿಡದೆ** ಇರುವದೇ ಎಂಬದಾಗಿ ಪೌಲನು ಹೇಳುತ್ತಾನೆ. ಇಂದು ಹಂತದಲ್ಲಿ ಈ ಜನರು ಸತ್ಯವನ್ನು ಪ್ರೀತಿಸುವದಕ್ಕೆ ಮತ್ತು ಆ ಕಾರಣದಿಂದ ಅದನ್ನು ಸ್ವೀಕರಿಸಿಕೊಳ್ಳುವದಕ್ಕೆ ನಿರಾಕರಿಸಿದ್ದರು. ಅವರು ಯಾವದು ಸತ್ಯವೆಂದು, ಸುವಾರ್ತೆ ಅಥವಾ ಕ್ರಿಸ್ತನ ಸುವಾರ್ತೆಯನ್ನು, ತಿಳಿದಿದ್ದಾಗ್ಯೂ ಅದನ್ನು ಉದ್ದೇಶಪೂರ್ವಕವಾಗಿಯೇ ನಿರಾಕರಿಸಿದ್ದರು (ಎಫೆಸ 4:21 ರೊಂದಿಗೆ ಹೋಲಿಸಿರಿ). ಇದು "ಅವರ ಹೃದಯದ ಮನೋಭಾವವನ್ನು ವ್ಯಕ್ತಪಡಿಸುತ್ತದೆ . . . [ಅದು] ನಿತ್ಯವಾದ ಪರಿಣಾಮಗಳಿಂದ ಭರ್ತಿಯಾಗಿರುತ್ತದೆ."[19] ಸತ್ಯವನ್ನು ಪ್ರೀತಿಸುವವನು **ರಕ್ಷಣೆಯನ್ನು** ಹೊಂದಬಲ್ಲನು, ಅಥವಾ ನಿತ್ಯವಾಗಿ ದೇವರೊಂದಿಗೆ ಸಂಧಾನಗೊಳ್ಳಬಲ್ಲನು, ಆದರೆ ಈಗ ಮೋಸಕ್ಕೊಳಗಾಗುತ್ತಿರುವವರು ದೇವರೊಂದಿಗೆ ಸಂಧಾನವಾಗುವದಕ್ಕೆ ದೂರವಾಗಿ ವಿರುದ್ಧವಾದ ದಿಕ್ಕಿಗೆ ಹೋಗುವದಕ್ಕೆ ಇಚ್ಛಾಪೂರ್ವಕವಾಗಿಯೇ ಆರಿಸಿಕೊಂಡವರಾಗಿದ್ದಾರೆ.

ಈ ವಿಧವಾದ ವ್ಯಕ್ತಿಯ ಕುರಿತೇ ಮುಂದಿನ ವಚನವು ಮಾತಾಡುತ್ತದೆ.

**ವಚನ 11. ಅದೇ ಕಾರಣದಿಂದ** ಎಂಬುದು 10ನೇ ವಚನವನ್ನು ಸೂಚಿಸುತ್ತದೆ ಯಾಕೆಂದರೆ ಅವರು ಸತ್ಯವನ್ನು ಪ್ರೀತಿಸಿ ಅದನ್ನು ಸ್ವೀಕರಿಸಿಕೊಳ್ಳಬಾರದೆಂದು ತೀರ್ಮಾನಿಸಿದ್ದರು. ಆದದರಿಂದ **ದೇವರು ಅಸತ್ಯನಡಿಸುವ ಭ್ರಮೆಯನ್ನು ಅವರಲ್ಲಿಗೆ ಕಳುಹಿಸುವನು.** "ಅವರಲ್ಲಿಗೆ ಕಳುಹಿಸಿ" ಎಂಬುದು "ಅಧರ್ಮಸ್ವರೂಪನು ಪ್ರತ್ಯಕ್ಷಗೊಳ್ಳುವ ಭವಿಷ್ಯದ (ಪ್ರವಾದನಾ) ಪ್ರಸ್ತುತ ಕಾಲ" ಆಗಿದೆ.[20]

ದೇವರು ಯಾವ ಅರ್ಥದಲ್ಲಿ ಅಂತಹ ಭ್ರಮೆಯನ್ನು ಕಳುಹಿಸುವನು? ಒಂದು ಅರ್ಥದಲ್ಲಿ ಲೋಕದ ನಾಟಕವನ್ನು ನಿಯಂತ್ರಿಸುವವನಾಗಿ ಒಬ್ಬ ವ್ಯಕ್ತಿಯು ಕ್ರಿಸ್ತನ ಮತ್ತು ಸತ್ಯಕ್ಕೆ ವಿರುದ್ಧವಾಗಿ ತೀರ್ಮಾನವೊಂದನ್ನು ಮಾಡಿಕೊಂಡರೆ ಆತನಿಗೆ ಹೋಗುವದಕ್ಕೆ ಇರುವದು ಒಂದೇ ಒಂದು ದಾರಿ ಉಳಿಯುತ್ತದೆ-ಅದು ಸೈತಾನನ ಮತ್ತು ದೋಷದ ಕಡೆಗೆ-ಎಂಬದಾಗಿ ಆತನು ಕಟ್ಟಳೆಯನ್ನು ಮಾಡಿರುತ್ತಾನೆ. ಸತ್ಯವನ್ನು ತಿರಸ್ಕರಿಸುವನು ಸುಳ್ಳನ್ನು ಹಿಂಬಾಲಿಸುತ್ತಾನೆಂಬ ತತ್ವನ್ನು ಮಾಡಿರುವದಕ್ಕೆ ತಾನೇ ಜವಾಬ್ದಾರನಾದವನು ಎಂಬ ಅರ್ಥದಲ್ಲಿ, ದೇವರು ಅವಿಶ್ವಾಸಿಯೊಬ್ಬನಲ್ಲಿಗೆ ಅವನು "ಅಧರ್ಮಸ್ವರೂಪನು" ದೇವರಾಗಿದ್ದಾನೆ (ವ. 4) ಎಂಬ **ಸುಳ್ಳನ್ನು ನಂಬುವಂತಾ**ಗುವ ಹಾಗೆ [ಅಥವಾ ಅಂಗೀಕರಿಸಿಕೊಳ್ಳುವಂತಾಗಲು] ಒಂದು "ಬಲವಾದ ಅಸತ್ಯನಡಿಸುವ ಭ್ರಮೆಯನ್ನು" (RSV) ಕಳುಹಿಸುತ್ತಾನೆಂದು ಹೇಳಬಹುದು.

ಒಳ್ಳೆಯವನೂ ಸಕಲ ಸತ್ಯದ ಮೂಲನೂ ಆಗಿರುವ ದೇವರು, ಹೇಗೆ ಒಂದು ಸುಳ್ಳನ್ನು ನಂಬುವ ಹಾಗೆ ಒಂದು "ಭ್ರಮೆಯನ್ನು ಕಳುಹಿಸುವನು" ಎಂಬ ಸಮಸ್ಯಯು ದೇವರ ಗುರುತ್ವಾಕರ್ಷಣದ ನಿಯಮದೊಂದಿಗೆ ಸಮಾನಾರ್ಥವಾಗಿರಬಹುದಾಗಿದೆ. ಒಬ್ಬ ವ್ಯಕ್ತಿಯು ಬೆಟ್ಟದ ತುದಿಯಿಂದ ಜಿಗಿದು ಸಾಯುವವನಾಗುವಾಗ, ದೇವರು ಅವರನ್ನು ಮರಣಕ್ಕೆ "ಕಳುಹಿಸಿದನನೋ" ಅಥವಾ ಆತನು ತಾನೇ ತನ್ನನ್ನು ಕೊಂದುಕೊಂಡನೋ? ಇದನ್ನು ಪೌಲನ ದೃಷ್ಟಿಕೋನದಿಂದ ನೋಡುವಾಗ, ದೇವರು ಗುರುತ್ವಾಕರ್ಷಣದ ನಿಯಮಕ್ಕೆ ಚಾಲನೆಯನ್ನು ಕೊಟ್ಟವನಾದ್ದರಿಂದ ಇದನ್ನು ಮಾಡುವವನಾಗಿದ್ದಾನೆ. ಖಂಡಿತವಾಗಿಯೂ ನೆನಪಿಟ್ಟುಕೊಳ್ಳಬೇಕಾದದ್ದೇನೆಂದರೆ ಗುರುತ್ವಾಕರ್ಷಣದ ನಿಯಮಯದಿಂದ ತಾನು ಜೀವವನ್ನು ಪ್ರೀತಿಸುವದಿಲ್ಲ ಎಂದು ಈಗಾಗಲೇ ತೀರ್ಮಾನ ಮಾಡಿಕೊಳ್ಳದಿರುವ ಯಾವನನ್ನೂ ದೇವರು ಮರಣಕ್ಕೆ "ಕಳುಹಿಸು" ವದಿಲ್ಲ. ಆತನು ಈಗಾಗಲೇ ಜೀವಿಸುವದರ ವಿರುದ್ಧವಾಗಿ ತೀರ್ಮಾನಿಸಿಕೊಂಡಿರುತ್ತಾನೆ.

ಈ ವಿಧದಲ್ಲಿ, ದೇವರು ಕೆಲವೊಂದು ಜನರಲ್ಲಿಗೆ ಭ್ರಮೆಯನ್ನು ಮತ್ತು ಸುಳ್ಳನ್ನು ನಂಬುವಿಕೆಯನ್ನು "ಕಳುಹಿಸು" ತ್ತಾನೆ. ದೇವರ ಕಟ್ಟಳೆಗಳ ಸ್ವಭಾವದಲ್ಲಿ, ಕೆಲವೊಂದು ಜನರು ಸುಳ್ಳನ್ನು ಅಂಗೀಕರಿಸಿಕೊಂಡು ನಾಶಗೊಳ್ಳುವದು ಮತ್ತು ದೇವರು ಈ ನಾಶನವನ್ನು ಅವರ ಮೇಲೆ "ಕಳುಹಿಸುತ್ತಾನೆ" ಎಂಬುದು ಸ್ಫುಟವಾಗಿರುತ್ತದೆ. ಪುನಃ, ಈಗಾಗಲೇ ಸತ್ಯವನ್ನು ಪ್ರೀತಿಸುವದಕ್ಕೆ ನಿರಾಕರಿಸುವವರಿಗೆ ಮಾತ್ರವೇ ಇದನ್ನು ಮಾಡುತ್ತಾನೆ. ಅವರು ಸತ್ಯದ ಮಾರ್ಗವನ್ನು ನಿರಾಕರಿಸಿದ್ದಾರಾದ್ದರಿಂದ, ಅವರು ನಡೆಯುವದಕ್ಕೆ ಉಳಿದಿರುವದು ಏಕೈಕ ದಾರಿಯಾಗಿರುತ್ತದೆ: ಮೋಸ ಹೋಗುವ ಮತ್ತು

ಸುಳ್ಳನ್ನು ನಂಬುವ ಮತ್ತು ನಾಶಗೊಳ್ಳುವ ಮಾರ್ಗ.

ಈ ವಿಷಯವನ್ನು ಆ ದೃಷ್ಟಿಕೋನದಿಂದ ನೋಡುವಾಗ, ದೇವರು ಫರೋಹನ ಹೃದಯವನ್ನು ಕಠಿಣಗೊಳಿಸಿದನು (ವಿಮೋಚನಕಾಂಡ 9:12). ಸತ್ಯದ ವಿರುದ್ಧವಾಗಿ ತೀರ್ಮಾನವನ್ನು ಮಾಡಿಕೊಳ್ಳುವವರಿಗೆ ಮಾತ್ರವೇ ದೇವರು ಇದನ್ನು ಮಾಡುವನು (ವ. 10); ಆದ್ದರಿಂದ ಇನ್ನೊಂದು ಅರ್ಥದಲ್ಲಿ ಆ ವ್ಯಕ್ತಿಯೇ ಸ್ವತಃ ಜವಾಬ್ದಾರನಾಗಿದ್ದಾನೆ. ವಾಸ್ತವದಲ್ಲಿ, ಫರೋಹನು ತನ್ನ ಹೃದಯವನ್ನು ಕಠಿಣ ಮಾಡಿಕೊಂಡನು ಎಂದು ಸಹ ಬೈಬಲ್ ಹೇಳುತ್ತದೆ (ವಿಮೋಚನಕಾಂಡ 8:32). 2 ಥೆಸಲೋನಿಕ 2 ರಲ್ಲಿ ಭ್ರಮೆಯೊಳಗಿರುವ ಜನರು, ಈಗಾಗಲೇ ಗಮನಿಸಿರುವ ಹಾಗೆ, ಅವರು ಸತ್ಯವನ್ನು ಪ್ರೀತಿಸದ ಕಾರಣ ಅದನ್ನು ತಿರಸ್ಕರಿಸಿದ್ದರು ಎಂಬದೆ (ವ. 10). ಆದದರಿಂದ, ಅವರು "ಅಧರ್ಮಸ್ವರೂಪನು" ದೇವರಾಗಿದ್ದಾನೆ ಎಂಬ ಸುಳ್ಳನ್ನು ಅಂಗೀಕರಿಸಿಕೊಂಡಿದ್ದರು (ವ. 4).

**ವಚನ 12.** ಒಮ್ಮೆ ಈ ಜನರು "ಸತ್ಯವನ್ನು ಪ್ರೀತಿಸದಿರುವ" ತೀರ್ಮಾನವನ್ನು ಮಾಡಿಕೊಂಡರೆ, ಅವರು ಆ ದೊಡ್ಡ ಮತ್ತು ಅಂತಿಮವಾದ ಲೆಕ್ಕಗಳನ್ನು ಸಮತೋಲನಗೊಳಿಸುವ ದಿನದಂದು **ನ್ಯಾಯತೀರ್ಪಿಗೆ ಒಳಗಾಗುವಂತೆ** ಅಥವಾ ದೋಷಿಗಳೆಂದು ತೀರ್ಪು ಹೊಂದುವ ಹಾಗೆ, ದೇವರು ತಾನು ನೇಮಿಸಿರುವ ಕಟ್ಟಳೆಯ ಪ್ರಕಾರ ಅವರನ್ನು ಇನ್ನಷ್ಟು ಹೆಚ್ಚೆಚ್ಚಾಗಿ ಸುಳ್ಳು ಹಾಗೂ ನಾಶನದ ದಾರಿಯಲ್ಲಿ-ಸತ್ಯ ಮತ್ತು ರಕ್ಷಣೆಗಳನ್ನು ಬಿಟ್ಟರೆ ಉಳಿದಿರುವ ಬೇರೆ ಒಂದೇ ಒಂದು ದಾರಿ-"ಕಳುಹಿಸುವನು." ಈ ಮುಂದಿನ ಕ್ರಮವನ್ನು ತೆಗೆದುಕೊಳ್ಳುವದಕ್ಕೆ ಕಾರಣವೇನೆಂದರೆ ಅವರು **ಸತ್ಯವನ್ನು ನಂಬದೆ** ಹೋದರು ಮತ್ತು ಸುವಾರ್ತೆಯು ಅವರಿಗೆ ತಿಳಿಸಲ್ಪಟ್ಟಾಗ ಅದನ್ನು ಅವರು ಸುಳ್ಳೆಂದು ತಿರಸ್ಕರಿಸಿದರು ಎಂಬದೆ (ವ. 10). ಈ ಅವಿಶ್ವಾಸಿಗಳು "ನ್ಯಾಯತೀರಿಸಲ್ಪಡುವದು," ಅದು κρίνω (*krinō*) ಎಂಬ ಗ್ರೀಕ್ ಪದದಿಂದ ಬಂದದ್ದು, ಅದು 1:5ರಲ್ಲಿ ಬಳಸಲಾಗಿರುವ ನಾಮಪದದೊಂದಿಗೆ ಸಂಬಂಧಿಸಿರುತ್ತದೆ.[21] ನಿಜವಾದ ಕಾರಣವು ಅವರು **ದುಷ್ಟತನದಲ್ಲಿ ಆನಂದಪಡುವವರಾಗಿದ್ದರು**, ಅಥವಾ "ಅನೀತಿಯಲ್ಲಿ ಆನಂದಿಸಿದರು" (RSV) ಎಂಬದೆ ಎಂಬುದನ್ನು ಪೌಲನು ಪುನಃ ಒತ್ತಿಹೇಳುತ್ತಾನೆ. 10ನೇ ವಚನದಲ್ಲಿನ "ಅವರು ಸತ್ಯದ ಮೇಲೆ ಪ್ರೀತಿಯನ್ನಿಡದ ಕಾರಣ" ಎಂಬ ಪದಗುಚ್ಛವನ್ನು "ಕರ್ತನ ಧರ್ಮಶಾಸ್ತ್ರದಲ್ಲಿ ಆನಂದಪಡುವವನಾಗಿ" (ಕೀರ್ತನೆ 1:2) ಎಂಬುದರೊಂದಿಗೆ ಹೋಲಿಸಿರಿ.

## ಸ್ತೋತ್ರಾರ್ಪಣೆ ಮತ್ತು ಬುದ್ಧಿವಾದ (2:13-15)

**13ಕರ್ತನಿಗೆ ಪ್ರಿಯರಾಗಿರುವ ಸಹೋದರರೇ, ನೀವು ಪವಿತ್ರಾತ್ಮನಿಂದ ಶುದ್ಧೀಕರಿಸಲ್ಪಟ್ಟವರಾಗಿ ಸತ್ಯದ ಮೇಲೆ ನಂಬಿಕೆಯನ್ನಿಟ್ಟು ರಕ್ಷಣೆಯನ್ನು ಪಡೆಯುವದಕ್ಕಾಗಿ ದೇವರು ನಿಮ್ಮನ್ನು ಆದಿಯಿಂದ ಆರಿಸಿಕೊಂಡದರಿಂದ ನಾವು ನಿಮ್ಮ ವಿಷಯದಲ್ಲಿ ಯಾವಾಗಲೂ ದೇವರಿಗೆ ಕೃತಜ್ಞತಾಸ್ತುತಿಮಾಡುವದಕ್ಕೆ ಬದ್ಧರಾಗಿದ್ದೇವೆ. 14ನೀವು ಹೀಗೆ ರಕ್ಷಿಸಲ್ಪಟ್ಟು ನಮ್ಮ ಕರ್ತನಾದ ಯೇಸು ಕ್ರಿಸ್ತನ ಪ್ರಭಾವವನ್ನು ಸಂಪಾದಿಸಿಕೊಳ್ಳಬೇಕೆಂದು ದೇವರು ನಮ್ಮ ಸುವಾರ್ತೆಯ ಮೂಲಕವಾಗಿ ನಿಮ್ಮನ್ನು ಕರೆದನು. 15ಹೀಗಿರುವದರಿಂದ**

**ಸಹೋದರರೇ, ದೃಢವಾಗಿ ನಿಲ್ಲಿರಿ. ನಾವು ಮಾತಿನಿಂದಾಗಲಿ ಪತ್ರಿಕೆಯಿಂದಾಗಲಿ ನಿಮಗೆ ತಿಳಿಸಿದ ಬೋಧನೆಗಳನ್ನು ನೀವು ಭದ್ರವಾಗಿ ಹಿಡಿದುಕೊಂಡಿರ್ರಿ.**

**ವಚನ 13.** ನಾವು **ದೇವರಿಗೆ ಕೃತಜ್ಞತಾಸ್ತುತಿಮಾಡುವದಕ್ಕೆ ಬದ್ಧರಾಗಿದ್ದೇವೆ** [ಯಾಕೆಂದರೆ ಇದು ನಮ್ಮ ಕರ್ತವ್ಯ]. ದೇವರು, ಕ್ರಿಸ್ತನ ಮೂಲಕವಾಗಿ ಅವರನ್ನು ತನಗೆ ಸಂಧಾನಪಡಿಸಿಕೊಂಡಿದ್ದನು, ಹಾಗೆ ಮಾಡುವ ಮೂಲಕ ಪೌಲನಂತಹ ತನ್ನ ಇತರ ಜನರೊಂದಿಗೆ ಸಂಬಂಧವನ್ನು ಇಟ್ಟುಕೊಳ್ಳುವದನ್ನು ಸಾಧ್ಯಗೊಳಿಸಿದ್ದನು (1:3ರ ಮೇಲಿನ ಚರ್ಚೆಯನ್ನು ನೋಡಿರಿ). ಖಂಡಿತವಾಗಿಯೂ ನಾವು ಸಹ ನಮ್ಮ **ಸಹೋದರರ** ವಿಷಯದಲ್ಲಿ ಕೃತಜ್ಞತಾಸ್ತುತಿ ಮಾಡುವವರಾಗಿರ "ಬೇಕು." ನಾವು 1 ಥೆಸಲೋನಿಕ 1:4 ರಲ್ಲಿ ನೋಡಿದ ಪ್ರಕಾರ, "ಸಹೋದರರೇ" ಎಂಬುದು ಒಂದು ಅಕ್ಕರೆಯ ಪದವಾಗಿದ್ದು ಪೌಲನು ಅದನ್ನು ಆಗಾಗ್ಗೆ ಬಳಸುತ್ತಾನೆ-ಥೆಸಲೋನಿಕದವರಿಗೆ ಬರೆದ ಎರಡು ಪತ್ರಿಕೆಗಳಲ್ಲಿ ಇಪ್ಪತ್ತುಕ್ಕೂ ಹೆಚ್ಚು ಸಾರಿ ಬಳಸುತ್ತಾನೆ.[22] ನಾವು ಅದನ್ನು ಹೆಚ್ಚಾಗಿ ಬಳಸಬಾರದೋ?

ಎಲ್ಲಾ ಜನರು **ಕರ್ತನಿಗೆ ಪ್ರಿಯರಾಗಿರುವ**ವರು (ಯೋಹಾನ 3:16), ಆದರೆ ದೇವರ ಪ್ರೀತಿಯ ಆಲಾಪನೆಗಳನ್ನು ಅಂಗೀಕರಿಸಿಕೊಂಡಿರುವ ಕ್ರೈಸ್ತರು ಮಾತ್ರವೇ ಒಂದು ವಿಶೇಷವಾದ ಅರ್ಥದಲ್ಲಿ "ಕರ್ತನಿಗೆ ಪ್ರಿಯರಾಗಿರುತ್ತಾರೆ" (ನೋಡಿರಿ ಯೂದನು 21). ಅವರು ಕ್ರಿಸ್ತನ ಮೂಲಕ ಆತನಿಗೆ ಸಂಧಾನಪಡಿಸಲ್ಪಟ್ಟಿದ್ದಾರೆ (2 ಕೊರಿಂಥ 5:19). **ರಕ್ಷಣೆಯನ್ನು ಪಡೆಯುವದಕ್ಕಾಗಿ ದೇವರು** [ಅವರನ್ನು] **ಆದಿಯಿಂದ ಆರಿಸಿಕೊಂಡದರಿಂದ** ಪೌಲನು ಅವರಿಗೋಸ್ಕರ ದೇವರಿಗೆ ಕೃತಜ್ಞತಾಸ್ತುತಿ ಮಾಡುವದಕ್ಕೆ ಬದ್ಧನಾಗಿದ್ದಾನೆ ಎಂದು ಹೇಳುತ್ತಾ ಮುಂದುವರೆಸುತ್ತಾನೆ. ಕೆಲವು ಪ್ರಾಚೀನ ಹಸ್ತಪ್ರತಿಗಳಲ್ಲಿ "ಆದಿಯಿಂದ" ಎಂಬುದರ ಬದಲಾಗಿ "ದೇವರು ನಿಮ್ಮನ್ನು ಪ್ರಥಮಫಲವಾಗಿ ಆರಿಸಿಕೊಂಡನು" (NEB ಅಡಿಟಿಪ್ಪಣಿ ನೋಡಿರಿ) ಎಂದಿರುತ್ತದೆ. ಹೇಗೂ, Morrisನು "ಆದಿಯಿಂದ" ಎಂಬುದಕ್ಕೆ ಒಲವು ತೋರಿಸುತ್ತಾನೆ. ಆತನು ಹೀಗೆ ಬರೆಯುತ್ತಾನೆ:

> ವ್ಯತ್ಯಾಸವಾಗಿ ಬರೆಯಲ್ಪಟ್ಟಿರುವ, ἀπαρξήν [aparxēn], "ಪ್ರಥಮಫಲವಾಗಿ" ಎಂಬುದಕ್ಕೆ ಕೆಲವು ವ್ಯಾಖ್ಯಾನಕಾರರು ಆದ್ಯತೆ ಕೊಡುತ್ತಾರೆ. ಅರ್ಥವು ಇನ್ನೂ ಬರಬೇಕಾಗಿರುವವರೊಂದಿಗೆ ವಿರುದ್ಧ ಹೋಲಿಕೆಯಾಗಿರುತ್ತದೆ. . . . ಎರಡೂ ವಿಧವಾದ ವಾಕ್ಯಕ್ಕೆ ಹಸ್ತಪ್ರತಿಗಳ ಆಧಾರಗಳಿರುತ್ತವೆ. ಪ್ರತಿಲೇಖನದ ಸಂಭಾವ್ಯತೆಯು ["ಆದಿಯಿಂದ"] ಎಂಬುದಕ್ಕೆ ಒಲವು ತೋರಬಹುದು, ಯಾಕೆಂದರೆ ಇದು ಪೌಲನ ವೈಶಿಷ್ಟ್ಯವಾದ ಮಾತು ಆಗಿರುವದಿಲ್ಲ. . . .[23]

ನಾವು "ಆದಿಯಿಂದ" ಎಂಬುದನ್ನು ಆರಿಸಿಕೊಳ್ಳುವದಾದರೆ, "ಯಾವದರ ಆದಿಯಿಂದ?" ಎಂಬ ಪ್ರಶ್ನೆಯನ್ನು ಕೇಳಿಕೊಳ್ಳಬೇಕಾಗುತ್ತದೆ. ಅದು ಪೌಲನ ಸೇವೆಯ ಆದಿಯಿಂದಲೋ, ಅಥವಾ ದೇವರು ರಕ್ಷಣೆಯ ಉದ್ದೇಶವನ್ನು ಮಾಡಿಕೊಂಡ ಆದಿಯಿಂದಲೋ? "ಆದಿಯಿಂದ" ಎಂಬುದು ಸರಿಯಾದ ವಾಚನವಾಗಿದ್ದಲ್ಲಿ, ಪೌಲನ ಸೇವೆಯ ಆದಿಯಿಂದ ಎಂಬುದು ಸರಿಯಾದದ್ದಾಗಿರುವದು. ಹೇಗೂ, "ಆದಿಯಿಂದ" ಎಂಬುದು ಉತ್ತಮವಾದ ಪರಿಹಾರವೆಂದು ತೋರುವದಿಲ್ಲ. ಬದಲಾಗಿ, ಹೆಚ್ಚು ಸಂಭಾವ್ಯವಾದ ವಾಚನವೆಂದರೆ

“ಆತನ ಪ್ರಥಮಫಲಗಳಾಗಿ” ಎಂಬುದೆ. ವಾಸ್ತವಾಶಂದಲ್ಲಿ, “ಆತನ ಪ್ರಥಮ ಫಲಗಳಾಗಿ” ಎಂಬುದಕ್ಕೆ B ಸ್ಥಾನವನ್ನು ಕೊಡುತ್ತಾ UBS ಬೆಂಬಲಿಸುತ್ತದೆ.[24] ಈ ವಾಚನದೊಂದಿಗೆ, “ಪ್ರಥಮಫಲಗಳು” ಎಂಬುದು ಮಕೆದೋನ್ಯದಲ್ಲಿ ಕ್ರೈಸ್ತರಾದವರಲ್ಲಿ ಪ್ರಥಮರು ಎಂಬದನ್ನು ಸೂಚಿಸುವ ಸಾಧ್ಯತೆಯಿರುತ್ತದೆ. ಇದು ಹೀಗೆಯೇ ಇರುವದಾದಲ್ಲಿ, ದೇವರು ಯಾವಾಗ ಈ ಪ್ರಥಮ ಪರಿವರ್ತಕರನ್ನು “ಆರಿಸಿಕೊಂಡು” ಇರಬಹುದು?

ಪೌಲನ ಬರಹಗಳಲ್ಲಿ ಇದೇ ಭಾವನೆಯ ಬಗ್ಗೆ ಮಾತಾಡುವ ಬೇರೆ ವಾಕ್ಯಭಾಗಗಳಿಂದ ತೀರ್ಮಾನಿಸಿ ನೋಡುವದಾದರೆ, ಇದು ಬಹುಶಃ ಮನುಷ್ಯನ ರಕ್ಷಣೆಯ ಕುರಿತು ದೇವರು ಉದ್ದೇಶಿಸಿ ಯೋಜನೆಯನ್ನು ಮಾಡಿದ ಆದಿ ಎಂದಾಗಿರಬಹುದಾಗಿದೆ. ಈ ಆಲೋಚನೆಯನ್ನು ಎಫೆಸ 1:4ರೊಂದಿಗೆ ಹೋಲಿಸಿರಿ (NIV), ಅಲ್ಲಿ ಪೌಲನು ಹೀಗೆ ಹೇಳುತ್ತಾನೆ, “ನಾವು . . . ಪರಿಶುದ್ಧರು . . . ಆಗಿರಬೇಕೆಂದು ನಮ್ಮನ್ನು ಜಗದುತ್ಪತ್ತಿಗೆ ಮುಂಚೆ ಕ್ರಿಸ್ತನಲ್ಲಿ ಆರಿಸಿಕೊಂಡನು.” (ಅಲ್ಲದೆ ಎಫೆಸ 3:5-9; 1 ಕೊರಿಂಥ 2:7ನ್ನು ಸಹ ನೋಡಿರಿ.) ದೇವರು ಕ್ರೈಸ್ತರನ್ನು “ಜಗದುತ್ಪತ್ತಿಗೆ ಮುಂಚೆ” ಆರಿಸಿಕೊಂಡನೆಂಬ ಸತ್ಯವನ್ನು ಎಫೆಸ 1:4 ಒತ್ತಿ ಹೇಳುತ್ತದೆ, ಮತ್ತು ಅನ್ಯಜನರು ಸಹ ಈ ಆರಿಸಿಕೊಂಡವರ ಗುಂಪಿನಲ್ಲಿ ಸೇರಿರುತ್ತಾರೆಂಬುದನ್ನು ಎಫೆಸ 3:5-9 ವಚನಗಳು ಒತ್ತಿ ಹೇಳುತ್ತವೆ. ದೇವರು ಮನುಷ್ಯನ ಬೀಳುವಿಕೆ ಮತ್ತು ತನಗೆ ವಿಧೇಯರಾಗುವವರನ್ನು ಬಿಡುಗಡೆಗೊಳಿಸುವದಕ್ಕಾಗಿ ತನ್ನ ಮಗನನ್ನು ಕೊಡಬೇಕಾದ ಅವಶ್ಯಕತೆಯ ಎರಡನ್ನೂ ಮುಂದಾಗಿ ಕಂಡನು. ಆದುದರಿಂಧ, ಭವಿಷ್ಯವನ್ನು ಮುಂದಾಗಿ ಕಾಣುವ ತನ್ನ ಅದ್ಭುತ ಶಕ್ತಿಯೊಂದಿದೆ, ಆತನು ಕೆಲವರನ್ನು “ರಕ್ಷಣೆ ಹೊಂದುವದಕ್ಕೆ” “ಆರಿಸಿಕೊಂಡನು.”

ಖಂಡಿತವಾಗಿಯೂ, ಇದು ಮನುಷ್ಯನ ಸ್ವಂತ ಆಯ್ಕೆಯ ಕುರಿತು ಪ್ರಶ್ನೆಯನ್ನು ಎಬ್ಬಿಸುತ್ತದೆ. ದೇವರು ಮುಂದಾಗಿ ಕಂಡವನಾಗಿ ಆರಿಸಿಕೊಂಡರೆ, ನಮ್ಮ ಕಡೆಯಿಂದ ಸ್ವೇಚ್ಛಾಚಿತ್ತದ ಬಳಕೆ ಮಾಡುವದನ್ನು ಅದು ಹೊರಗಿಡುವದಿಲ್ಲವೊ? ನಾವು ಏನೇ ಆಯ್ಕೆಯನ್ನು ಮಾಡಿಕೊಂಡರೂ ಸರಿಯೇ, ರಕ್ಷಣೆ ಇಲ್ಲವೆ ನಾಶನಕ್ಕೆ ಮುಂಚೆಯೇ ನೇಮಿಸಲ್ಪಟ್ಟಿರುವದಿಲ್ಲವೋ? ಖಂಡಿತವಾಗಿಯೂ ಇಲ್ಲ. ದೇವರು ವ್ಯಕ್ತಿಗಳನ್ನು ಆರಿಸಿಕೊಳ್ಳಲಿಲ್ಲ; ಆತನು ವ್ಯಾಪಕವಾದ ವರ್ಗಗಳ ಜನರನ್ನು “ಆರಿಸಿಕೊಂಡನು.” ಹಳೆಯ ಒಡಂಬಡಿಕೆಯ ಕಾಲಗಳಲ್ಲಿ, ದೇವರಿಂದ ನಿಜವಾಗಿಯೂ “ಆದುಕೊಂಡವರು” ಯಾರೆಂದರೆ ಪ್ರವಾದಿಗಳ ಮೂಲಕ ಕೊಡಲ್ಪಟ್ಟ ಆತನ ವಾಕ್ಯಕ್ಕೆ ವಿಧೇಯರಾದವರೇ ಆಗಿದ್ದಾರೆ (ಧರ್ಮೋಪದೇಶಕಾಂಡ 18:14-20). ನಿಶ್ಚಯವಾಗಿಯೂ, ಇದು ಎಲ್ಲಾ ಪ್ರವಾದಿಗಳಿಗಿಂತಲೂ ಅತ್ಯಂತ ಶ್ರೇಷ್ಠನಾದ ಯೇಸು ಕ್ರಿಸ್ತನ ವಿಷಯದಲ್ಲಿ ಅಷ್ಟೇ ಸತ್ಯವಾದದ್ದು (ಇಬ್ರಿಯ 5:8, 9), ಆತನು ದೇವರಿಗೆ ವಿಧೇಯರಾಗುವ ಅನೇಕ ಅನ್ಯಜನರನ್ನು ತನ್ನ ಹಿಂಬಾಲಕರೊಳಗೆ ಸೇರಿಸಿಕೊಳ್ಳಲಿದ್ದನು (ನೋಡಿರಿ ರೋಮಾ 9:23-26, ಅದು ಹೋಶೇಯ 1:10; 2:23ನ್ನು ಉಲ್ಲೇಖಿಸುತ್ತದೆ). ವಾಸ್ತವಿಕದಲ್ಲಿ ಹೇಳಲ್ಪಡುತ್ತಿರುವದೇನೆಂದರೆ ದೇವರು, ಕ್ರಿಸ್ತನಿಗೆ ವಿಧೇಯರಾಗಲಿದ್ದವರೆಲ್ಲರನ್ನು ರಕ್ಷೀಸುವದಕ್ಕೆ ಮತ್ತು ಆತನಿಗೆ ವಿಧೇಯರಾಗದವರನ್ನು ದಂಡನೆಗೆ ಗುರಿಮಾಡುವ ಯೋಜನೆಯನ್ನು ಜಗದುತ್ಪತ್ತಿಗೆ ಮುಂಚೆ ಮಾಡಿದ್ದನು ಎಂಬದೆ. ಒಬ್ಬನು ತನ್ನನ್ನು ಯಾವ

ವರ್ಗದಲ್ಲಿ ಸೇರ್ಪಡೆಗೊಳಿಸಿಕೊಳ್ಳುತ್ತಾನೆ ಎಂಬುದನ್ನು ನಿರ್ಧರಿಸಿಕೊಳ್ಳುವದಕ್ಕೆ ಸ್ವತಂತ್ರನಾಗಿದ್ದಾನೆ. ಆದುದರಿಂದ, ದೇವರು, ಜಗದುತ್ಪತ್ತಿಗೆ ಮುಂಚೆ ಈ ಎರಡು ಗುಂಪುಗಳನ್ನು ಆರಿಸಿಕೊಂಡನು ಮತ್ತು ನಾವು ಯಾವ ದಾರಿಯಲ್ಲಿ ಸಾಗುವೆವೆಂಬುದನ್ನ ಸ್ವತಃ ನಿರ್ಧರಿಸಿಕೊಳ್ಳುವದನ್ನು ನಮಗೆ ಬಿಟ್ಟಿದ್ದಾನೆ. ನಮ್ಮಲ್ಲಿ ಪ್ರತಿಯೊಬ್ಬರು ಯಾವ ದಾರಿಯಲ್ಲಿ ಹೋಗುವೆವು? ಅದು ನಮ್ಮ ಆಯ್ಕೆಗಳ ಮೇಲೆ ಆಧಾರವಾಗಿರುತ್ತದೆ. (ಪುಟ 61ರಲ್ಲಿರುವ "ದೇವರು ಏನು ಮಾಡಿದ್ದಾನೆ" ಎಂಬ ನಕ್ಷೆಯನ್ನು ನೋಡಿರಿ.)

ದೇವರು ಈ ಥೆಸಲೋನಿಕದವರನ್ನು "ರಕ್ಷಣೆಯನ್ನು ಪಡೆಯುವದಕ್ಕಾಗಿ" ಆರಿಸಿಕೊಂಡಿದ್ದನು ಯಾಕೆಂದರೆ ಅವರು ಸತ್ಯಕ್ಕೆ ವಿಧೇಯರಾದ ಕಾರಣದಿಂದ ತಮ್ಮನ್ನು ದೇವರು ರಕ್ಷಣೆಗಾಗಿ ಆರಿಸಿಕೊಂಡ ವರ್ಗದಲ್ಲಿ ಸೇರಿಸಿಕೊಂಡಿದ್ದರು. ಅವರು ಸತ್ಯವನ್ನು ಕೇಳಿಸಿಕೊಂಡಾಗ ಅದರ ಮೇಲೆ ಪ್ರೀತಿಯನ್ನಿಟ್ಟಿದ್ದರು, ಅದು "ಸತ್ಯದ ಮೇಲಿನ ಪ್ರೀತಿಯನ್ನು" ನಿರಾಕರಿಸಿದ "ಅಧರ್ಮಸ್ವರೂಪ" ಹಿಂಬಾಲಕರು ಮಾಡಿದ ಕಾರ್ಯಕ್ಕೆ ತದ್ವಿರುದ್ಧವಾದದ್ದಾಗಿದೆ (ವಚನಗಳು 8, 10). ಪೌಲನು ಮುಂದುವರೆದು ಹೇಳಿದ್ದೇನೆಂದರೆ ಈ ಥೆಸಲೋನಿಕದವರು ಎರಡು ಸಂಗತಿಗಳ **ಮೂಲಕವಾಗಿ** ರಕ್ಷಣೆ ಹೊಂದಿದ್ದರು. ಮೊದಲನೆಯದಾಗಿ, ದೈವಿಕದ ಕಡೆಯಿಂದ **ಪವಿತ್ರಾತ್ಮನಿಂದ ಶುದ್ಧೀಕರಿಸಲ್ಪಟ್ಟವರಾಗಿ,** ಮತ್ತು ಎರಡನೆಯದಾಗಿ, ಮಾನವ ಕಡೆಯಿಂದ **ಸತ್ಯದ ಮೇಲೆ ನಂಬಿಕೆಯನ್ನಿಟ್ಟ**ವರಾಗುವ ಮೂಲಕ. "ಪವಿತ್ರಾತ್ಮನಿಂದ ಶುದ್ಧೀಕರಿಸಲ್ಪಟ್ಟವರಾಗಿ" ಎಂದು ಹೇಳುವ ಮೂಲಕ, ಪೌಲನು ಇಲ್ಲಿ ಪವಿತ್ರಾತ್ಮನು ವಾಕ್ಯದ ಮೂಲಕವಾಗಿ ಮಾಡುವ ಕೆಲಸವನ್ನು ಸೂಚಿಸಿ ಹೇಳುತ್ತಿದದ್ದಾನೆ. ಯೇಸುವು "ಇವರನ್ನು ಸತ್ಯದಲ್ಲಿ ಸೇರಿಸಿ ಪ್ರತಿಷ್ಠೆಪಡಿಸು; ನಿನ್ನ ವಾಕ್ಯವೇ ಸತ್ಯವು" ಎಂದು ಪ್ರಾರ್ಥಿಸಿದನು (ಯೋಹಾನ 17:17), ಮತ್ತು ಪೌಲನು ನಮಗೆ "ಪವಿತ್ರಾತ್ಮನು ಕೊಡುವ ದೇವರ ವಾಕ್ಯವೆಂಬ ಕತ್ತಿ" ಎಂಬದಾಗಿ ಹೇಳಿದನು (ಎಫೆಸ 6:17). ಈ ಎರಡು ವಾಕ್ಯಭಾಗಗಳಿಂದ ಸ್ಪಷ್ಟವಾಗಿರುವದೇನೆಂದರೆ ಪವಿತ್ರಾತ್ಮನು ದೇವರ ವಾಕ್ಯದ ಸಾಧನ ಮೂಲಕವಾಗಿ ಶುದ್ಧೀಕರಿಸುತ್ತಾನೆ, ಅಥವಾ ಪವಿತ್ರಗೊಳಿಸುತ್ತಾನೆ. ಇದು ಪರಿವರ್ತನೆಗೊಳ್ಳುವ ಹಂತದಲ್ಲಿ ಆರಂಭಿಕ ಅರ್ಥದಲ್ಲಿ ಸಂಭವಿಸುತ್ತದೆ (1 ಕೊರಿಂಥ 1:2) ಮತ್ತು ನಿರಂತರ ಅರ್ಥದಲ್ಲಿ ಪವಿತ್ರಾತ್ಮನು ಅಂತಿಮ ರಕ್ಷಣೆಯ ಕಡೆಗೆ ಕರೆದೊಯ್ಯಲು ಕ್ರೈಸ್ತರ ಜೀವಿತಗಳಲ್ಲಿ ನಿರಂತರವಾಗಿ ಕೆಲಸವನ್ನು ಮಾಡುತ್ತಾನೆ (1 ಯೋಹಾನ 1:7; 1 ಪೇತ್ರ 1:2 ರೊಂದಿಗೆ ಹೋಲಿಸಿರಿ). ಈ ಕೆಲಸ ಮಾಡುವಿಕೆಯು ದೈವಿಕದ ಕಡೆಯಿಂದಾಗಿದೆ. ಮಾನವ ಕಡೆಯಿಂದ ಯಾವದೆಂದರೆ "ಸತ್ಯದಲ್ಲಿ ನಂಬಿಕೆಯನ್ನಿಡುವದು." "ಅಧರ್ಮಸ್ವರೂಪನ" ಸುಳ್ಳುಗಳನ್ನು ನಂಬುವದರ ಬದಲಾಗಿ (ವ. 4), ಈ ಥೆಸಲೋನಿಕದವರು ದೇವರ ಸತ್ಯವನ್ನು ನಂಬಿದ್ದರು, ಅದರ ಪ್ರಕಾರವಾಗಿ, ಆದರೆ ಯೇಸುವೇ ಕರ್ತನಾಗಿದ್ದಾನೆ, ಹೊರತು "ಅಧರ್ಮಸ್ವರೂಪ" ನು ಅಲ್ಲ. ಈ ಸತ್ಯದಲ್ಲಿ ನಂಬಿಕೆಯನ್ನಿಡುವ ಮೂಲಕ, ಒಬ್ಬನು ಪಾಪದಿಂದ ಬಿಡಿಸಲ್ಪಟ್ಟು ರಕ್ಷಣೆಯನ್ನು ಹೊಂದುವನೆಂದು ಯೇಸು ವಾಗ್ದಾನ ಮಾಡುತ್ತಾನೆ (ಯೋಹಾನ 8:32).

# ದೇವರು ಏನು ಮಾಡಿದ್ದಾನೆ

ನೀನು?

ನಾನು?

| | | |
|---|---|---|
| **ಕ್ಷಣೆಗಾಗಿ ಎಲ್ಲಾ *ವಿಧೇಯರನ್ನು* ಆರಿಸಿಕೊಂಡಿದ್ದಾನೆ** | *"ಇಷ್ಟವುಳ್ಳವನು* ಜೀವಜಲವನ್ನು ಕ್ರಯವಿಲ್ಲದೆ ತೆಗೆದುಕೊಳ್ಳಲಿ" (ಪ್ರಕಟನೆ 22:17) | ***ನಾಶನಕ್ಕಾಗಿ* ಎಲ್ಲಾ *ಅವಿಧೇಯರನ್ನು* ಆರಿಸಿಕೊಂಡಿದ್ದಾನೆ** |

ರಕ್ಷಣೆ ಹೊಂದುವದಕ್ಕೆ
ಇಷ್ಟವುಳ್ಳವರಾಗಿರುವದು
ನಮ್ಮನ್ನು "ಸತ್ಯದಲ್ಲಿ
ನಂಬಿಕೆಯನ್ನಿಡುವಂತೆ"
ನಡಿಸುತ್ತದೆ
(2 ಥೆಸಲೋನಿಕ 2:13).

**ವಚನ 14. ಆತನು** ಎಂಬುದು 13ನೇ ವಚನದಲ್ಲಿ ಪ್ರಸ್ತಾಪಿಸಲ್ಪಟ್ಟಿರುವ ತಂದೆಯಾದ ದೇವರನ್ನು ಸೂಚಿಸುತ್ತದೆ. ತಂದೆಯಾದ ದೇವರು ತನ್ನ ಮಾರ್ಗವನ್ನು ಅನುಸರಿಸುವಂತೆ ಥೆಸಲೋನಿಕದವರನ್ನು **ಕರೆದನು** (ಅಪೊಸ್ತಲರ ಕೃತ್ಯಗಳು 17:1-4). "ಮೇಲ್ಗಡೆಯಲ್ಲಿರುವ 'ಆರಿಸಿಕೊಂಡನು' ಎಂಬದರಂತೆಯೇ, 'ಕರೆದನು'" ಎಂಬುದು καλέω (*kaleō*) ಎಂಬ ಪದದಿಂದ ಬಂದದ್ದಾಗಿದ್ದು, "ಅದು ಪರಿಪೂರ್ಣ ಕಾಲರೂಪದಲ್ಲಿದ್ದು ಒಂದೇ ಕ್ರಿಯೆಯನ್ನು ಬಣ್ಣಿಸುತ್ತದೆ. 1 ಥೆಸಲೋನಿಕ 2:12; 5:24ರಲ್ಲಿರುವ ವರ್ತಮಾನ ಕಾಲರೂಪದ 'ಕರೆಯುತ್ತಾನೆ' ದೊಂದಿಗೆ ವಿರುದ್ಧ ಹೋಲಿಕೆ ಮಾಡಿರಿ."[25] ಅವರು **ನಮ್ಮ ಸುವಾರ್ತೆಯ ಮೂಲಕವಾಗಿ** "ಕರೆಯಲ್ಪಟ್ಟಿದ್ದರು." ಪೌಲನು ಮತ್ತು ಆತನ ಜೊತೆಗೆಲಸದವರು ಸುವಾರ್ತೆಯನ್ನು ಅಂಗೀಕರಿಸಿಕೊಂಡು ಅದನ್ನು ಪ್ರಚುರಪಡಿಸುವ ಜವಾಬ್ದಾರಿಯನ್ನು ತೆಗೆದುಕೊಂಡಿದ್ದರು ಎಂಬ ಅರ್ಥದಲ್ಲಿ ಪೌಲನು "ಸುವಾರ್ತೆ" ಅಥವಾ ಶುಭಸುದ್ದಿಯು ತಮ್ಮದು ಎಂದು ಹೇಳಬಲ್ಲವನಾಗಿದ್ದನು.

ಈ ಯುಗದಲ್ಲಿ ದೇವರು ಆ ಕ್ರೈಸ್ತರನ್ನು ಕರೆಯುವ ಸಾಮಾನ್ಯವಾದ ದಾರಿಯು ಪರಲೋಕದಿಂದ ಒಂದು ನೇರವಾದ ಪ್ರಕಟನೆಯನ್ನು ಕೊಡುವ ಮೂಲಕವಲ್ಲ, ಆದರೆ

ಸುವಾರ್ತೆಯ ಸಂದೇಶವನ್ನು ಸಾರುವದರ ಮೂಲಕವೇ ಆಗಿದೆ ಎಂಬುದನ್ನು ಗಮನಿಸತಕ್ಕದ್ದು. ನಾವು ಸಂದೇಶಕ್ಕೆ ವಿಧೇಯರಾಗುವಾಗ ಆ ಸಂದೇಶವು ಕ್ರಿಯಾಶೀಲವಾಗುತ್ತದೆ.

ದೇವರು ಅವರನ್ನು ಸುವಾರ್ತೆಯ ಮೂಲಕ ಕರೆದದ್ದಕ್ಕೆ ಕಾರಣವೇನೆಂದರೆ ಅವರು **ಕರ್ತನಾದ ಯೇಸು ಕ್ರಿಸ್ತನ ಪ್ರಭಾವವನ್ನು ಸಂಪಾದಿಸಿಕೊಳ್ಳಬೇಕು** [ಅಥವಾ ಅದರಲ್ಲಿ ಭಾಗಿಗಳಾಗಬೇಕು] ಎಂಬುದಕ್ಕಾಗಿಯೇ ಆಗಿತ್ತು. ಒಂದು ಅರ್ಥದಲ್ಲಿ, ಕ್ರೈಸ್ತರು ಈಗಾಗಲೇ, ಈ ಭೂಮಿಯಲ್ಲಿ ಸಹ, ಯೇಸುವಿನ "ಪ್ರಭಾವ," ಗೌರವ, ಅಥವಾ ವೈಭವದಲ್ಲಿ ಪಾಲುಗಾರರಾಗಿರುತ್ತಾರೆ. ನಾವು "ಪ್ರಭಾವದಿಂದ ಅಧಿಕಪ್ರಭಾವಕ್ಕೆ ಹೋಗುತ್ತಾ ಆ ಪ್ರಭಾವದ ಸಾರೂಪ್ಯವುಳ್ಳವರೇ ಆಗುತ್ತೇವೆ" (2 ಕೊರಿಂಥ 3:18). ಇನ್ನೊಂದು ದೊಡ್ಡದಾದ ಅರ್ಥದಲ್ಲಿ ಆತನು ಬರುವಾಗ ನಾವು "ಪ್ರಭಾವವನ್ನು ಸಂಪಾದಿಸಿಕೊಳ್ಳುವೆವು." ರೋಮಾ 8:18ನೇ ವಚನವು "ನಮಗೋಸ್ಕರ ಮುಂದಿನ ಕಾಲದಲ್ಲಿ ಪ್ರತ್ಯಕ್ಷವಾಗುವ ಮಹಿಮಪದವಿ" ಕುರಿತು ಮಾತಾಡುತ್ತದೆ ಮತ್ತು ಅಲ್ಲದೆ ಮುಂದುವರೆದು "ನಮಗೋಸ್ಕರ ಮುಂದಿನ ಕಾಲದಲ್ಲಿ ಪ್ರತ್ಯಕ್ಷವಾಗುವ ಮಹಿಮಪದವಿಗೆ ಹೋಲಿಸಿದರೆ ಈಗಿನ ಕಾಲದ ಕಷ್ಟಗಳು ಅಲ್ಪವೇ ಸರಿ" (NIV) ಎಂದು ಹೇಳುತ್ತದೆ. ಈ ವಾಕ್ಯಭಾಗದ ನಂತರದ ಭಾಗದಲ್ಲಿ ಪೌಲನು ಮುಂದುವರೆಸಿ ಸೃಷ್ಟಿಯು (ಜಗತ್ತು) "ನಾಶದ ವಶದಿಂದ ಬಿಡುಗಡೆಯಾಗಿ ದೇವರ ಮಕ್ಕಳ ಮಹಿಮೆಯುಳ್ಳ ವಿಮೋಚನೆಯಲ್ಲಿ ಪಾಲುಹೊಂದುವದು" ಎಂದು ಹೇಳುತ್ತಾನೆ (ರೋಮಾ 8:21). ಕೊಲೊಸ್ಸೆ 3:4 ಮತ್ತು ಫಿಲಿಪ್ಪಿ 3:21 ವಚನಗಳು ನಮಗೆ ದೊರಕುವ "ಪ್ರಭಾವವುಳ್ಳ ದೇಹ"ದ ಕುರಿತು ಮಾತಾಡುತ್ತದೆ (NIV). 14ನೇ ವಚನದಲ್ಲಿ ಯೇಸುವು "ನಮ್ಮ" ಕರ್ತನಾದ ಯೇಸು ಕ್ರಿಸ್ತನು ಎಂದು ಕರೆಯಲ್ಪಟ್ಟಿದ್ದು, ಅದು ಕ್ರೈಸ್ತರು ಹಾಗೂ ಆತನ ನಡುವಿನ ನಿಕಟವಾದ ಸಂಬಂಧವನ್ನು ಸೂಚಿಸುತ್ತದೆ.

**ವಚನ 15. ಹೀಗಿರುವದರಿಂದ** ಹಿಂದಿನ ವಾಸ್ತವಾಂಶವನ್ನು ಸೂಚಿಸುತ್ತಾ ಅವರು ಈ "ಪ್ರಭಾವ"ವನ್ನು ಎದುರುನೋಡುವವರಾಗಿ ಇರುವದರಿಂದ (ನೋಡಿರಿ ವ. 14), ಅವರು **ದೃಢವಾಗಿ ನಿಲ್ಲಬೇಕು** ಮತ್ತು "ಬೇಗನೆ ಬುದ್ಧಿಗೆಟ್ಟು ಚಂಚಲರಾಗುವದಕ್ಕೆ" ನಿರಾಕರಿಸಬೇಕಾಗಿತ್ತು (ವ. 2) ಅಥವಾ **ಮಾತಿನಿಂದಾಗಲಿ ಪತ್ರಿಕೆಯಿಂದಾಗಲಿ** [ಅವರಿಗೆ] **ತಿಳಿಸಿದ ಬೋಧನೆಗಳನ್ನು** ಬಿಟ್ಟು ಪಕ್ಕಕ್ಕೆ ಹೋಗಲು ನಿರಾಕರಿಸಬೇಕಾಗಿತ್ತು. ಅವರಿಗೆ ಪೌಲನು ಹಾಗೂ ಆತನ ಸಹಚರರು "ಹಸ್ತಾಂತರಿಸಿದ" (NIV) ಬೋಧನೆಗಳನ್ನು ಅವರು ಭದ್ರವಾಗಿ ಹಿಡಿದುಕೊಳ್ಳಬೇಕಿತ್ತು. ಈ ಬೋಧನೆಗಳು ಥೆಸಲೋನಿಕದಲ್ಲಿ ಪೌಲನು ಇದ್ದ ವೇಳೆಯಲ್ಲಿ ಅವರಿಗೆ "ಮಾತಿನಿಂದಾಗಲಿ" (ಅಪೊಸ್ತಲರ ಕೃತ್ಯಗಳು 17:1), ಅಥವಾ ಈ ಪತ್ರಿಕೆಯನ್ನು ಬರೆಯುವದಕ್ಕೆ ಕೆಲವು ತಿಂಗಳುಗಳ ಮುಂಚೆ ಪೌಲನು ಅವರಿಗೆ ಮೊದಲ ಪತ್ರಿಕೆಯನ್ನು ಬರೆದ "ಪತ್ರಿಕೆಯಿಂದಾಗಲಿ" ತಿಳಿಸಲ್ಪಟ್ಟಿದ್ದವು.

"ಸಂಪ್ರದಾಯಗಳು" ಅಥವಾ "ಬೋಧನೆಗಳು" (NIV) ಎಂಬುದನ್ನು ಅನುವಾದಿಸಿರುವ ಗ್ರೀಕ್ ಪದವು *παράδοσις* (*paradosis*), ಇದರರ್ಥವು "ಹಸ್ತಾಂತರಿಸುವದು ಅಥವಾ ಒಪ್ಪಿಸುವದು"[26] ಎಂದಾಗಿರುತ್ತದೆ. ಇಲ್ಲಿ ಯೋಚನೆಯು ಒಂದು ಪೀಳಿಗೆಯಿಂದ ಮತ್ತೊಂದು ಪೀಳಿಗೆಗೆ ಯಾವದೋ ಒಂದನ್ನು "ತಿಳಿಸುವದು"

ಅಥವಾ “ರವಾನಿಸುವದು” ಎಂದಾಗಿರುತ್ತದೆ. David J. Williams ಹೀಗೆ ಹೇಳುತ್ತಾನೆ:

> ಈ ಪದದ ಪ್ರಾಮುಖ್ಯವೆಂದರೆ ಅದು ಕ್ರೈಸ್ತೀಯ ಬೋಧನೆಯ ಮುಖ್ಯಭಾಗವು ಒಂದು ತಲೆಮಾರಿನಿಂದ ಮತ್ತೊಂದು ತಲೆಮಾರಿಗೆ ಹಸ್ತಾಂತರಿಸಲ್ಪಟ್ಟಿತೆಂಬುದನ್ನು ತೋರಿಸುವದು ಮಾತ್ರ ಅಲ್ಲ (1 ಕೊರಿಂಥ 11:23; 15:3), ಆದರೆ ಆತನ ಬೋಧನೆಯು ಸಭೆಗೆ ಅಧಿಕಾರಯುಕ್ತವಾದದ್ದು ಮತ್ತು ಬೋಧಕನನ್ನು ಮೀರಿ ನಿಲ್ಲುತ್ತದೆ ಎಂಬುದೆ.[27]

ಸ್ವತಃ ಈ ಪದವೇ ಒಳ್ಳೇದಾಗಲಿ ಅಥವಾ ಕೆಟ್ಟದ್ದಾಗಲಿ ಆಗಿರುವದಿಲ್ಲ. ಒಂದು ನಿರ್ದಿಷ್ಟವಾದ ಬೋಧನೆಯು ಯಾವ ಮೂಲದಿಂದ ಬರುತ್ತದೆಂಬುದರ ಮೇಲೆ ಅಂಥ ಸಂಪ್ರದಾಯವು ಒಳ್ಳೇದೋ ಅಥವಾ ಕೆಟ್ಟದ್ದೋ ಎಂಬುದು ಆಧಾರವಾಗಿರುತ್ತದೆ. ಉದಾಹರಣೆಗೆ, ಈ ವಾಕ್ಯದ “ಸಂಪ್ರದಾಯಗಳು” (ಅಲ್ಲದೆ 3:6ರಲ್ಲಿ ಸಹ ಇರುವಂತೆ) ಒಳ್ಳೆಯವುಗಳಾಗಿದ್ದವೆಂಬುದು ಕಂಡು ಬರುತ್ತದೆ, ಮತ್ತು ಆ ಕಾರಣದಿಂದ ಕೈಕೊಂಡು ನಡೆಯತಕ್ಕವುಗಳಾಗಿದ್ದವು ಯಾಕೆಂದರೆ ಅವುಗಳು ಪ್ರೇರಿತ ಅಪೊಸ್ತಲರಿಂದ ಬಂದವುಗಳಾಗಿದ್ದವು. ಹೇಗೂ, ಕೆಲವೊಂದು “ಸಂಪ್ರದಾಯಗಳಿಂದ” ದೂರವಿರತಕ್ಕದ್ದು ಯಾಕೆಂದರೆ ಅವುಗಳು ಪ್ರೇರಿತರಲ್ಲದ ಮನುಷ್ಯರಿಂದ ಬಂದವುಗಳು ಮತ್ತು ಅವುಗಳು ನಮ್ಮ ಆರಾಧನೆಯನ್ನು “ನಿರರ್ಥಕ” ಮಾಡುತ್ತವೆ (ಮತ್ತಾಯ 15:1-9). (ಪುಟ 65ರಲ್ಲಿರುವ “ಸಂಪ್ರದಾಯಗಳನ್ನು ಹಿಡಿದುಕೊಳ್ಳಿರಿ (2 ಥೆಸಲೋನಿಕ. 2:15).”

ಇಂದು ಕ್ರೈಸ್ತರು ಲಿಖಿತ ಹೊಸ ಒಡಂಬಡಿಕೆಯನ್ನು ಮಾತ್ರವೇ ಅಲ್ಲ, ಆದರೆ ಅವರ ಮೌಖಿಕ ಬೋಧನೆಗಳನ್ನು ಅಥವಾ ಮರಿಯಳು ಪರಲೋಕಾರೋಹಣಗೊಂಡಳೆಂಬ ಸಂಪ್ರದಾಯಗಳನ್ನು ಸಹ ಅನುಸರಿಸತಕ್ಕದ್ದೆಂದು ನಿರೂಪಿಸುವದಕ್ಕೆ ಪ್ರಯತ್ನಿಸುವದಕ್ಕಾಗಿ ಕ್ಯಾಥೋಲಿಕರು ಈ ವಾಕ್ಯಭಾಗವನ್ನು (ವ. 15) ಉಲ್ಲೇಖ ಮಾಡುತ್ತಾರೆ. ಹೇಗೂ, ಮೇಲೆ ಗಮನಕ್ಕೆ ತಂದ ಪ್ರಕಾರ, ಒಂದು ಸಂಪ್ರದಾಯವು ಯಾವ ಮೂಲದಿಂದ ಬಂದಿರುತ್ತದೆಂಬುದೇ ಅದನ್ನು ಒಳ್ಳೇದು ಅಥವಾ ಕೆಟ್ಟದ್ದನ್ನಾಗಿ ಮಾಡುತ್ತದೆ. ಪ್ರಶ್ನೆಯು ಏನೆಂದರೆ “ಒಂದು ಸಂಪ್ರದಾಯವು ಒಬ್ಬ ಪ್ರೇರಿತ ಮನುಷ್ಯನಿಂದ ಬಂದಿದೆಯೋ ಅಥವಾ ಇಲ್ಲವೋ ಎಂಬುದನ್ನು ಪತ್ತೆ ಹಚ್ಚಬಹುದೋ?” ಮರಿಯಳ ಪರಲೋಕಾರೋಹಣವು ಪತ್ತೆ ಹಚ್ಚಲ್ಪಡಲಾರದು; ಆದದರಿಂದ, ಅದನ್ನು ಅಂಗೀಕರಿಸಿಕೊಳ್ಳಕೂಡದು.

ಕ್ರಿ.ಶ. 51 ಅಥವಾ 52 ರಲ್ಲಿ ಥೆಸಲೋನಿಕದವರಿದ್ದ ಪರಿಸ್ಥಿತಿ ಮತ್ತು ನಮ್ಮ ಪರಿಸ್ಥಿತಿ ನಡುವಿನ ವ್ಯತ್ಯಾಸವೇನೆಂದರೆ ಆ ಕಾಲದಲ್ಲಿ ದೇವರ ಸಂಪೂರ್ಣ ವಾಕ್ಯವು ಬರೆಯಲ್ಪಟ್ಟಿರಲಿಲ್ಲ. ಅವರು ಭಾಗಶಃ ಮೌಖಿಕ ಸಂಪ್ರದಾಯಗಳ (ಬೋಧನೆಗಳ) ಮೇಲೆ ಅವಲಂಬಿತರಾಗಿರಬೇಕಿತ್ತು. ಸುಮಾರು ಕ್ರಿ.ಶ. 95ರ ಹೊತ್ತಿಗೆ, ಯೋಹಾನನು ಪ್ರಕಟನೆ ಪುಸ್ತಕವನ್ನು ಬರೆದ ವೇಳೆ, ಆ ಬಹರವು ಸಂಪೂರ್ಣಗೊಂಡಿತ್ತು. ಅಂದಿನಿಂದ, ಸರಿಯಾದ ಮೂಲದಿಂದ-ದೇವರಿಂದ ಪ್ರೇರಿತರಾದ ಮನುಷ್ಯರಿಂದ-ಬಂದ ಎಲ್ಲಾ “ಬೋಧನೆಗಳು” ಶಾಸ್ತ್ರಗಳಲ್ಲಿ ಸಿಕ್ಕುತ್ತವೆ. ಆದದರಿಂಧ, ಕೇವಲ “ಮಾತಿನಿಂದ” ಮಾತ್ರವೇ ಹಸ್ತಾಂತರಿಸಲ್ಪಟ್ಟ ಆಜ್ಞೆಯು ಇಂದು ಅನ್ವಯವಾಗುವದಿಲ್ಲ.

# ಸಂಪ್ರದಾಯಗಳನ್ನು ಹಿಡಿದುಕೊಳ್ಳಿರಿ
(2 ಥೆಸಲೋನಿಕ. 2:15)

**ಸಂಪ್ರದಾಯಗಳು (= ಬೋಧನೆಗಳು) ಹೇಗಂದರೆ:**

| ಕೆಲವು ಸಾರಿ | ಕೆಲವು ಸಾರಿ |
|---|---|
| *ಕೆಟ್ಟವುಗಳು* | *ಒಳ್ಳೆಯವವುಗಳು* |
| ಮತ್ತಾಯ 15:2, 3, 6 | 2 ಥೆಸಲೋನಿಕ 2:15 |
| (cf. ವ. 9) | 2 ಥೆಸಲೋನಿಕ 3:6 |
| | 1 ಕೊರಿಂಥ 11:2 |
| *ಮೂಲ*: | *ಮೂಲ*: |
| ಮನುಷ್ಯರು | *ಅಪೊಸ್ತಲರ ಮೂಲಕ* |
| ಮತ್ತಾಯ 15:9 | ದೇವರು |
| | 1 ಕೊರಿಂಥ 11:2 |

## ಥೆಸಲೋನಿಕದವರಿಗೋಸ್ಕರ ಪ್ರಾರ್ಥನೆ (2:16, 17)

**16 ಮತ್ತು ನಮ್ಮನ್ನು ಪ್ರೀತಿಸಿ ನಮಗೆ ನಿತ್ಯವಾದ ಆದರಣೆಯನ್ನೂ ಉತ್ತಮವಾದ ನಿರೀಕ್ಷೆಯನ್ನೂ ಕೃಪೆಯಿಂದ ಅನುಗ್ರಹಿಸಿದ ನಮ್ಮ ತಂದೆಯಾದ ದೇವರೂ ನಮ್ಮ ಕರ್ತನಾದ ಯೇಸು ಕ್ರಿಸ್ತನು ನಿಮ್ಮ ಹೃದಯಗಳನ್ನು 17 ಸಂತೈಸಿ ಸಕಲ ಸತ್ಕಾರ್ಯದಲ್ಲಿಯೂ ಸದ್ವಾಕ್ಯದಲ್ಲಿಯೂ ದೃಢಪಡಿಸಲಿ.**

**ವಚನ 16.** ಪೌಲನು ಥೆಸಲೋನಿಕದ ಸಹೋದರರಿಗೆ “ದೃಢವಾಗಿ ನಿಲ್ಲುವಂತೆ” ಹೇಳಿದ್ದನು, ಆದರೆ ಅದು ಅವರ ಮೇಲೆ ಮಾತ್ರವೇ ಅವಲಂಬಿತವಾಗಿರುವದಿಲ್ಲ ಎಂಬುದು ಆತನಿಗೆ ಗೊತ್ತಿತ್ತು. ಆದ್ದರಿಂದ ಅವರು **ನಮ್ಮ ಕರ್ತನಾದ ಯೇಸು ಕ್ರಿಸ್ತನು** [ಮೂಲಕ ಸಹಾಯವನ್ನು ಹೊಂದುವಂತಾಗಲಿ]-ಆತನು ಅವರಿಗೆ ವೈಯಕ್ತಿಕವಾಗಿ ಸಹಾಯ ಮಾಡಲಿ-ಮತ್ತು ಕ್ರೈಸ್ತರನ್ನು “ಪುತ್ರರನ್ನಾಗಿ” ಸ್ವೀಕಾರ ಮಾಡುವ (ರೋಮಾ 8:12-17) **ನಮ್ಮ ತಂದೆಯಾದ ದೇವರು** ಅವರಿಗೆ ಸಹಾಯವಾಗಲಿ ಎಂಬದಾಗಿ ಆತನು ಪ್ರಾರ್ಥನೆಯನ್ನು ಮಾಡುತ್ತಾನೆ.

1 ಥೆಸಲೋನಿಕ 3:11ಕ್ಕೆ ಹೋಲಿಸಿದರೆ, ಅಲ್ಲಿ ದೇವರು ಮೊದಲು ಹೆಸರಿಸಲ್ಪಟ್ಟಿದ್ದು, ಈ ವಾಕ್ಯಭಾಗದಲ್ಲಿ ತಂದೆಗಿಂತ ಮುಂಚೆ ಯೇಸುವಿನ ಹೆಸರನ್ನು ಪ್ರಸ್ತಾಪಿಸಿರುವದರಿಂದ, ಈ ಪತ್ರಿಕೆಯು ಪೌಲನಿಂದ ಬರೆಯಲ್ಪಟ್ಟದ್ದಲ್ಲ ಎಂಬುದಾಗಿ ಕೆಲವರು ಹೇಳುತ್ತಾರೆ. ಹೇಗೂ,

ಗಮನಿಸಿರುವ ಪ್ರಕಾರ, ಪೌಲನು ಅವರಿಗೋಸ್ಕರ ಪ್ರಾರ್ಥನೆ ಮಾಡುತ್ತಿದ್ದಾನೆ ಮತ್ತು ಯೇಸು ಅವರ "ಮಧ್ಯಸ್ಥನು" ಆಗಿದ್ದರಿಂದ (1 ತಿಮೊಥೆ 2:5), ಈ ಪದಗಳು ಬಳಸಲ್ಪಟ್ಟಿರುವ ಕ್ರಮವು ಅರ್ಥಗರ್ಭಿತವಾಗಿರುತ್ತದೆ. ಅಲ್ಲದೆ ಪೌಲನು 2 ಕೊರಿಂಥ 13:14 ಮತ್ತು ಗಲಾತ್ಯ 1:1ರಲ್ಲಿ ಸಹ ಯೇಸುವನ್ನು ಮೊದಲು ಹೆಸರಿಸಿದನು.

ಪೌಲನು ಯಾರಲ್ಲಿ ಪ್ರಾರ್ಥಿಸುತ್ತಿದ್ದಾನೋ ಆ ಮಹಾನ್ "ತಂದೆ"ಯು **ನಮ್ಮನ್ನು ಪ್ರೀತಿಸಿದ** ಅದೇ ತಂದೆಯೇ ಆಗಿದ್ದಾನೆ (ನೋಡಿರಿ ಯೋಹಾನ 3:16) ಮತ್ತು ಆ ಕಾರಣದಿಂದ **ಕೃಪೆಯಿಂದ,** ಅಥವಾ ಅನರ್ಹವಾದ ಕೃಪಾಕಟಾಕ್ಷದಿಂದ,ನಮಗೆ "ನಿತ್ಯವಾದ ಪ್ರೋತ್ಸಾಹವನ್ನು" ಕೊಟ್ಟನು (NIV). NASB ಯು **ಆದರಣೆ** ಎಂದು ಅನುವಾದಿಸುತ್ತದೆ, ಆದರೆ "ಪ್ರೋತ್ಸಾಹ" ಎಂಬುದು ಉತ್ತಮ ಅನುವಾದವಾಗಿರುತ್ತದೆ. ಈ "ಪ್ರೋತ್ಸಾಹ"ವು ನಮ್ಮನ್ನು ಎಂದಿಗೂ ಬಿಟ್ಟು ಹೋಗುವದಿಲ್ಲ. ಅದೊಂದು **ನಿತ್ಯವಾದ** ಪ್ರೋತ್ಸಾಹವಾಗಿರುತ್ತದೆ, ಏನೇ ನಡೆದರೂ ಸರಿಯೇ, ಅದು ನಮ್ಮೊಂದಿಗೆ ಉಳಿಯುತ್ತದೆ. ಅಷ್ಟು ಮಾತ್ರವಲ್ಲದೆ, ದೇವರು ನಮಗೆ **ಉತ್ತಮವಾದ ನಿರೀಕ್ಷೆಯನ್ನು** ಕೊಡಲಿ ಎಂದು ಪೌಲನು ಹೇಳುತ್ತಾನೆ, ಪೌಲನು ಈಗಷ್ಟೆ 2:14ರಲ್ಲಿ ತಿಳಿಸಿದ್ದ ಅದೇ ನಿರೀಕ್ಷೆ, ಅಂದರೆ ಆತನ "ಪ್ರಭಾವ"ದಲ್ಲಿ ಪಾಲುಗಾರರಾಗುವದನ್ನು ಎದುರುನೋಡುವಿಕೆಯೇ. ತೀತನಿಗೆ 2:13ರಲ್ಲಿ, ಪೌಲನು ನಮಗೆ "ನಮ್ಮ ಮಹಾ ದೇವರ ಮತ್ತು ನಮ್ಮ ರಕ್ಷಕನಾದ ಯೇಸು ಕ್ರಿಸ್ತನ ಪ್ರಭಾವದ ಪ್ರತ್ಯಕ್ಷತೆಯನ್ನು ಎದುರುನೋಡುತ್ತಾ" ಎಂಬದಾಗಿ ಜ್ಞಾಪಿಸುತ್ತಾನೆ.

**ವಚನ 17.** ಸಹೋದರರಿಗಾಗಿ ಪೌಲನು ಮಾಡಿದ ಪ್ರಾರ್ಥನೆ ಇದಾಗಿತ್ತು: ಅವರನ್ನು "ಪ್ರೀತಿಸಿದ" ಮತ್ತು ಅವರಿಗೆ "ನಿತ್ಯವಾದ ಆದರಣೆಯನ್ನೂ ಉತ್ತಮವಾದ ನಿರೀಕ್ಷೆಯನ್ನೂ ಕೊಟ್ಟ" (ವ. 16) ದೇವರು ಅವರನ್ನು **ಸಂತೈಸಿ** [παρακαλέω, *parakaleō*] ಅವರ "ಹೃದಯಗಳನ್ನು" **ದೃಢಪಡಿಸಲಿ** [στηρίζω, *stērizō*] ಸಹ ಎಂದಾಗಿತ್ತು.

"ಹೃದಯ" ವ್ಯಕ್ತಿಯ ಆಂತರ್ಯವಾಗಿರುತ್ತದೆ. ದೇವರು "ನಿತ್ಯವಾದ ಆದರಣೆಯನ್ನು" ಕೊಡುವದಕ್ಕೆ ಶಕ್ತನಾಗಿದ್ದನು; ಆದದರಿಂದ, ಆತನು ಅವರಿಗೆ ಅಗತ್ಯವಿದ್ದ ಆ ಕ್ಷಣದ ಪ್ರೋತ್ಸಾಹವನ್ನು ಕೊಡುವದಕ್ಕೆ ಶಕ್ತನಾಗಿದ್ದನು. "ಸಂತೈಸು" ಎಂದರೆ "ಉತ್ಸಾಹಗೊಳಿಸು" ಎಂದಾಗಿದೆ. (ಲ್ಯಾಟಿನ್ ಭಾಷೆ cor ಎಂಬುದರ ಅರ್ಥವು "ಹೃದಯ.") ಇಲ್ಲಿ ಯೋಚನೆಯು ನಿರಾಶೆಗೊಂದಿರುವ ವ್ಯಕ್ತಿಯ ಹೃದಯವನ್ನು "ಉತ್ಸಾಹಗೊಳಿಸುವದು" ಆಗಿತ್ತು. "ದೃಢಪಡಿಸು" ಅಥವಾ "ನೆಲೆಗೊಳಿಸು" (RSV) ಎಂಬುದು ಒಬ್ಬ ವ್ಯಕ್ತಿಯನ್ನು ಯಾವದೋ ಒಂದಕ್ಕೆ ದೃಢೀಕರಿಸುವದು ಎಂಬಯೋಚನೆಯನ್ನು ಸಹ ಒತ್ತಿ ಹೇಳುತ್ತದೆ. ಈ ಸಂದರ್ಭದಲ್ಲಿ, ಅದು **ಸಕಲ ಸತ್ಕಾರ್ಯದಲ್ಲಿಯೂ ಸದ್ವಾಕ್ಯದಲ್ಲಿಯೂ** ಆಗಿತ್ತು.

John Stott ನು ಈ ಕಾರ್ಯವನ್ನು ಗಮನಕ್ಕೆ ತರುತ್ತಾನೆ:

> ಅಪೊಸ್ತಲನ ಎರಡು ಪ್ರಾರ್ಥನೆಗಳೆಂದರೆ ದೇವರು ಅವರ ಹೃದಯಗಳನ್ನು ಸಂತೈಸಲಿ ಅಥವಾ ಪ್ರೋತ್ಸಾಹಗೊಳಿಸಲಿ: ಅವರನ್ನು ಆಂತರ್ಯದಲ್ಲಿ ಭದ್ರಗೊಳಿಸಿ, ಮತ್ತು ಸಕಲ ಸತ್ಕಾರ್ಯ ಮತ್ತು ಒಳಗಿನ ಬಲಕ್ಕೆ ಆಂತರಿಕ ಹಾಗೂ ಸಾರ್ವಜನಿಕ ಪುರಾವೆಯಾಗಿರುವ ವಾಕ್ಯದಲ್ಲಿ ದೃಢಪಡಸುವದು (1 ಥೆಸಲೋನಿಕ 3:13ದಲ್ಲಿರುವಂತೆ).[28]

ಅಂತಹ ಪ್ರೋತ್ಸಾಹವನ್ನು ಹೊಂದುವ ಮೂಲಕ ಥೆಸಲೋನಿಕದವರು, ಸಹಾಯಕರಿಗೆ ಸಹಾಯ ಮಾಡುವದು ಅಥವಾ ರೋಗಿಗಳನ್ನು ಭೇಟಿ ಮಾಡುವದು ಇತ್ಯಾದಿಗಳಂತಹ ಸಕಲ ಸತ್ಕಾರ್ಯಗಳಲ್ಲಿ, ಮತ್ತು ಸಂಕಟಕ್ಕೊಳಗಾದವರಿಗೆ ಸಂತೈಸುವದು, ದಾರಿ ತಪ್ಪಿದವರನ್ನು ಗದರಿಸುವದು, ಅಥವಾ ಉಪದೇಶ ತಿಳಿಯದವರಿಗೆ ಬೋಧಿಸುವದು ಇತ್ಯಾದಿಗಳಂತಹ ಸಕಲ ಸದ್ವಾಕ್ಯದಲ್ಲಿ ಭಾಗಿಯಾಗುವದರಲ್ಲಿ ಪ್ರಾಧಾನ್ಯತೆಯನ್ನು ಕೊಡುವದಕ್ಕೆ ಶಕ್ತರಾಗುವರು. ಮೂಲಭೂತವಾಗಿ, ಪೌಲನು ಹೇಳುತ್ತಿರುವದೇನೆಂದರೆ ಎರಡನೆಯ ಬರೋಣದ ವಿಷಯದಲ್ಲಿ ಬೇಸರಗೊಳ್ಳುವದರ ಬದಲಾಗಿ (ವ. 2) ಮತ್ತು ನಿರರ್ಥವಾದ ಊಹಾಪೋಹಗಳಲ್ಲಿ ಸಮಯವನ್ನು ವ್ಯರ್ಥಪಡಿಸಿಕೊಳ್ಳುವದರ ಬದಲಾಗಿ, ಅವರು ಒಳ್ಳೇ ಕಾರ್ಯಗಳನ್ನು ಮಾಡುವದರಲ್ಲಿಯೂ ಒಳ್ಳೇ ಮಾತುಗಳನ್ನಾಡುವದರಲ್ಲಿಯೂ ನಿರತರಾಗಬೇಕು ಎಂಬದೆ.

## ಹೆಚ್ಚಿನ ಅಧ್ಯಯನಕ್ಕಾಗಿ: "ಅಧರ್ಮಸ್ವರೂಪನು" (2:3-10)

ತಮ್ಮ ಪ್ರಜೆಗಳನ್ನು ಶೋಷಣೆ ಮಾಡಿರುವಂಥ, ಜನಾಂಗಗಳ ಸಂಹಾರ ಮಾಡಿರುವ, ಮತ್ತು ಬೇರೆಯವರನ್ನು ತುಳಿದು ತಮಗೋಸ್ಕರ ಬೃಯತ್ ಪ್ರಮಾಣದಲ್ಲಿ ಆಸ್ತಿಪಾಸ್ತಿಗಳನ್ನು ಕೂಡಿಸಿಕೊಂಡ ಅನೇಕ ಮಂದಿ ನಿರಂಕುಶ ಆಡಳಿತಗಾರರು ಇದ್ದರೆಂಬುದನ್ನು ಇತಿಹಾಸವು ಪ್ರಮಾಣೀಕರಿಸಬಲ್ಲದು. ಇಂಥ ರೀತಿಯ ವರ್ತನೆಗಳನ್ನು ಅಧರ್ಮ ಎಂದು ಎಣಿಸಲಾಗುತ್ತದೆ, ಕ್ರೈಸ್ತರು ಮಾತ್ರವೇ ಅಲ್ಲ, ಅಂತ.ರಾಷ್ಟ್ರೀಯ ನ್ಯಾಯಾಲಯಗಳು ಸಹ ಹಾಗೆಯೇ ಎಣಿಸುತ್ತವೆ. ಈ ರೀತಿಯ ಅಪರಾಧಿಗಳು ಭಯಂಕರವಾದ ಕೃತ್ಯಗಳನ್ನು ಮಾಡುವರು. ಅವರು ಸ್ವತಃ ಕೆಟ್ಟತನದ ತಿರುಳಿನ ಮೂರ್ತಿಗಳೇ ಆಗಿರುತ್ತಾರೆ. ಕೆಲವು ಸಂದರ್ಭಗಳಲ್ಲಿ, ಅವರು "ಅಧರ್ಮಸ್ವರೂಪಿಗಳು" ಆಗಿರುವರು.

2 ಥೆಸಲೋನಿಕ 2 ರಲ್ಲಿ, ಪೌಲನು "ಅಧರ್ಮಸ್ವರೂಪನ" ಕುರಿತು ಬರೆಯುತ್ತಾನೆ. ಈ ಮನುಷ್ಯನು "ಮತಭ್ರಷ್ಟತೆ"ಯ ಪ್ರಮುಖ ಲಕ್ಷಣವನ್ನು ಹೊಂದಿರುತ್ತಾನೆ (ವ. 3). ಅಧರ್ಮಸ್ವರೂಪನು ದೇಶವನ್ನು ವಶಪಡಿಸಿಕೊಳ್ಳುವ ಕ್ಷಿಪ್ರಕ್ರಾಂತಿಯ ಮುಂದಾಳತ್ವ ವಹಿಸಿಕೊಳ್ಳುವ ಮನುಷ್ಯನಂತಿರುತ್ತಾನೆ. ಯೇಸು ಬರಲಿರುವ ಸುಳ್ಳು ಪ್ರವಾದಿಗಳ ಕುರಿತು ಮುಂತಿಳಿಸಿದನು (ಮತ್ತಾಯ 7:15). ಪೌಲನು ಸಹ, ಒಂದು ಬಂಡಾಯದ ಸಿದ್ಧಾಂತದ ಕುರಿತು ಮುಂತಿಳಿಸಿದ್ದನು (ಅಪೊಸ್ತಲರ ಕೃತ್ಯಗಳು 20:28-30). ಈ ಅಧ್ಯಯನದಲ್ಲಿ, ಪೌಲನು ಈ "ಅಧರ್ಮಸ್ವರೂಪ"ನನ್ನು ಹೇಗೆ ಬಣ್ಣಿಸುತ್ತಾನೆಂಬುದನ್ನು ಸೂಕ್ಷ್ಮವಾಗಿ ಗಮನಿಸಲಿದ್ದೇವೆ (ವ. 3).

*ಅಧರ್ಮಸ್ವರೂಪನ ಸ್ವಭಾವವು ಹೇಗಿರುವದು?* ಪೌಲನು 7ನೇ ವಚನದಲ್ಲಿ "ಅಧರ್ಮವು ಈಗಲೂ ಗುಪ್ತವಾಗಿ ತನ್ನ ಕಾರ್ಯವನ್ನು ಸಾಧಿಸುತ್ತದೆ" ಎಂದು ಬರೆದನು. ಈ ಮನುಷ್ಯನ ಸ್ವಭಾವದ ಕುರಿತು ಆತನು ಬಹಳ ಸುವಿಸ್ತಾರವಾಗಿ ವಿವರಿಸುತ್ತಾನೆ. ಮೊದಲನೆಯದಾಗಿ, ಅಧರ್ಮಸ್ವರೂಪನು ದೇವರನ್ನು ಎದುರಿಸುತ್ತಾನೆಂದು ಆತನು ಹೇಳಿದನು (ವ. 4). ಆತನು ಸೈತಾನನಿಗೆ ಹೋಲುತ್ತಾನೆ, ಆತನ ಹೆಸರಿನ ಅರ್ಥವೇ "ಸುಳ್ಳಾಗಿ ದೋಷಾರೋಪ ಮಾಡುವವನು" ಅಥವಾ "ದೂಷಕನು" ಎಂದಾಗಿರುತ್ತದೆ. ಈ

ಮನುಷ್ಯನು ಯಾವದು ಒಳ್ಳೇದೋ ಮತ್ತು ನ್ಯಾಯವೋ ಅದೆಲ್ಲವನ್ನೂ ವಿರೋಧಿಸುವನು.

ಎರಡನೆಯದಾಗಿ, ಅಧರ್ಮಸ್ವರೂಪನು "ಯಾವದು ದೇವರೆನಿಸಿಕೊಳ್ಳುತ್ತದೋ ಯಾವದು ಪೂಜೆ ಹೊಂದುತ್ತದೋ ಅದಕ್ಕಿಂತ ಮೇಲಾಗಿ ತನ್ನನ್ನು ತಾನೇ ಹೆಚ್ಚಿಸಿಕೊಳ್ಳುವನು" (ವ. 4). ಆರಾಧನೆಗೆ ಯೋಗ್ಯನಾದ ಏಕೈಕ ವ್ಯಕ್ತಿಯಾಗಿರುವ ದೇವರಿಗೆ (ಮತ್ತಾಯ 4:10) ಆರಾಧನೆಯು ಸಲ್ಲುವಂತೆ ಬಿಟ್ಟು ಬಿಡುವ ಬದಲಾಗಿ, ಅಧರ್ಮಸ್ವರೂಪನು ತನ್ನನ್ನು ತಾನೇ ಹೆಚ್ಚಿಸಿಕೊಳ್ಳುವನು ಮತ್ತು ಆರಾಧನೆಯನ್ನು ಹೊಂದಿಕೊಳ್ಳಲು ಬಯಸುತ್ತಾನೆ. ಈ ಹೇಳಿಕೆಯೊಳಗೆ ದೌಸ್ ಹಾಗೂ ಹೆರ್ಮೆ ಎಂಬ ವಿಗ್ರಹಾರಾದಕ ಜನಾಂಗದ ದೇವರುಗಳು ಮಾತ್ರವಲ್ಲ, ಆದರೆ ಯೆಹೋವನು ಸಹ ಸೇರಿರುತ್ತಾರೆ. ಅಧರ್ಮಸ್ವರೂಪನು ಗರ್ವಿಷ್ಠನು ಹಾಗೂ ದುರಹಂಕಾರದಿಂದ ಕೂಡಿರುವವನು ಆಗಿರುತ್ತಾನೆ.

ಮೂರನೆಯದಾಗಿ, ಅಧರ್ಮಸ್ವರೂಪನು "ತಾನು ದೇವರೆಂದು ಹೇಳಿಕೊಂಡು ದೇವಾಲಯದಲ್ಲಿ (ಗರ್ಭಗುಡಿಯಲ್ಲಿ) ಕೂತುಕೊಳ್ಳುತ್ತಾನೆ" (ವ. 4). ಗ್ರೀಕ್ ಭಾಷೆಯಲ್ಲಿ ದೇವಾಲಯ ಎಂಬುದಕ್ಕಿರುವ ಪದವು ναός (*naos*), ಅದು ದೇವಾಲಯದ ಗರ್ಭಗುಡಿಯನ್ನು ಸೂಚಿಸುತ್ತದೆ, ಹೊರತು ದೇವಾಲಯದ ಇಡೀ ಸಮುಚ್ಚಯವನ್ನು ಅಲ್ಲ. ಇಲ್ಲಿ ಚಿತ್ರಣವು ದೇವರ ಸ್ಥಾನದಲ್ಲಿದ್ದುಕೊಂಡು ಆಳ್ವಿಕೆ ಮಾಡುವದಕ್ಕೆ ಅಧಿಕೃತವಾಗಿ "ಸಿಂಹಾಸನಕ್ಕೆರಲು" ಹಾರೈಸುವವನದ್ದಾಗಿದೆ. "ಕೂತುಕೊಳ್ಳುತ್ತಾನೆ" ಎಂಬುದು ಒಂದು ಅಧಿಕೃತವಾದ ಪಟ್ಟಾಭಿಷೇಕದ ಆರಂಭವನ್ನು ಸೂಚಿಸುತ್ತದೆ. "ತಾನು ದೇವರೆಂದು ಹೇಳಿಕೊಂಡು" ಎಂಬದರರ್ಥವು ಈ ದುಷ್ಟ ಮನುಷ್ಯನು ದೈವಿಕ ಅಧಿಕಾರವಿರುವಂಥ, ದೇವರೆಂಬಂತೆ ನಟಿಸುವನು. ಈ ಸಾದೃಶ್ಯವು ಯೆಶಾಯ 13ನೇ ಅಧ್ಯಾಯವನ್ನು ಜ್ಞಾಪಕ ಪಡಿಸುತ್ತದೆ, ಅದು ಬಾಬಿಲೋನಿನ ಅರಸರ ದುರಹಂಕಾರವನ್ನು ಖಂಡಿಸುವ ಒಂದು ದೈವೋಕ್ತಿಯಾಗಿರುತ್ತದೆ. ದೇವರು ಕ್ರಿ.ಪೂ. 538ರಲ್ಲಿ ಮೇದೊ-ಪರ್ಶಿಯನ್ನರ ಕೈಯಿಂದ ಬಾಬಿಲೋನಿನ ಅರಸನನ್ನು ಬೀಳಿಸಿದ ಹಾಗೆಯೇ, ಆತನು ದರ್ಪಿಷ್ಠನಾದ ಅಧರ್ಮಸ್ವರೂಪನನ್ನು ಕೆಳಕ್ಕೆ ತಳ್ಳುವನು.

ನಾಲ್ಕನೆಯದಾಗಿ, ಪೌಲನು ಅಧರ್ಮಸ್ವರೂಪನನ್ನು "ನಾಶನದ ಮಗನು (ನಾಶನಕ್ಕೆ ಅಧೀನನಾದವನು" ಎಂದು ಕರೆಯುತ್ತಾನೆ (ವ. 3). ಆತನು ದಂಡನೆಯ ತೀರ್ಪಿಗೆ ನೇಮಿಸಲ್ಪಟ್ಟಿದ್ದಾನೆ. ನೀತಿಯು ಯೇಸುವಿನ ವೈಶಿಷ್ಟ್ಯ ಲಕ್ಷಣವಾಗಿದ್ದ ಪ್ರಕಾರವೇ, ಅಧರ್ಮಸ್ವರೂಪನ ವೈಶಿಷ್ಟ್ಯ ಲಕ್ಷಣವು ಪಾಪ ಆಗಿರುತ್ತದೆ. ಕ್ರಿಸ್ತನು ಹಿಂದಿರುಗಿ ಬರುವ ವೇಳೆ, ಆತನು "[ಅಧರ್ಮಸ್ವರೂಪನನ್ನು] ಸಂಹರಿಸುವನು" (ವ. 8).

*ಈ ಅಧರ್ಮಸ್ವರೂಪನು ಯಾರು?* ಈ ಮನುಷ್ಯನು ಯಾರಾಗಿದ್ದನು ಅಥವಾ ಯಾರಾಗಿದ್ದಾನೆ ಎಂಬುದನ್ನು ನಿರ್ದಿಷ್ಟವಾಗಿ ತಿಳುಕೊಳ್ಳಲು ಸಾಧ್ಯವಿರುತ್ತದೋ? ಈ ಅಧರ್ಮಸ್ವರೂಪನ ಗುರುತಿನ ಕುರಿತಾದ ನಾಲ್ಕು ಊಹೆಗಳು ಪ್ರಮುಖವಾಗಿರುತ್ತವೆ. ಅವುಗಳೆಲ್ಲವೂ ಕಲ್ಪನೆಯಿಂದ ಹುಟ್ಟಿದವುಗಳು.

ಮೊದಲನೆಯದಾಗಿ, ಅಧರ್ಮಸ್ವರೂಪನು *ರೋಮನ್ ಕ್ಯಾಥೋಲಿಕ ಪೋಪ್‌ಗಳ ಪರಂಪರೆ* ಎಂದು ಕೆಲವರು ಹೇಳುತ್ತಾರೆ. ಪ್ರಸಿದ್ಧ Presbyterian ವ್ಯಾಖ್ಯಾನಕಾರನಾದ

Albert Barnesನು ಇದನ್ನು ನಂಬಿದ್ದನು (ವ. 4ರ ಮೇಲಿನ ಚರ್ಚೆಯನ್ನು ನೋಡಿರಿ). Barnesನ ರೀತಿಯಲ್ಲಿಯೇ J. W. McGarvey ಮತ್ತು Philip Y. Pendletonರು ಹೇಳುವದೇನೆಂದರೆ ಪೋಪಾಧಿಕಾರವು ಕರ್ತನ ಬರೋಣದ ತನಕ ಮುಂದುವರೆಯುವದಾದರೆ, ಅದು "ಪ್ರವಾದನೆಯ ಆ ಭಾಗವನ್ನು ನೆರವೇರಿಸುವದೋ ಎಂಬುದು ಪರಿಶೀಲನೆಯಲ್ಲಿರುವಂತದ್ದು."[29] McGarvey ಮತ್ತು Pendletonರು ತಮ್ಮ ಅಭಿಪ್ರಾಯಕ್ಕೆ ಬೆಂಬಲವಾಗಿ ಒಂಭತ್ತು ಕಾರಣಗಳನ್ನು ನೀಡುತ್ತಾರೆ. (1) ಕ್ಯಾಥೋಲಿಕತ್ವವು ದುರಹಂಕಾರದ ಹಕ್ಕು ಪ್ರತಿಪಾದನೆ ಮಾಡಿಕೊಳ್ಳುವ ಏಕ ಅಧಿಕೃತ ಮುಖ್ಯಸ್ಥನನ್ನು ಹೊಂದಿದೆ. (2) ಪೌಲನು ಬಣ್ಣಿಸಿದ ಪ್ರಕಾರವೇ, ಪೋಪ್‌ನು ಮತಭ್ರಷ್ಟತೆಯೊಳಗಿಂದ ಉದಯಿಸಿದನು. (3) ಕೈಸರು ಪೌಲನ ದಿನದಲ್ಲಿ ಮತಭ್ರಷ್ಟತೆಯ ಅಭಿವೃದ್ಧಿಗೊಳ್ಳುತ್ತಿದ್ದ ಅಧಿಕಾರವನ್ನು ಹತ್ತಿಕ್ಕಿದ್ದರು. (4) ರೋಮ್‌ನ ಬಿಷಪ್.ಗಳು ಆತ್ಮೀಕವಾಗಿ ತಮ್ಮನ್ನು ಪ್ರತಿಪಾದಿಸಿಕೊಳ್ಳಲು ಆರಂಭಿಸಿದಾಗ, ಅವರು ನಾಗರಿಕ ಅಧಿಕಾರದ ಮೇಲೆ ಹಕ್ಕು ಸಾಧಿಸದಂತೆ ಆಗಲೂ ಚಕ್ರವರ್ತಿಗಳ ಅಧಿಕಾರದಿಂದ ಅಡ್ಡಿಪಡಿಸಲ್ಪಟ್ಟರು. (5) ಐದನೆಯ ಶತಮಾನದಲ್ಲಿ ಸಾಮ್ರಾಜ್ಯವು ಪತನಗೊಂಡಾಗ ಪೋಪಾಧಿಕಾರವು ಅಭಿವೃದ್ಧಿಗೊಂಡು ಅಧಿಕಾರದ ಶೂನ್ಯತೆಯನ್ನು ನೀಗಿಸಿತು ಮತ್ತು ಅಂದಿನಿಂದ ಇಂದಿನ ತನಕ ಅಧಿಕಾರದಲ್ಲಿರುತ್ತದೆ. (6) ಪೋಪ್.ಗಳು ಉತ್ತರಾಧಿಕಾರದ ಪರಂಪರೆಯನ್ನು ಜಾಗರೂಕತೆಯಿಂದ ಕಾಪಾಡಿಕೊಳ್ಳುತ್ತಾರೆ. (7) ಪೋಪ್ ತನ್ನನ್ನು "ಕರ್ತನಾದ ದೇವರು ಪೋಪ್" ಎಂದು ಕರೆದುಕೊಳ್ಳುವ ಮೂಲಕ ತನ್ನನ್ನು ದೇವರಿಗೆ ಎದುರಾಗಿ ಹೆಚ್ಚಿಸಿಕೊಳ್ಳುತ್ತಾನೆ. (8) ಆತನು ಸಭೆಯ ಮೇಲೆ ಅಧಿಕಾರದ ಹಕ್ಕು ಸಾಧಿಸುವ ಅರ್ಥದಲ್ಲಿ "ದೇವರ ಆಲಯದಲ್ಲಿ ಕೂತಿಕೊಳ್ಳುತ್ತಾನೆ." (9) ಆತನು ಸುಳ್ಳು ಅದ್ಭುತಗಳ ಮೂಲಕ ತನ್ನ ಪ್ರಾಮಾಣೀಕೃತೆಯನ್ನು ಸಾಭಿತುಗೊಳಿಸಲು ಪ್ರಯತ್ನಿಸುತ್ತಾನೆ (ನೋಡಿರಿ ವ. 9).[30] McGarvey, Pendleton, ಮತ್ತು Barnesರು ಮೇಲುನೋಟಕ್ಕೆ ಸರಿಯೆಂದು ತೋರುವ ವಾದವನ್ನು ಮಂಡಿಸಿರುತ್ತಾರೆ. ಹೇಗೂ, ಈ ವಾದದಲ್ಲಿ ಬಲಹೀನತೆಗಳೂ ಇದ್ದೇ ಇವೆ.

ಈ ವಾಕ್ಯಭಾಗದ ವಿಷಯದಲ್ಲಿ David Lipscomb ಹೀಗೆ ಹೇಳುತ್ತಾನೆ,

> ಯಾವದೇ ಸಂಸ್ಥೆಯು "ಅಧರ್ಮಸ್ವರೂಪನು" ಎಂಬದನ್ನು ನಾನು ಸಂದೇಹ ಪಡುತ್ತೇನೆ. ಒಂದು *ತತ್ವವು* ದೇವರ ವ್ಯವಸ್ಥೆಯನ್ನು ಕಿತ್ತು ಹಾಕಿ ಬದಲಾಗಿ ತನ್ನದೇ ಆದ ವ್ಯವಸ್ಥೆಯನ್ನು ಸ್ಥಾಪಿಸುವ ಕೆಲಸದಲ್ಲಿ ತೊಡಗಿಸಿಕೊಂಡಿತ್ತು. ಅದು ಧ್ವಂಸತನಕ್ಕೆ ಮತ್ತು ನಾಶನಕ್ಕೆ ನಡಿಸುತ್ತದೆ-ಅದು ನಾಶನದ ಮಗ ಎಂದು ಕರೆಯಲ್ಪಟ್ಟಿದೆ . . . ರೋಮನ್ ಕ್ಯಾಥೋಲಿಕತ್ವವು . . . ಈ ಅಧರ್ಮಸ್ವರೂಪನ *ಬೆಳವಣಿಗೆ* ಅಥವಾ ಶಾಖೆಯಾಗಿ ಅಭಿವೃದ್ಧಿಗೊಂಡದ್ದಾಗಿದೆ (ಒತ್ತಿ ಹೇಳಿದ್ದು ನನ್ನದು).[31]

ಶಾಸ್ತ್ರದಲ್ಲಿರುವ ಈ ವ್ಯಕ್ತಿಯ ಅರ್ಹತೆಗಳನ್ನು ಪೋಪ್‌ಗಳು ನೆರವೇರಿಸುತ್ತಾರೆಂಬುದು ನನಗೆ ಸಂದೇಹವಿರುತ್ತದೆ. ಮೊದಲನೆಯದಾಗಿ, ಪೋಪ್ ತನ್ನ ದೋಷಾತೀತನೆಂಬ ಹಕ್ಕು ಸಾಧಿಸುವಿಕೆಯನ್ನು ತಾನು ಅಧಿಕಾರಯುತವಾಗಿ ನೀಡಿದ ಹೇಳಿಕೆಗಳಿಗೆ ಮಾತ್ರವೇ

ಸೀಮಿತಗೊಳಿಸುತ್ತಾನೆ, ಅಂಥವುಗಳು ಬಹಳ ಸ್ವಲ್ಪವಾಗಿವೆ. ಎರಡನೆಯದಾಗಿ, ಅಧರ್ಮಸ್ವರೂಪನು 1 ಯೋಹಾನ 2:18ರಲ್ಲಿನ ಕ್ರಿಸ್ತವಿರೋಧಿಯೊಂದಿಗೆ ಗುರುತಿಸಲ್ಪಡಬೇಕೆಂದರೆ, ಸಂಪೂರ್ಣ ಕೆಟ್ಟತನ ಅಥವಾ ಅಧರ್ಮಸ್ವರೂಪತನವು ಪೋಪ್ ಗಳ ವೈಶಿಷ್ಟ್ಯ ಲಕ್ಷಣವಾಗುವದಿಲ್ಲ ಎಂದಾಗುತ್ತದೆ.[32] ಪೋಪಾಧಿಕಾರವು ಯೇಸುವನ್ನು ಕ್ರಿಸ್ತನೆಂದು ಅರಿಕೆ ಮಾಡುತ್ತದೆ, ಆದರೆ ಕ್ರಿಸ್ತವಿರೋಧಿಯು ಹಾಗೆ ಮಾಡುವದಿಲ್ಲ (1 ಯೋಹಾನ 2:22). ಐತಿಹಾಸಿಕವಾಗಿ ಪೋಪ್‌ಗಳು ಅನೇಕ ನೈತಿಕ ಮಾನದಂಡಗಳ ವಿಷಯದಲ್ಲಿ ಬೈಬಲ್ ಸತ್ಯಗಳನ್ನು ಎತ್ತಿ ಹಿಡಿದಿದ್ದಾರೆ, ಉದಾಹರಣೆಗೆ ಗರ್ಭಪಾತ. ಮೂರನೆಯದಾಗಿ, ಪೌಲನು ಕ್ರಿಸ್ತನ ಎರಡನೆಯ ಬರೋಣದ ತನಕ ಹೆಚ್ಚೆಚ್ಚು ಬಲಗೊಳ್ಳುತ್ತಾ ಬೆಳೆಯುವ ಒಂದು ಕೆಟ್ಟ ಪ್ರಭಾವವನ್ನು ಬೀರುವ ಮನುಷ್ಯನಂತೆ ತೋರುವವನನ್ನು ಬಣ್ಣಿಸುತ್ತಾನೆ. ಇದು ಆ ಮನುಷ್ಯನ ನಾಶನಕ್ಕೆ ದಾರಿ ಮಾಡುವದು (ವ. 8). ಈ ಮನುಷ್ಯನ ವಂಚಕತನವು ಉತ್ತುಂಗದಲ್ಲಿರುವ ವೇಳೆ ಯೇಸುವು ಹಿಂದಿರುಗಿ ಬರುವನು. ಹೇಗೂ, ಪೋಪಾಧಿಕಾರವು, ತನ್ನ ಉತ್ತುಂಗತೆಯನ್ನು ಬಹಳ ಹಿಂದೆಯೇ ದಾಟಿಕೊಂಡು ಬಂದಿರುತ್ತದೆ. ಅದು ಎಂಟರಿಂದ ಇಪ್ಪತ್ತರ ಶತಮಾನದ ತನಕ ಇದ್ದಂಥ ಅಧಿಕಾರಕ್ಕಿಂತ ಅದು ಈಗ ಕಡಿಮೆ ಅಧಿಕಾರ ಹೊಂದಿದೆ.

ಎರಡನೆಯ ಊಹೆಯು *ರೋಮನ್ ಚಕ್ರವರ್ತಿಗಳ ಪರಂಪರೆಯೆಂದು* ಪರಿಗಣಿಸುತ್ತದೆ. ಪ್ರಥಮ ಶತಮಾನದಿಂದ ಆರಂಭಗೊಂಡು, ಚಕ್ರವರ್ತಿಗಳಲ್ಲಿ ಅನೇಕರು ದೇವರಂತಾಗಿಸಲ್ಪಟ್ಟು ಪೂಜೆಯನ್ನು ಮಾಡಿಸಿಕೊಂಡರು. Domitian (ಕ್ರಿ.ಶ. 81-96) ಚಕ್ರವರ್ತಿಯು ತಾನು ಇನ್ನೂ ಜೀವಿಸುತ್ತಿರುವ ವೇಳೆ ಸಾರ್ವಜನಿಕವಾಗಿ ಆರಾಧಿಸಲ್ಪಡಬೇಕು ಎಂದು ಒತ್ತಾಯಿಸಿದವರಲ್ಲಿ ಮೊದಲಿಗನಾಗಿದ್ದಾನೆ.[33] ನಿರೋ (ಕ್ರಿ.ಶ. 64) ಚಕ್ರವರ್ತಿಯಿಂದ ಆರಂಭಗೊಂಡು, ಅನೇಕ ಚಕ್ರವರ್ತಿಗಳು ಕ್ರೈಸ್ತತ್ವವನ್ನು "ವಿರೋಧಿಸಿದರು" (ವ. 4) ಮತ್ತು ಕ್ರೈಸ್ತತ್ವವನ್ನು ಹಿಂಸಿಸಿದರು. ಪೇತ್ರನು 1 ಪೇತ್ರ 4:12ರಲ್ಲಿ ಪ್ರಸ್ತಾಪಿಸಿದ "ಪುಟಕ್ಕೆ ಹಾಕಲ್ಪಡುವದು" ಎಂಬುದು ಈ ಚಕ್ರವರ್ತಿಗಳಿಂದುಂಟಾದ ಹಿಂಸೆಯ ಒಂದು ಸಂಕೇತವಾಗಿರುವ ಸಾಧ್ಯತೆಯಿದೆ, ಅದು ಕ್ರಿ.ಶ. 60 ಮತ್ತು 70ರ ನಡುವೆ ಸಂಭವಿಸಿತ್ತು.

ಇತಿಹಾಸವು ರೋಮನ್ ಚಕ್ರವರ್ತಿಗಳ ಭಕ್ತಿಹೀನ ಕೃತ್ಯಗಳನ್ನು ದಾಖಲಿಸುತ್ತಾದಾದರೂ, ಚಕ್ರವರ್ತಿಗಳ ಪರಂಪರೆಯು ಪೌಲನಿಂದ ಬಣ್ಣಿಸಲ್ಪಟ್ಟಿರುವ ಅಧರ್ಮಸ್ವರೂಪನು ಆಗಿರುವದಿಲ್ಲ. ರೋಮನ್ ಸಾಮ್ರಾಜ್ಯವು ನೂರಾರು ವರ್ಷಗಳ ಕಾಲ ಪ್ರಮುಖ ಪ್ರಪಂಚ ಶಕ್ತಿಯಾಗಿತ್ತ, ಮತ್ತು ಅದು ಮೊದಲ ನಾಲ್ಕು ಶತಮಾನಗಳಲ್ಲಿ ಸಭೆಗೆ ಬಹಳಷ್ಟು ಸಂಕಷ್ಟವನ್ನುಂಟು ಮಾಡಿತ್ತು. ಹೇಗೂ, ಸಾಮ್ರಾಜ್ಯವು ಪೂರ್ತಿಯಾಗಿ ಐದನೆಯ ಶತಮಾನದಲ್ಲಿ ನಾಶಗೊಂಡಿತು ಮತ್ತು ಅಧರ್ಮಸ್ವರೂಪನು ರೀತಿಯಲ್ಲಿ ನಾಶಗೊಳಿಸಲ್ಪಡುವದಕ್ಕೆ ಕ್ರಿಸ್ತನ ಬರೋಣದ ಹೊತ್ತಿನಲ್ಲಿ ಅಸ್ತಿತ್ವದಲ್ಲಿರದಂದಥದ್ದಾಗಿದೆ (ವ. 8).

ಮೂರನೆಯ ಊಹೆಯು ಏನೆಂದರೆ ಅಧರ್ಮಸ್ವರೂಪನು *ಸ್ವತಃ ಸೈತಾನನೇ* ಎಂಬುದು. Jon Weatherly ಹೀಗೆ ಬರೆದನು, "ಪೌಲನು ತಿಳಿಸಲಿಚ್ಛಿಸುವ ಅಂಶವೇನೆಂದರೆ

ಎಲ್ಲಾ ಮಾನವರ ದೇವರ ಚಿತ್ತವನ್ನು ತಿರಸ್ಕರಿಸುವದರ ಹಿಂದಿರುವ ಸೈತಾನನು ಬೈಲಿಗೆ ಬರುವ ಹೊರತು, ಕ್ರಿಸ್ತನ ಕೆಲಸವು ಆತನ 'ದಿನದಲ್ಲಿ' ಸಂಪೂರ್ಣಗೊಳ್ಳುವದಿಲ್ಲ ಎಂದಾಗಿರುವದು."[34] Weatherly ಪ್ರಕಾರವಾಗಿ, ಅಧರ್ಮಸ್ವರೂಪನು ಸೈತಾನನಿಗೆ ಒಬ್ಬ ತಕ್ಕದಾದ ವರ್ಣನೆಯಾಗಿರುತ್ತಾನೆ ಎಂಬದೆ. "ಸೈತಾನ" ಎಂಬ ಪದದ ಅರ್ಥವು "ವಿರೋಧಿ" ಮತ್ತು ಅಧರ್ಮಸ್ವರೂಪನು ದೇವರ ಸಭೆಯನ್ನು "ವಿರೋಧಿಸುವವನು" (ವ.4). ಈ ಅಭಿಪ್ರಾಯ ಹೊಂದಿರುವವರಲ್ಲಿ ಕೆಲವರು ನಂಬುವದೇನೆಂದರೆ ಅಂತ್ಯದ ಹತ್ತಿರದಲ್ಲಿ ಸೈತಾನನು ಒಂದು ಪ್ರಮುಖ ಯುದ್ಧದಲ್ಲಿ ತನ್ನ ಬಲವನ್ನು ತೋರ್ಪಡಿಸುವದಕ್ಕಾಗಿ ತನ್ನ ಸೇನೆಯನ್ನು ಕೂಡಿಸಿಕೊಳ್ಳುವನು ಎಂಬದೆ. ಕ್ರಿಸ್ತನು ಹಿಂದಿರುಗಿ ಬರುವಾಗ ಸೈತಾನನನ್ನು ನಾಶಗೊಳಿಸುವ ಪ್ರಕಾರವಾಗಿಯೇ (ಪ್ರಕಟನೆ 20:10), ಆತನು ಅಧರ್ಮಸ್ವರೂಪನನ್ನು ಸಹ ನಾಶಗೊಳಿಸುವನು (ವ. 8) ಎಂಬುದನ್ನು ಶಾಸ್ತ್ರವು ಕಲಿಸುತ್ತದೆ.

ಮೊದಲ ನೋಟದಲ್ಲಿ, ಈ ಊಹೆಯು ಆಕರ್ಷಕವಾಗಿ ಕಾಣಬಹುದು. ಹೇಗೂ, 9ನೇ ವಚನವು ಅಧರ್ಮಸ್ವರೂಪನ "ಪ್ರತ್ಯಕ್ಷತೆಯು ಸೈತಾನನ ಮಾಟಕ್ಕನುಗುಣವಾಗಿರುವದು" ಎಂದು ಹೇಳುತ್ತದೆ. ಬೇರೆ ಮಾತುಗಳಲ್ಲಿ ಹೇಳುವದಾದರೆ, ಈತನು ಸೈತಾನನಲ್ಲ, ಆದರೆ ಸೈತಾನನೊಂದಿಗೆ ಸಮ್ಮತಿ ಹೊಂದಿದವನು ಮತ್ತು ಆತನಿಗೆ ಸಮಾನವಾಗಿ ಕೆಲಸ ಮಾಡುವವನಾಗಿರುತ್ತಾನೆ. Weatherlyಯು ಈ ವಚನವನ್ನು "ಅಧರ್ಮಸ್ವರೂಪನ ಪ್ರತ್ಯಕ್ಷತೆಯು ಸೈತಾನನ ಕೆಲಸದಲ್ಲಿ ಸ್ಪಷ್ಟವಾಗಿ ಕಂಡುಬರುತ್ತದೆ" ಎಂದು ಅನುವಾದಿಸುವ ಮೂಲಕನ ಈ ಸಮಸ್ಯೆಯಿಂದ ನುಣುಚಿಕೊಳ್ಳಲು ಪ್ರಯತ್ನಿಸುತ್ತಾನೆ. ಅಧರ್ಮಸ್ವರೂಪನು ಸೈತಾನನಲ್ಲ. ಆತನು ಸೈತಾನನ ಜೊತೆಯಲ್ಲಿ ಮತ್ತು ದೇವರಿಗೆ ವಿರುದ್ಧವಾಗಿ ಕೆಲಸ ಮಾಡುವವನು.

ನಾಲ್ಕನೆಯ ಊಹೆಯೇನೆಂದರೆ ಅಧರ್ಮಸ್ವರೂಪನು *ಕೆಟ್ಟತನದ ವ್ಯಕ್ತಿಕರಣವಾಗಿರುತ್ತಾನೆ* ಎಂಬದೆ. ಈತನು ಅಕ್ಷರಶಃ ಮನುಷ್ಯನು ಆಗಿರುವದೇ ಇಲ್ಲ. ಇಲ್ಲಿ ವಿಚಾರವೇನೆಂದರೆ ಪೌಲನ ಕಾಲದ ನಂತರದಲ್ಲಿ, ಕ್ರೈಸ್ತ ಯುಗದ ಕೊನೆಯ ಭಾಗದಲ್ಲಿ ಕೆಟ್ಟತನವು ಕರ್ತನ ಎರಡನೆಯ ಬರೋಣಕ್ಕೆ ಸ್ವಲ್ಪ ಮುಂಚೆ ತನ್ನ ಉಚ್ಛಘಟ್ಟವನ್ನು ತಲುಪುವದು. ಪೌಲನು ತಿಮೊಥೆಯನಿಗೆ ಹೀಗೆ ಬರೆದನು, "ಆದರೂ ಮುಂದಣ ದಿನಗಳಲ್ಲಿ ಕೆಲವರು ವಂಚಿಸುವ ಆತ್ಮಗಳ ನುಡಿಗಳಿಗೂ ದೆವ್ವಗಳ ಬೋಧನೆಗಳಿಗೂ ಕಿವಿಗೊಟ್ಟು ಕ್ರಿಸ್ತ ನಂಬಿಕೆಯಿಂದ ಭ್ರಷ್ಟರಾಗುವರು" (1 ತಿಮೊಥೆ 4:1). ಆತನು ಮೂಂದುವರೆಸಿ ಹೇಳಿದ್ದೇನೆಂದರೆ ಈ ಮನುಷ್ಯರು "ಮದುವೆಯಾಗಬಾರದೆಂತಲೂ ಇಂಥಿಂಥ ಆಹಾರವನ್ನು ತಿನ್ನಬಾರದೆಂತಲೂ ಹೇಳುವರು. ಆದರೆ ಯಾರು ನಂಬುವವರಾಗಿದ್ದು ಸತ್ಯವನ್ನು ಗ್ರಹಿಸಿದ್ದಾರೋ ಅವರು ಕೃತಜ್ಞತಾಸ್ತುತಿ ಮಾಡಿ ತಿನ್ನುವದಕ್ಕೋಸ್ಕರ ದೇವರು ಸಕಲವಿಧವಾದ ಆಹಾರವನ್ನೂ ಉಂಟು ಮಾಡಿದನು" (1 ತಿಮೊಥೆ 4:3). ಈ ಬಣ್ಣನೆಯು ಎರಡನೆಯ ಶತಮಾನಕ್ಕೆ ಸೇರಿದ ಗ್ನಾಸ್ಟಿಕ್ ರಿಗೆ, ಮಾತ್ರವಲ್ಲದೆ ಬ್ರಹ್ಮಚರ್ಯೆ ಮತ್ತು ಆಹಾರದ ನಿಬಂಧನೆಗಳನ್ನೊಳಗೊಂಡಿರುವ ರೋಮನ್ ಕ್ಯಾಥೋಲಿಕ್ ರಿಗೆ ಸರಿಯಾಗಿ ಹೊಂದಿಕೆಯಾಗುತ್ತದೆ. ಪೌಲನು 2 ತಿಮೊಥೆ 3:13ರಲ್ಲಿ ಹೀಗೆ ಬರೆದನು, "ಆದರೆ ದುಷ್ಟರೂ ವಂಚಕರೂ ಇತರರನ್ನು ಮೋಸಮಾಡುತ್ತಾ ತಾವೇ ಮೋಸಹೋಗುತ್ತಾ ಹೆಚ್ಚಾದ

ಕೆಟ್ಟತನಕ್ಕೆ ಹೋಗುವರು." ಕೆಲವು ವಚನಗಳ ನಂತರದಲ್ಲಿ ಆತನು ಹೀಗೆ ಬರೆಯುತ್ತಾನೆ, "ಯಾಕೆಂದರೆ ಜನರು ಸ್ವಸ್ಥಬೋಧನೆಯನ್ನು ಸಹಿಸಲಾರದ ಕಾಲವು ಬರುತ್ತದೆ; ಅದರಲ್ಲಿ ಅವರು ತೀಟೇ ಕಿವಿಗಳುಳ್ಳವರಾಗಿ ತಮ್ಮ ದುರಾಶೆಗಳಿಗೆ ಅನುಕೂಲರಾದ ಅನೇಕ ಉಪದೇಶಕರನ್ನು ಇಟ್ಟುಕೊಳ್ಳುವರು" (2 ತಿಮೊಥೆ 4:3). ಇದೆಲ್ಲವೂ ಅಧರ್ಮಸ್ವರೂಪನು-ಸೈತಾನನೊಂದಿಗೆ ಕೈಜೋಡಿಸಿ ಕೆಲಸ ಮಾಡುತ್ತಿರುವ ಎಲ್ಲಾ ದುಷ್ಟಶಕ್ತಿಗಳು-ಪೂರ್ಣವಾಗಿ ಬಯಲಿಗೆ ಬರುವ ಹಾಗೆ ಒಂದು ಪರಾಕಾಷ್ಠತೆಯನ್ನು ಕೊಂಡೊಯ್ಯುವದಕ್ಕಾಗಿಯೇ ಆಗಿತ್ತು (ವಚನಗಳು 3, 8).

ಈ ಸಾಂಕೇತಿಕ ಮನುಷ್ಯನು ಕ್ರೈಸ್ತತ್ವವನ್ನು ನುಂಗಿ ಹಾಕುವದಕ್ಕೂ ಸತ್ಯ ದೇವರ ಎಲ್ಲಾ ಆರಾಧನೆಯನ್ನು ಹತ್ತಿಕ್ಕುವದಕ್ಕೂ ಪ್ರಯತ್ನಿಸುವನು. ಅದರ್ಮಸ್ವರೂಪನಲ್ಲಿ ಅಡಕವಾಗಿರುವ ಸಕಲ ದುಷ್ಟಶಕ್ತಿಗಳಲ್ಲಿ ಸುಳ್ಳು ಧರ್ಮಗಳು, ನಾಸ್ತಿಕ ಶಕ್ತಿಗಳು, ಮತ್ತು ಭೌತವಾದ ಹಾಗೂ ಜಾತ್ಯಾತೀತತೆಯ ಒಡೆಯರು ಸೇರಿರುತ್ತಾರೆ. ಜನರು ನೋಹನ ದಿನಗಳಲ್ಲಿದ್ದಂತೆಯೇ (ಮತ್ತಾಯ 24:37), ದೇವರ ಕುರಿತು ಮತ್ತು ಆತನು ಮಾಡಿರುವ ಕಾರ್ಯದ ಕುರಿತು ಕಡಿಮೆ ಕಡಿಮೆ ತಿಳಿಯುವಂತಾಗುವದಕ್ಕಾಗಿ ಇವರೆಲ್ಲರೂ ಕೆಲಸವನ್ನು ಮಾಡುವರು.

ಅಂತ್ಯವು ಸಮೀಪವಾದ ಹಾಗೆ, ದುಷ್ಟತ್ವವು ಯುದ್ಧದಲ್ಲಿ ಜಯವನ್ನು ಗಳಿಸುತ್ತಿದೆಯೋ ಎಂಬಂತೆ ತೋರುವರು; ಆದರೆ ಅತ್ಯಂಥ ಕತ್ತಲೆಯ ಕ್ಷಣಕ್ಕೆ ಹೋಗುತ್ತಿದ್ದಂತೆಯೇ, ಕ್ರಿಸ್ತನು ಮಹಿಮಕರವಾದ ರೀತಿಯಲ್ಲಿ ಹಿಂದಿರುಗಿ ಬರುವನು. ಆತನು "ಮಹಿಮೆ" ಯಿಂದ "ದೇವದೂತ" ರೊಂದಿಗೆ ಬರುವನು (ಮತ್ತಾಯ 25:31), "ಆಜ್ಞಾಘೋಷದೊಡನೆಯೂ ಪ್ರಧಾನದೂತನ ಶಬ್ದದೊಡನೆಯೂ ದೇವರ ತುತೂರಿಧ್ವನಿಯೊಡನೆಯೂ" ಬರುವನು (1 ಥೆಸಲೋನಿಕ 4:16). ಅಧರ್ಮಸ್ವರೂಪನ ತೋರ್ಪಡಿಸಿಕೊಳ್ಳುವಿಕೆಗಿಂತಲೂ ಕ್ರಿಸ್ತನ ಪ್ರತ್ಯಕ್ಷತೆಯು ಎಷ್ಟೋ ಹೆಚ್ಚು ಮಹಿಮಕರವಾಗಿರುವದು. ಕ್ರಿಸ್ತನು "ತನ್ನ ಬಾಯ ಉಸುರಿನಿಂದ [ಆತನನ್ನು] ಕೊಲ್ಲುವನು, ತನ್ನ ಪ್ರತ್ಯಕ್ಷತೆಯ ಪ್ರಕಾಶದಿಂದ ಸಂಹರಿಸುವನು" (ವ. 8), ಯಾವದೇ ಯುದ್ಧವನ್ನು ಮಾಡದಯೇ ಆತನನ್ನು ಸುಲಭವಾಗಿ ನಿತ್ಯವಾದ ದಂಡನೆಯೊಳಗೆ ರವಾನಿಸುವನು (ಮತ್ತಾಯ 24:46).

ಈ ಭೂಮಿಯ ಮೇಲಿನ ನಮ್ಮ ಜೀವಿತಗಳ ವೇಳೆ, ಕೆಟ್ಟತನವು ಕೆಲವು ಸಾರಿ ಅಪರಾಜಿತವೆಂಬಂತೆ ತೋರುವದು. ಸೈತಾನನು ಮತ್ತು ಆತನ ಶಕ್ತಿಗಳು ಕೆಲವು ಯುದ್ಧಗಳನ್ನ ಜಯಿಸುವದು ನಿಜವೇ. ಕಾರ್ಯಗಳು ದಿನೇ ದಿನೇ ಕೆಟ್ಟದ್ದಾಗುತ್ತಲೇ ಹೋಗುವಂತೆ ಕಾಣಿಸಬಹುದು. ಆದಾಗ್ಯೂ, ಕ್ರಿಸ್ತನು ಯುದ್ಧದಲ್ಲಿ ಜಯ ಗಳಿಸುವನೆಂಬುದಕ್ಕೆ ಆದರಣೆಯನ್ನು ತಂದುಕೊಳ್ಳಿರಿ! ಯೋಹಾನನು ಹೀಗೆ ಬರೆಯುತ್ತಾನೆ,

> ಇದಲ್ಲದೆ ಸಿಂಹಾಸನವು ಜೀವಿಗಳು ಹಿರಿಯರು ಇವರು ಸುತ್ತಲು ಬಹು ಮಂದಿ ದೇವದೂತರನ್ನು ಕಂಡೆನು; ಅವರ ಸಂಖ್ಯೆಯು ಕೋಟ್ಯಾನುಕೋಟಿಯಾಗಿಯೂ ಲಕ್ಷೋಪಲಕ್ಷವಾಗಿಯೂ ಇತ್ತು. ಅವರ ಸ್ವರವು ನನಗೆ ಕೇಳಿಸಿತು; ಅವರು ಮಹಾ ಶಬ್ದದಿಂದ- ವಧಿತನಾದ ಕುರಿಮರಿಯಾದಾತನು ಬಲ ಐಶ್ವರ್ಯ ಜ್ಞಾನ ಸಾಮರ್ಥ್ಯ ಮಾನ ಪ್ರಭಾವ ಸ್ತೋತ್ರಗಳನ್ನು ಹೊಂದುವದಕ್ಕೆ ಯೋಗ್ಯನು ಎಂದು ಹೇಳಿದರು.

ಇದಲ್ಲದೆ ಆಕಾಶದಲ್ಲಿಯೂ ಭೂಮಿಯ ಮೇಲೆಯೂ ಭೂಮಿಯ ಕೆಳಗೆಯೂ ಸಮುದ್ರದ ಮೇಲೆಯೂ ಇರುವ ಎಲ್ಲಾ ಸೃಷ್ಟಿಗಳು ಅಂದರೆ ಭೂಮ್ಯಾಕಾಶಸಮುದ್ರದೊಳಗೆ ಇರುವದೆಲ್ಲವೂ- ಸಿಂಹಾಸನಾಸೀನನಿಗೂ ಯಜ್ಞದ ಕುರಿಯಾದಾತನಿಗೂ ಸ್ತೋತ್ರ ಮಾನ ಪ್ರಭಾವ ಆಧಿಪತ್ಯಗಳು ಯುಗ ಯುಗಾಂತರಗಳಲ್ಲಿಯೂ ಇರಲಿ ಎಂದು ಹೇಳುವದನ್ನು ಕೇಳಿದೆನು. ಆಗ ನಾಲ್ಕು ಜೀವಿಗಳು ಆಮೆನ್ ಅಂದವು; ಮತ್ತು ಹಿರಿಯರು ಅಡ್ಡಬಿದ್ದು ನಮಸ್ಕಾರ ಮಾಡಿದರು (ಪ್ರಕಟನೆ 5:11-14).

ಕ್ರಿಸ್ತನು ವಿಜಯವನ್ನು ಗಳಿಸುವನು. ನಾವು ಯಾರ ಪಕ್ಷದಲ್ಲಿರುವೆವು?

## ಹೆಚ್ಚಿನ ಅಧ್ಯಯನಕ್ಕಾಗಿ:
## ಈಗ ಆತನನ್ನು "ಏನು ಅಡ್ಡಿಮಾಡುತ್ತದೋ" (2:6, 7)

ನಾನು ಒಂದು ಮನೆ ಮನೆಗೆ ಹೋಗಿ ಬಾಗಲು ತಟ್ಟಿ ಪ್ರಚಾರವನ್ನು ಮಾಡುತ್ತಿದ್ದ ವೇಳೆ, ಒಬ್ಬ ಚಿಕ್ಕ ಬಾಲಕನು ಬಾಗಲನ್ನು ತೆರೆದು ನನಗೆ ನಮಸ್ಕಾರ ಹೇಳಿದನು. ಆಗ ಏಕಾಏಕಿ ಒಂದು ನಾಯಿಯು (ಗೋಲ್ಡನ್ ರಿಟ್ರಿವರ್ ಎಂಬ ತಳಿಯ ನಾಯಿ) ನನ್ನ ಮೇಲೆ ಆಕ್ರಮಣ ಮಾಡುವದಕ್ಕಾಗಿ ಬಾಲಕನ ಮೇಲೆ ಜಿಗಿದು ಬರುವದಕ್ಕೆ ಪ್ರಯತ್ನಿಸಿತು. ಅದೃಷ್ಟವಶಾತ್, ಅದು ಹಗ್ಗದಿಂದ ಕಟ್ಟಲ್ಪಟ್ಟಿತ್ತು ಮತ್ತು ಆ ಹಗ್ಗವನ್ನು ಬಾಲಕನ ಅಣ್ಣನು ಹಿಡಿದುಕೊಂಡಿದ್ದನು. ಅಧರ್ಮಸ್ವರೂಪನು ಬಯಲಿಗೆ ಬರದಂತೆ ಅಡ್ಡಿ ಮಾಡುವವನ ರೀತಿಯಲ್ಲಿಯೇ ಆ ಬಾಲಕನ ಅಣ್ಣನು ನಾಯಿಯನ್ನು ತಡೆ ಹಿಡಿದಿದ್ದನು. ಅಧರ್ಮಸ್ವರೂಪನನ್ನು ತಡೆಯುವವನ ಕುರಿತಾಗಿ ಬೈಬಲ್ ಏನು ಹೇಳುತ್ತದೆ?

*"ಇದು ವರೆಗೆ ಅಡ್ಡಿ ಮಾಡುವವನು"* (ವ. 7b). ಪೌಲನು ಹೀಗೆ ಬರೆದನು, "ಅಧರ್ಮವು ಈಗಲೂ ಗುಪ್ತವಾಗಿ ತನ್ನ ಕಾರ್ಯವನ್ನು ಸಾಧಿಸುತ್ತದೆ." ಅದು ಅಗೋಚರವಾದ ರೀತಿಯಲ್ಲಿ ಕ್ರಿಯೆಯಲ್ಲಿರುತ್ತದೆ. ಅಧರ್ಮಸ್ವರೂಪನ ಕೆಲಸವು ಪೌಲನ ದಿನದಲ್ಲಿ ಸಮಾಜದ ಚೌಕಟ್ಟಿಗಳನ್ನು ಒಳ ಹೊಕ್ಕು ವ್ಯಾಪಿಸುತ್ತಿತ್ತು.

ಹೇಗೂ, ಯಾರೋ ಒಬ್ಬನು-ಅಥವಾ ಯಾವದೋ ಒಂದು-ಆತನಿಗೆ ತಡೆಯಾದ ಶಕ್ತಿಯಾಗಿ ಕೆಲಸ ಮಾಡುತ್ತಿತ್ತು ಮತ್ತು ಹಾಗೆ ಮಾಡುವದನ್ನು ಮುಂದುವರೆಸುವದು. ಅಧರ್ಮಸ್ವರೂಪನ ಪ್ರತ್ಯಕ್ಷತೆಯ ಕಾಲವು ಇನ್ನಷ್ಟು ವಿಳಂಬವಾಗುವ ಹಾಗೆ ಈ ಶಕ್ತಿಯು ಆತನನ್ನು ಕೊರಳಿಗೆ ಕಟ್ಟಿದ ಹಗ್ಗವನ್ನು ಹಿಡಿದು ತಡೆಯುತ್ತಿತ್ತು.

*"ಅಡ್ಡಿ ಮಾಡುವವನು ತೆಗೆದು ಬಿಡಲ್ಪಡುವ ತನಕ"* (ವ. 7b). "ತೆಗೆದು ಬಿಡಲ್ಪಡುವ ತನಕ" ಗಮನಕ್ಕ ತಂದುಕೊಳ್ಳಲು ಯೋಗ್ಯವಾಗಿದೆ.

ಅಡ್ಡಿ ಮಾಡುವವನು ಯಾರು, ಮತ್ತು ಆತನನ್ನು ಯಾರು ತೆಗೆದು ಬಿಡುವರು? ಅಡ್ಡಿ ಮಾಡುವವನ ಗುರುತಿನ ಬಗ್ಗೆ ನಾವು ಯಾವ ತೀರ್ಮಾನಕ್ಕೆ ಬರಬಲ್ಲೆವು?

ಆತನ ಗುರುತಿನ ಬಗ್ಗೆ ಕೆಲವು ಸಾಮಾನ್ಯವಾದ ವ್ಯಾಖ್ಯೆಗಳನ್ನು ಹೇಳುವ ಮೂಲಕ ಆರಂಭಿಸುವ ಅಗತ್ಯವಿರುತ್ತದೆ. ಆತನೊಬ್ಬ ವ್ಯಕ್ತಿಯಾಗಿರಬಲ್ಲನು. 7ನೇ ವಚನವು ಅಡ್ಡಿ ಮಾಡುವವನನ್ನು "ಅವನು" ಎಂದು ಹೇಳುತ್ತದೆ. ಗ್ರೀಕ್ ನಲ್ಲಿ "ಈಗ ಅಡ್ಡಿಮಾಡುವವನು" ಎಂಬುದು ὁ κατέχων (*ho katechōn*) ಎಂಬ ಪದದಿಂದ ಬರುತ್ತದೆ, ಅದು ಪುಲ್ಲಿಂಗ

ಆಗಿರುತ್ತದೆ. ಸಾಮಾನ್ಯವಾಗಿ, ಇದು ಒಬ್ಬ ವ್ಯಕ್ತಿಯನ್ನು ಸೂಚಿಸುದಾಗಿದೆ, ಆದರೆ ಯಾವಾಗಲೂ ಸೂಚಿಸುವದಿಲ್ಲ.

ಅಡ್ಡಿ ಮಾಡುವವನನ್ನು ಒಂದು ವಸ್ತು ಅಥವಾ ಶಕ್ತಿಯಾಗಿ ಸಹ ಕಾಣಬಹುದಾಗಿದೆ. 6ನೇ ವಚನವು ಹೀಗೆ ಹೇಳುತ್ತದೆ, "ಏನು ಅಡ್ಡಿ ಮಾಡುತ್ತದೋ." ನಪುಸಂಕ ಕೃದಂತವಾಗಿ κατέχω (*katechō*) ಎಂಬುದು ಬಳಸಲ್ಪಟ್ಟಿದ್ದು ಅದು ನಿರಾಕಾರ ಅಥವಾ ವಸ್ತುವಾಗಿರಬಹುದಾದ ಶಕ್ತಿಯಿರಬಹುದು. ಇದು ಒಂದಕ್ಕೊಂದು ವಿರುದ್ಧವಾದದ್ದಲ್ಲ. ಬದಲಾಗಿ 7ನೇ ವಚನದಲ್ಲಿನ "ಅವನು" ಒಂದು ನಿಷ್ಪ್ರಾಣವಾದ ಶಕ್ತಿಯ ವ್ಯಕ್ತಿಕರಣವಾಗಿರುತ್ತಾನೆ. ಬೈಬಲಲ್ಲಿ ಅನೇಕ ಸಾರಿ ವ್ಯಕ್ತಿಕರಣವು ಬಳಸಲ್ಪಟ್ಟಿದೆ. ಬಹಳ ಸಂಭಾವ್ಯವಾಗಿ, ಅಡ್ಡಿ ಮಾಡುವವನು ಅಕ್ಷರಶಃ ವ್ಯಕ್ತಿಯಲ್ಲ, ಆದರೆ ಬದಲಾಗಿ ಒಂದು ವಸ್ತು ಆಗಿರುತ್ತದೆ.

ನಂತರ, ಅವನ (ಅದರ) ನಿರ್ದಿಷ್ಟವಾದ ಗುರುತಿನ ಕುರಿತು ಮಾತಾಡಬೇಕಿದೆ. ಸಾಮಾನ್ಯವಾಗಿ ಅಡ್ಡಿ ಮಾಡುವವನ ಗುರುತು ಅಧರ್ಮಸ್ವರೂಪನ ಗುರುತಿನೊಂದಿಗೆ ಸಂಬಂಧ ಹೊಂದಿರುತ್ತದೆ.

(1) ಅಧರ್ಮಸ್ವರೂಪನ ಸ್ಥಾನಕ್ಕೆ ಪೋಪ್ ಗಳನ್ನು ಹೆಸರನ್ನು ಸೂಚಿಸುವವರು ಅಡ್ಡಿ ಮಾಡುವವನು ರೋಮನ್ ಸಾಮ್ರಾಜ್ಯ ಎಂದು ಹೇಳುತ್ತಾರೆ.

(2) ಅಧರ್ಮಸ್ವರೂಪನ ಸ್ಥಾನಕ್ಕೆ ಚಕ್ರವರ್ತಿಗಳ ಹೆಸರುಗಳನ್ನು ಸೂಚಿಸುವವರು ಚಕ್ರವರ್ತಿಗಳ ಪರಂಪರೆಯ ಸಾಮಾನ್ಯ ಪ್ರವೃತ್ತಿಗಳ ವಿರುದ್ಧವಾಗಿ ಬಂಡಾಯವೆದ್ದು ಸಾಮ್ರಾಜ್ಯವು ಮುಂಚಿನ ಒಂದು ಕಾಲದಲ್ಲಿ ಸಂಪೂರ್ಣ ಕೆಟ್ಟತನಕ್ಕೆ ಒಳಗಾಗದಂತೆ ಅಡ್ಡಿ ಮಾಡುವ ಬೇರೆವರಿಗಿಂತ ಉತ್ತಮನಾದ ಚಕ್ರವರ್ತಿಯೊಬ್ಬನು ಅಡ್ಡಿ ಮಾಡುವವನು ಎಂದು ಪರಿಗಣಿಸುತ್ತಾರೆ.

(3) ಅಧರ್ಮಸ್ವರೂಪನು ಸೈತಾನನೇ ಎಂದು ಆತನ ಹೆಸರನ್ನು ಸೂಚಿಸುವವರು ಪವಿತ್ರಾತ್ಮನೇ ಅಡ್ಡಿ ಮಾಡುವವನು ಎಂದು ಹೇಳುತ್ತಾರೆ. ಹೇಗೂ, ಪವಿತ್ರಾತ್ಮನು ಈ ಕಾರಣಗಳಿಗಾಗಿ ಅಡ್ಡಿ ಮಾಡುವವನು ಆಗಿರಲಾರನು:

1. ಅಡ್ಡಿ ಮಾಡುವವನನ್ನು ಶಕ್ತಿ ಬಳಸಿ, ಬಹುಶಃ ಹಿಂಸಾತ್ಮಕವಾಗಿ ತೆಗೆದು ಹಾಕಲಾಗುತ್ತದೆ.
2. ಸೈತಾನನು ಪವಿತ್ರಾತ್ಮನನ್ನು ಸೋಲಿಸಲಾರನು.
3. ಇದನ್ನು ಮಾಡುವಷ್ಟು ಬಲಿಷ್ಠನು ದೇವರೊಬ್ಬನೇ ಆಗಿದ್ದಾನೆ, ಆದರೆ ಆತನು ಪವಿತ್ರಾತ್ಮನ ವಿರುದ್ಧವಾಗಿ ಕೆಲಸ ಮಾಡಲಾರನು.

(4) ಅಧರ್ಮಸ್ವರೂಪನು ಸೈತಾನನ ವ್ಯಕ್ತಿಕರಣವಾಗಿರುತ್ತಾನೆಂದು ಪರಿಗಣಿಸುವವರು ವಿಶ್ವದ ಸರ್ಕಾರಗಳಲ್ಲಿನ ಕೆಲವು ಸಂಪ್ರದಾಯಪಾಲಕರು ಹಾಗೂ ನೈತಿಕ ಶಕ್ತಿಗಳು ಕೆಟ್ಟತನದ ಪ್ರಭಾವಕ್ಕೆ ಕಡಿವಾಣ ಹಾಕುವವರನ್ನು ಅಡ್ಡಿ ಮಾಡುವವನು ಎಂದು ಹೇಳುತ್ತಾರೆ. ಹಾಗಾದರೆ, ಅಡ್ಡಿ ಮಾಡುವವನು ಯಾರೆಂದರೆ ಅಧರ್ಮಸ್ವರೂಪನು

ಪೂರ್ಣ ಹತೋಟಿಯನ್ನು ಸಾಧಿಸದಂತೆ ತಡೆಯೊಡ್ಡುವಂತಹ ಸತ್ಯ ಹಾಗೂ ನ್ಯಾಯದ ಪರವಾಗಿ ನಿಲ್ಲುವ ಜನರು ಹಾಗೂ ಶಕ್ತಿಗಳು ಆಗಿರುತ್ತವೆ ಎಂದಾಗುತ್ತದೆ. ಒಬ್ಬ ಯೋಗ್ಯನಾದ ಚಕ್ರವರ್ತಿ, ಅಥವಾ ಪವಿತ್ರಾತ್ಮನು ಎಂಬುದಕ್ಕಿಂತಲೂ ಈ ಅರ್ಥನಿರೂಪಣೆಯು ರೋಮನ್ ಸಾಮ್ರಾಜ್ಯ ಎಲ್ಲಾ ವಾಸ್ತವಾಂಶಗಳಿಗೆ ಸರಿಯಾಗಿ ಹೊಂದಿಕೆಯಾಗುವಂತೆ ಕಾಣುತ್ತದೆ.

## ಅನ್ವಯಿಸುವಿಕೆ

ಪತ್ರಿಕೆಯು ಯಾವ "ವಿವರಣೆಯನ್ನು" ಕೊಡುವದಕ್ಕೆ ಬರೆಯಲ್ಪಟ್ಟಿತೋ ಈ ಅಧ್ಯಾಯವು ಆ ವಿವರಣೆಯೇ ಆಗಿರುತ್ತದೆ. ಇದರ ಹೃದಯ ಭಾಗದಲ್ಲಿ "ಅಧರ್ಮಸ್ವರೂಪ" ಬರೋಣದ ಕುರಿತಾದ ಚರ್ಚೆಯಿರುತ್ತದೆ. ಯಾವದೋ ಕಾರಣಕ್ಕಾಗಿ, ಕ್ರಿಸ್ತನು ಸಮೀಪದ ಕಾಲದಲ್ಲಿಯೇ ಹಿಂದಿರುಗಿ ಬರಲಿದ್ದಾನೆಂಬದಾಗಿ, ಅಥವಾ ಕರ್ತನ ಬರೋಣವು ಈಗ ಆಗಿರುತ್ತದೆ ಎಂಬದಾಗಿ ಥೆಸಲೋನಿಕದವರು ಮನಸ್ಸಿನಲ್ಲಿ ಯೋಚನೆ ಹೊಂದಿದ್ದರು. ಸ್ಪಷ್ಟವಾಗಿ ತೋರುವಂತೆ, ಅವರಲ್ಲಿ ಕೆಲವರು ಉದ್ಯೋಗಗಳನ್ನು ತೊರೆದು ಬಿಟ್ಟಿದ್ದರು ಮತ್ತು ಸೋಮಾರಿಗಳು ಮತ್ತು ಮತ್ತೊಬ್ಬರ ವ್ಯವಹಾರಗಳಲ್ಲಿ ಕೈ ಹಾಕುವವರು ಆಗಿದ್ದ. ಪೌಲನು ಅವರಿಗೆ ಆತನ ಬರೋಣವು ಸನ್ನಿಹಿತವಾಗಿರುವದಿಲ್ಲ ಎಂಬುದನ್ನು ಅರ್ಥ ಮಾಡಿಸುವವನಾಗಿ ಇನ್ನಷ್ಟು ಹೆಚ್ಚು ಮಾಹಿತಿಯನ್ನು ಕೊಡುತ್ತಾನೆ.

ಈ ಅಧ್ಯಾಯದಲ್ಲಿ ಆತನು ಹೇಳಲಿಚ್ಛಿಸುವ ಅಂಶವೇನೆಂದರೆ ಅಧರ್ಮಸ್ವರೂಪನು ಪ್ರತ್ಯಕ್ಷನಾಗುವ ತನಕ ಎರಡನೆಯ ಬರೋಣವು ಸಂಭವಿಸುವದಿಲ್ಲ ಎಂಬದೆ. ಒಂದು ಮಹಾ ಮತಭ್ರಷ್ಟತೆಯು ಉಂಟಾಗಲಿದೆ ಮತ್ತು ಅದು ಅಂತ್ಯಕಾಲದ ತಕನವೂ ಮುಂದುವರೆಯಲಿದೆ ಎಂಬುದರ ಒಂದು ಭಯಾನಕ ಚಿತ್ರಣವು ಕೊಡಲ್ಪಟ್ಟಿರುತ್ತದೆ.

### ಯೇಸುವಿನ ಬರೋಣದ ಕಡೆಗೆ ನಮಗಿರುವ ಮನೋಭಾವವು (2:1, 2)

ಅಧರ್ಮಸ್ವರೂಪನು ಬಯಲಿಗೆ ಬಂದ ಹೊರತು ಎರಡನೆಯ ಬರೋಣವು ಸಂಭವಿಸುವದಿಲ್ಲ ಎಂಬದಾಗಿ ಪೌಲನು ಹೇಳುತ್ತಾನೆ (ವ. 3). ಆತನು ಅವರ ಜೊತೆಯಲ್ಲಿದ್ದ ವೇಳೆ ಈ ಸಂಗತಿಗಳ ಕುರಿತು ಅವರಿಗೆ ಹೇಳಿದ್ದನು (ವ. 5), ಆದರೆ ಅವರು ಆ ಸಂಗತಿಗಳ ವಿಷಯದಲ್ಲಿ ಗೊಂದಲಕ್ಕೆ ಈಡಾಗಿದ್ದರು. ಬಹುಶಃ ಅವರಲ್ಲಿ ಕೆಲವರು ತಮ್ಮ ಭೂಮಿಯ ಮೇಲಿನ ಅಮೂಲ್ಯ ಸಮಯವು ವ್ಯರ್ಥವಾಗುತ್ತದೆಯೆಂದು ತಮ್ಮ ಬಿಡುವು ಸಮಯದಲ್ಲಿ ಕರ್ತನ ಬರೊಣಕ್ಕಾಗಿ ಎದುರು ನೋಡುತ್ತಿದ್ದಿರಬಹುದು (3:10-12).

ಪೌಲನು ಯೇಸುವಿನ ಪುನರಾಗಮನ ಹಾಗೂ ಆತನೊಂದಿಗೆ ಒಟ್ಟಾಗಿ ಕೂಡಿಕೊಳ್ಳುವ ಕುರಿತಾಗಿ ಅವರನ್ನು ಪ್ರಬೋಧಿಸುತ್ತಾನೆ. ಆತನು ಒತ್ತಿ ಹೇಳುವವನಾಗಿ, ἐπισυναγωγή (*episunagōge*) ಎಂಬ ಪದವನ್ನು ಬಳಸುತ್ತಾನೆ, ಅದರರ್ಥವು "ಒಟ್ಟಾಗಿ ಕೂಡಿಕೊಳ್ಳುವದು." ಅದು ಪುನಃ ಇನ್ನೊಂದು ಸಾರಿ ಮಾತ್ರವೇ ಇಬ್ರಿಯ 10:25ರಲ್ಲಿ ಕಾಣಿಸಿಕೊಳ್ಳುತ್ತದೆ, ಅಲ್ಲಿ ಅದು ದೇವಜನರು ನಿಯತಕ್ರಮವಾಗಿ ಆರಾಧನೆಗೋಸ್ಕರ ಒಟ್ಟಾಗಿ ಕೂಡಿ ಬರುವದನ್ನು ಸೂಚಿಸುತ್ತದೆ.

ಆತನು ಥೆಸಲೋನಿಕದವರಿಗೆ ಕ್ರಿಸ್ತನ ಪುನರಾಗಮನದ ಕುರಿತ ತಿಳುವಳಿಕೆಯ ಬಗ್ಗೆ ವಿಶೇಷವಾದ ನಿರ್ದೇಶನಗಳನ್ನು ಕೊಡುವದರೊಂದಿಗೆ ಆತನ ವಿವರವಾದ ಚರ್ಚೆಯು ಆರಂಭಗೊಳ್ಳುತ್ತದೆ. ನಾವು ಏನು ಮಾಡಬೇಕಾಗಿರುತ್ತದೆ?

*ವಿಮರ್ಶಾತ್ಮಕವಾಗಿ ಆಲಿಸಿರಿ.* ಥೆಸಲೋನಿಕದವರು ಎರಡನೆಯ ಬರೋಣದ ಕುರಿತು ಬೇರೆಯವರು ಬೋಧಿಸುವದನ್ನು ಕೇಳಿಸಿಕೊಂಡಿದ್ದರು. ಅವರು ಏನು ಹೇಳುತ್ತಿದ್ದರೆಂಬುದು ನಮಗೆ ನಿಖರವಾಗಿ ತಿಳಿಯದು. ಬಹುಶಃ ಅವರು "ಕರ್ತನ ದಿನವು" ಈಗಾಗಲೆ ಬಂದಿದೆ ಎಂಬದಾಗಿ ಅವರು ವಾದಿಸುತ್ತಿದ್ದರೆಂದು ತೋರುತ್ತದೆ. ಯಾವನಾದರೂ ಪುನರಾಗಮನದ ಕುರಿತು ಚರ್ಚಿಸುತ್ತಿದ್ದರೆ ಅವರು ಅದನ್ನು ವಿಮರ್ಶಾತ್ಮಕವಾಗಿ ಆಲಿಸಬೇಕೆಂದು ಪೌಲನು ಹೇಳುತ್ತಿದ್ದಾನೆ.

*ಶಾಸ್ತ್ರಗಳನ್ನು ಅನುಸರಿಸಿರಿ.* ಅವರು ತಿಳಿದವರಾಗಿರಬೇಕು, ಆತನ ಬರೋಣದ ಕುರಿತಾದ ವಾಸ್ತವಾಂಶಗಳನ್ನು ಬಲ್ಲವರಾಗಿರಬೇಕೆಂಬದು ಪೌಲನ ಬಯಕೆಯಾಗಿತ್ತು. ಇಲ್ಲಿ ಸೂಚ್ಯಾರ್ಥವಾಗಿರುವ ಸಂಗತಿಯೆಂದರೆ ಅವರು ಆತನ ಪತ್ರಿಕೆಯನ್ನು ಓದಬೇಕು ಮತ್ತು ಅದನ್ನು ಮನದಲ್ಲಿಟ್ಟುಕೊಳ್ಳಬೇಕು, ಯಾಕೆಂದರೆ ಅದರಲ್ಲಿ ಯೇಸುವಿನ ಬರೋಣದ ಕುರಿತ ಸತ್ಯವು ಇರುತ್ತದೆ ಎಂಬದೆ.

*ಸತ್ಯದಲ್ಲಿ ಸ್ಥಿರವಾಗಿರಿ.* ಎರಡನೆಯ ಬರೋಣದ ಕುರಿತಾದ ಸುಳ್ಳು ಬೋಧನೆಗಳಿಂದ ಚಂಚಲತೆಗೆ ಅಥವಾ ಕಳವಳಕ್ಕೆ ಒಳಗಾಗಬಾರದೆಂದು ಪೌಲನು ಅವರನ್ನ ಬೇಡಿಕೊಳ್ಳುತ್ತಾನೆ (ವಚನಗಳು 1, 2). "ಒಂದು ಆತ್ಮನಿಂದಾಗಲಿ, ಒಂದು ಸಂದೇಶದಿಂದಾಗಲಿ, ಅಥವಾ ಒಂದು ಪತ್ರಿಕೆಯಿಂದಾಗಲಿ" "ನೀವು ಬುದ್ಧಿಗೆಟ್ಟು ಚಂಚರಾಗಬೇಡಿರಿ" ಎಂದು ಆತನು ಹೇಳಿದನು. ಕೆಲವರು ತಮ್ಮ ಬಳಿಯಲ್ಲಿ ಪೌಲನು ಬರೆದಿರುವ ಒಂದು ಪತ್ರಿಕೆಯು ಇರುತ್ತದೆ, ಅದು ಕರ್ತನ ದಿನವು ಈಗಾಗಲೆ ಬಂದದೆ ಎಂಬುದನ್ನು ಸೂಚಿಸುತ್ತದೆಂದು ಹೇಳಿಕೊಳ್ಳುತ್ತಿರಬಹುದು (ವ. 2). ಇನ್ನು ಕೆಲವರು ತಮಗೆ ಒಂದು ವಿಧವಾದ ಆತ್ಮದ ಮೂಲಕ ಆತನ ಬರೋಣದ ಕುರಿತು ಮಾಹಿತಿ ತಮಗಿರುತ್ತದೆಂದು ಹೇಳಿಕೊಂಡಿರಬಹುದು.

ಕ್ರಿಸ್ತನ ಬರೋಣದ ಕುರಿತ ಸುಳ್ಳು ಬೋಧನೆಗಳ ಮೂಲಕವಾಗಿ ಚಂಚಲರಾಗಬೇಡಿರಿ ಅಥವಾ ಕಳವಳಕ್ಕೊಳಗಾಗಬೇಡಿರಿ ಎಂದು ಪೌಲನು ಥೇಸಲೋನಿಕದವರನ್ನು ಬೇಡಿಕೊಳ್ಳುತ್ತಾನೆ. ಅವರು ಯೇಸುವಿನ ಬರೋಣದ ಕುರಿತಾಗಿ ಆತನ ಬೋಧನೆಯನ್ನು ಅಂಗೀಕರಿಸಿಕೊಂಡು ಅವರ ದಾರಿಯಲ್ಲಿ ಬರುವಂಥ ಆತನ ಬರೋಣದ ಕುರಿತ ಸುಳ್ಳು ಬೋಧನೆಗಳನ್ನು ತಿರಸ್ಕರಿಸಬೇಕಿತ್ತು. ಆದ್ದರಿಂದ ಅದು ನಮ್ಮ ಬಳಿಯಲ್ಲಿ ಸಹ ಇರುತ್ತದೆ. ನಮಗೆ ಕ್ರಿಸ್ತನ ಪುನರಾಗಮನದ ಕುರಿತು ಮಾಹಿತಿ ಗೊತ್ತಿರತಕ್ಕದ್ದು, ಮತ್ತು ಅದರ ಕುರಿತಾಗಿ ಹೊಸ ಒಡಂಬಡಿಕೆಯು ಕೊಡುವಂಥ ಬೋಧನೆಯಲ್ಲಿ ಸ್ಥಿರವಾಗಿ ನೆಲೆಗೊಂಡಿರತಕ್ಕದ್ದು. EC

## ಅಧರ್ಮಸ್ವರೂಪನ ಬರೋಣ (2:3-9)

ಪೌಲನು ಮಾಡಿದ ಮೊದಲ ಕಾರ್ಯವೆಂದರೆ ಬರಲಿರುವ ಅಧರ್ಮಸ್ವರೂಪನ ಕುರಿತು

ಬಣ್ಣನೆಯನ್ನು ಮಾಡುವದು. ಕರ್ತನು ಹಿಂದಿರುಗಿ ಬರುವದಕ್ಕೆ ಮುಂಚೆ ಈ ಮನುಷ್ಯನು ಕಾಣಿಸಿಕೊಳ್ಳತಕ್ಕದ್ದು ಎಂಬುದನ್ನು ಥೆಸಲೋನಿಕದವರು ತಿಳಿದುಕೊಳ್ಳಬೇಕೆಂಬುದು ಆತನ ಬಯಕೆಯಾಗಿತ್ತು. ಕ್ರಿಸ್ತನ ಎರಡನೆಯ ಬರೋಣದ ಮುಂಚೆ, ಅಧರ್ಮಸ್ವರೂಪನು ಸ್ವತಃ ಒಂದು ಬರೋಣವನ್ನು ಹೊಂದಿರುವನು. ಈ ವಾಸ್ತವಾಂಶದ ವಿಷಯದಲ್ಲಿ ತಮ್ಮನ್ನು ಮೋಸಗೊಳಿಸುವಂತೆ ಯಾರಿಗೂ ಅವಕಾಶ ಕೊಡಬಾರದೆಂದು ಆತನು ತನ್ನ ಸಹೋದರರನ್ನು ವಿನಂತಿಸಿಕೊಂಡನು.

ನಾಲ್ಕು ದೃಷ್ಟಿಕೋನಗಳಿಂದ ಅವರಿಗಾಗಿ ಅಧರ್ಮಸ್ವರೂಪನು ವರ್ಣಿಸಲ್ಪಟ್ಟಿರುತ್ತಾನೆ.

*ಧರ್ಮಶಾಸ್ತ್ರದೊಂದಿಗೆ ಆತನ ಸಂಬಂಧ.* ಆತನು ಅಧರ್ಮಸ್ವರೂಪ ಮನುಷ್ಯನು (ವ. 3), ಆತನು ಕೊಡಲ್ಪಟ್ಟಿರುವ ಧರ್ಮಶಾಸ್ತ್ರವನ್ನು, ಆತ್ಮೀಕ ಮತ್ತು ರಾಜಕೀಯ ಎರಡೂ ಧರ್ಮಶಾಸ್ತ್ರಗಳನ್ನು ಧಿಕ್ಕರಿಸುವನು. ಈ ಕಾರಣದಿಂದ, ಆತನಿಗೆ ವರ್ಣನಾತ್ಮಕವಾದ "ಅಧರ್ಮಸ್ವರೂಪನು" ಎಂಬ ಹೆಸರು ಕೊಡಲ್ಪಟ್ಟಿದೆ.

*ಭವಿಷ್ಯದೊಂದಿಗೆ ಆತನ ಸಂಬಂಧ.* ಆತನು ಪೌಲನ ದಿನದಲ್ಲಿ ಈಗಾಗಲೇ ಕಾರ್ಯ ಮಾಡುತ್ತಿದ್ದ ಅಧರ್ಮತೆಯ ಗುಪ್ತತೆಯೊಳಗಿಂದ ಬೆಳೆದು ಬರುವನು. ಯೂದನ ಹಾಗೆ, ನಾಶನದ ಮಗನಾಗಿರುವವನಾಗಿ (ವ. 3), ಆತನ ಕೆಲಸದಲ್ಲಿ ನಾಶನತೆ ಮತ್ತು ಆತನ ಅಂತ್ಯಾವಸ್ಥೆಯಲ್ಲಿನ ನಾಶನದ ವೈಶಿಷ್ಟ್ಯತೆಯನ್ನು ಹೊಂದಿರುವನು. ಆತನು ನಾಶನದ ಕಡೆಗೆ ಸಾಗುತ್ತಿರುವವನು ಮತ್ತು ಆತನನ್ನು ಹಿಂಬಾಲಿಸುವ ಯಾವನನ್ನೇ ಆಗಲಿ ತನ್ನೊಂದಿಗೆ ಕರೆದೊಯ್ಯುವನು. ಪೌಲನ ಕಾಲದಲ್ಲಿ, ಈ ಅಧರ್ಮಸ್ವರೂಪನನ್ನು ಒಂದು ಶಕ್ತಿ ಅಥವಾ ಅಧಿಕಾರವು ಅಡ್ಡಿ ಮಾಡುತ್ತಿತ್ತು (ವ. 6). ಆದುದರಿಂದ, ಭವಿಷ್ಯದಲ್ಲಿ, ಆತನು ದೃಶ್ಯದಲ್ಲಿ ಉದಯಿಸಿ ಬರುವನು ಮತ್ತು ಪ್ರಾಬಲ್ಯತೆಯನ್ನು ಸಾಧಿಸಿ ಯೇಸುವು ಬರುವ ತನಕ ಆತ್ಮೀಕವಾದ ವಿಧ್ವಂಸವನ್ನುಂಟು ಮಾಡುವನು. ಆತನ ಬರೋಣದಲ್ಲಿ, ಯೇಸುವು ಅವನನ್ನು ತನ್ನ ಬಾಯ ಉಸುರಿನಿಂದ ಕೊಲ್ಲುವನು.

ಪೌಲನು ಈ ಪತ್ರಿಕೆಯನ್ನು ಬರೆಯುವ ಕಾಲದಲ್ಲಿ ಅಧರ್ಮವು ಗುಪ್ತವಾಗಿ ಈಗಲೂ ಕಾರ್ಯ ಮಾಡುತ್ತದೆಂದು ಹೇಳಿದನು (ವ. 7). ಆದುದರಿಂದ, ಪ್ರವಾದನೆಯ ನೆರವೇರಿಕೆಯು ಆರಂಭಗೊಂಡಿದ್ದು ಪೌಲನ ದಿನದಲ್ಲಿ ಗೋಚರಿಸುತ್ತಿತ್ತು. 6ನೇ ವಚನದಲ್ಲಿ, ಅಧರ್ಮಸ್ವರೂಪನು ತನಗೆ "ನೇಮಕವಾದ ಕಾಲದಲ್ಲಿ" ಬೈಲಿಗೆ ಬರುವನೆಂದು ಪೌಲನು ಹೇಳುತ್ತಾನೆ. ಆ ಸಮಯದಲ್ಲಿ ಆತನು ಬೈಲಿಗೆ ಬರದಂತೆ ತಡೆದಂಥ ಒಂದೇ ಸಂಗತಿಯೆಂದರೆ ಆತನಿಗೆ ಬರದಂತೆ ಮಾಡುತ್ತಿದ್ದ ಅಡ್ಡಿಯೇ ಆಗಿತ್ತು.

*ದೇವರೊಂದಿಗೆ ಆತನ ಸಂಬಂಧ.* ಆತನು ದೇವರೆಂದು ಕರೆಯಿಸಿಕೊಳ್ಳುವ ಅಥವಾ ಆರಾಧನೆಯನ್ನು ಹೊಂದುವ ಎಲ್ಲದರ ಮೇಲೆಯೂ ತನ್ನನ್ನು ಹೆಚ್ಚಿಸಿಕೊಳ್ಳುವನು, ದೇವರ ಆಲಯದಲ್ಲಿ ಕೂತುಕೊಳ್ಳುವನು. ಆತನು ತನ್ನನ್ನು ದೇವರೆಂದು ಘೋಷಿಸಿಕೊಳ್ಳುವನು. ಆತನು ಒಂದು ಧಾರ್ಮಿಕ ಸನ್ನಿವೇಶದೊಳಗೆ ಬರುವನು, ಮತ್ತು ಆತನ ಬರೋಣವು ಗಂಭೀರವಾದ ಸೂಚ್ಯಾರ್ಥಗಳನ್ನು ಹೊಂದಿರುವದು. ಇಲ್ಲಿ ಮುಖ್ಯವಾಗಿ ತೋರುವ ಅಂಶವೇನೆಂದರೆ ಆತನು ಒಂದು ಮಹಾ ಮತಭ್ರಷ್ಟತೆಯ ಮುಂದಾಳತ್ವವನ್ನು ವಹಿಸಿಕೊಳ್ಳುವನೆಂದು ಎಂಬದೆ, ಅದರ ಆರಂಭಗಳು ಆಗಲೇ ಪೌಲನಿಗೆ

ಗೋಚರಿಸುತ್ತಿದ್ದವು. ಆತನು ಮುಂದಾಳತ್ವವನ್ನು ವಹಿಸಿಕೊಳ್ಳುವ ಮತಭ್ರಷ್ಟತೆಯಿಂದ ಎಲ್ಲರ ಮೇಲೆಯೂ ಪರಿಣಾಮ ಉಂಟಾಗುವದು.

*ಸೈತಾನನೊಂದಿಗೆ ಆತನ ಸಂಬಂಧ.* ಆತನು ಸೈತಾನನಿಂದ ಚಾಲನೆ ಕೊಡಲ್ಪಟ್ಟು ಆತನಿಂದ ಪೋಷಿಸಲ್ಪಡುತ್ತಾನೆ (ವ. 9). ಬಲವಾದ ಸುಳ್ಳು ಸೂಚಕಕಾರ್ಯಗಳನ್ನು ಮತ್ತು ಅದ್ಭುತಕಾರ್ಯಗಳನ್ನು ಮಾಡುವದು ಆತನ ವೈಶಿಷ್ಟ್ಯವಾಗಿರುತ್ತದೆ (ವ. 9), ಆತನು ತನ್ನನ್ನು ಹಿಂಬಾಲಿಸುವಂತೆ ಅನೇಕರನ್ನು ಮನವೋಲಿಸುವನು. ಆತನು ಕಾರ್ಯ ಮಾಡುವ ವಿಧಾನವು ದುಷ್ಟ, ವಿನಾಶಕರ, ಮತ್ತು ಪರವಶಗೊಳಿಸುಂತಹ ಮೋಸತನಗಳಿಂದ ಕೂಡಿರುವದು (ವ. 10).

ಪೌಲನಿಂದ ಕೊಡಲ್ಪಟ್ಟಿರುವ ಈ ಚಿತ್ರಣವು ಇಡೀ ಹೊಸ ಒಡಂಬಡಿಕೆಯಲ್ಲಿಯೇ ಅತ್ಯಂಥ ಭಯ ಹುಟ್ಟಿಸುವಂತಹ ಚಿತ್ರಣವಾಗಿರುತ್ತದೆ. ರೋಮನ್ ಸಾಮ್ರಾಜ್ಯದಲ್ಲೆಡೆಯೂ ನಿಜವಾದ ಕ್ರೈಸ್ತತ್ವವು ಸ್ಥಾಪಿಸಲ್ಪಟ್ಟ ಬಳಿಕ, ಸೈತಾನನು ತನಗೆ ಸಾಧ್ಯವಾದಷ್ಟು ಜನರನ್ನು ಆ ದಾರಿಯಿಂದ ವಿಮುಖರಾಗುವಂತೆ ಮಾಡುವದಕ್ಕಾಗಿ ತನ್ನ ಬಲಿಷ್ಠವಾದ ಪ್ರಯತ್ನವನ್ನು ಆರಂಭಿಸಲಿದ್ದನು. ಸೈತಾನನು ಅಧರ್ಮಸ್ವರೂಪನ ಮೂಲಕ ಆ ಕೆಲಸವನ್ನು ಮಾಡಿದನು ಮತ್ತು ಅದನ್ನೇ ಮಾಡುತ್ತಿದ್ದಾನೆ! EC

## ಒಬ್ಬ ಪ್ರೀತಿಸ್ವರೂಪಿ ದೇವರು "ಅಸತ್ಯವನ್ನು ನಡಿಸುವ ಭ್ರಮೆಯನ್ನು" ಕಳುಹಿಸಬಲ್ಲನೋ? (2:11)

ಒಬ್ಬ ಪ್ರೀತಿಸ್ವರೂಪಿಯಾದ ದೇವರು ಹೇಗೆ ಒಂದು "ಅಸತ್ಯವನ್ನು ನಡಿಸುವ ಭ್ರಮೆಯನ್ನು" ಕಳುಹಿಸಲು ಸಾಧ್ಯ? ದೇವರು ಜನರಿಗೆ ಸ್ವೇಚ್ಛಾ-ಚಿತ್ತವನ್ನು ಸಹ ಕೊಟ್ಟಿದ್ದಾನೆಂಬುದನ್ನು ನಾವು ನೆನಪಿನಲ್ಲಿಟ್ಟುಕೊಳ್ಳಬೇಕು. ಪುರುಷರು ಮತ್ತು ಸ್ತ್ರೀಯರು ಒಳ್ಳೇಯ ಹಾಗೂ ಕೆಟ್ಟ ಸಂಗತಿಗಳನ್ನು ಕಲಿಸುವ ಸಾಮರ್ಥ್ಯವನ್ನು ಹೊಂದಿದ್ದಾರೆ. ಅಲ್ಲದೆ ಅವರು ಒಳ್ಳೇದು ಮತ್ತು ಕೆಟ್ಟದ್ದು ಎರಡನ್ನೂ ನಂಬಬಲ್ಲರು. ಹೇಗೂ, ಪ್ರಾಮಾಣಿಕವಾಗಿ ಹುಡುಕುವವನು ಯಾವದು ಸರಿ ಮತ್ತು ಯಾವದು ತಪ್ಪು ಎಂಬುದರ ವ್ಯತ್ಯಾಸವನ್ನು ತಿಳಿಯಬಲ್ಲನು. ಸತ್ಯವನ್ನು ತಿರಸ್ಕರಿಸಿರುವವನು ಸುಳ್ಳೇ ಸತ್ಯವಾಗಿರುತ್ತದೆಂಬುದಾಗಿ ತನಗೆ ಮನವರಿಕೆ ಮಾಡಿಕೊಂಡವನಾಗಿರುತ್ತಾನೆ. ಈ ವ್ಯಕ್ತಿಯು ಭ್ರಮೆಗೊಳಗಾಗುವಂತೆ ದೇವರ ಅನುಮತಿಸುವನು.

ದೇವರು ಜನರಿಗೆ ಆರಿಸಿಕೊಳ್ಳುವದಕ್ಕೆ ಎರಡು ದಾರಿಗಳನ್ನು ಕೊಟ್ಟಿದ್ದಾನೆ (ಮತ್ತಾಯ 7:13, 14). ಜೀವಕ್ಕೆ ನಡಿಸುವ ಇಕ್ಕಟ್ಟಾದ ದಾರಿಯುಂಟು ಮತ್ತು ನಾಶನಕ್ಕೆ ನಡಿಸುವ ಅಗಲವಾದ ದಾರಿಯುಂಟು. ಅಗಲವಾದ ದಾರಿಯನ್ನು ಆರಿಸಿಕೊಳ್ಳುವ ಮೂಲಕ, ಒಬ್ಬನು ಮೋಸ ಹೋಗುವದನ್ನು ಆಯ್ಕೆ ಮಾಡಿಕೊಳ್ಳುವವನಾಗಿದ್ದಾನೆ. ಮೋಸ ಹೋದವರಾದ ಎಲ್ಲರಿಗೂ ನ್ಯಾಯತೀರ್ಪು ಸಹ ಆಗುವದು (ವ. 12). ಇದು ಸಂಭವಿಸುವದು ದೇವರಿಗೆ ಇಷ್ಟವಿಲ್ಲ (2 ಪೇತ್ರ 3:9). ಆದಾಗ್ಯೂ, ಒಬ್ಬನು ಸತ್ಯಕ್ಕೆ ವಿರುದ್ಧವಾಗಿ ತೀರ್ಮಾನಿಸಿಕೊಂಡಿರುವದಾದರೆ, ಈ ವ್ಯಕ್ತಿಗೆ ನ್ಯಾಯತೀರ್ಪು ಆಗುವ ಹಾಗೆ (ಅಂದರೆ, ದಂಡನೆಯಾಗುವ ಹಾಗೆ) ಆತನು ಸುಳ್ಳನ್ನು ನಂಬುವಂತೆ ದೇವರು ಅವನಿಗೆ

ಅನುಮತಿಸುವನು.

ದೇವರು ಆರಿಸಿಕೊಳ್ಳುವ ಸ್ವಾತಂತ್ರ್ಯವನ್ನು ಅನುಮತಿಸುತ್ತಾನೆ, ಆದರೆ ನಾವು ಸಲಿಂಗಕಾಮಿಗಳ ವಿವಾಹಗಳು, ವಿವಾಹಕ್ಕೆ ಮುನ್ನ ಮತ್ತು ವಿವಾಹದ ಹೊರಗಿನ ಲೈಂಗಿಕ ಸಂಬಂಧಗಳನ್ನು ಮನ್ನಿಸುವಿಕೆ, ಅಥವಾ ಕ್ರಿಸ್ತನು ದೇವರ ಬಳಿಗೆ ಹೋಗುವದಕ್ಕೆ ಒಂದು ಮಾರ್ಗವಾಗಿದ್ದಾನೆ ಮತ್ತು ಏಕೈಕ ಮಾರ್ಗವಲ್ಲ ಎಂದು ಪರಿಗಣಿಸುವದು ಇಂತಹ ಸುಳ್ಳು ಬೋಧನೆಗಳಿಗೆ ನಾವು ಎಚ್ಚರವಾಗಿರಬೇಕು. ಇಂಥ ಉಪದೇಶಗಳು ಹರಿದಾಡುವಂತೆ ದೇವರು ಅವಕಾಶ ಕೊಡುವನು, ಆದರೆ ತಪ್ಪು ಮತ್ತು ಸರಿ ಯಾವುದೆಂದು ವಿವೇಚಿಸುವದು ನಮಗೆ ಬಿಟ್ಟದ್ದು.

ಯಾರು ಸರಿ ಮತ್ತು ತಪ್ಪು ಎಂದು ತಿಳಿದುಕೊಳ್ಳಲು ಉತ್ತಮ ದಾರಿಯೆಂದರೆ ಸತ್ಯವನ್ನು ತಿಳುಕೊಳ್ಳುವದು. ದೇವರ ವಾಕ್ಯವೇ ಸತ್ಯವು (ಯೋಹಾನ 17:17). Isaac Watts ಹೀಗೆ ಬರೆಯುತ್ತಾನೆ,

> ಯೌವನಸ್ಥರು ಹೇಗೆ ತಮ್ಮ ಹೃದಯಗಳನ್ನು ಸುರಕ್ಷಿತವಾಗಿ ಕಾಪಾಡಿಕೊಳ್ಳಬಲ್ಲರು,
> ಮತ್ತು ತಮ್ಮ ಜೀವಿತಗಳನ್ನು ಪಾಪಕ್ಕೊಳಗಾಗದಂತೆ ಕಾಯುವರು?
> ನಿನ್ನ ವಾಕ್ಯವು ಮನಸ್ಸಾಕ್ಷಿಯನ್ನು ಶುದ್ಧವಾಗಿಟ್ಟುಕೊಳ್ಳಲು
> ಆಯ್ದ ವಿಧಿಗಳನ್ನು ಕಲಿಸುತ್ತದೆ.
>
> ಅದು ಸೂರ್ಯನಂತೆ, ಒಂದು ಪರಲೋಕದ ಬೆಳಕು,
> ಅದು ನಮ್ಮನ್ನು ದಿನವೆಲ್ಲಾ ಮಾರ್ಗದರ್ಶಿಸುವದು;
> ಮತ್ತು ರಾತ್ರಿಯ ಅಪಾಯಗಳ ಮೂಲಕ, ನಮ್ಮ ದಾರಿಯನ್ನು ನಡಿಸಲು ಒಂದು
> ದೀಪದಂತೆ ಇರುತ್ತದೆ.[35] EE

## ಅಧರ್ಮಸ್ವರೂಪನ ದುರಂತ (2:3-9)

ನಾವು ಈ ವಾಕ್ಯಭಾಗದ ಅರ್ಥದ ವಿಷಯದಲ್ಲಿ ವಾಗ್ವಾದವನ್ನು ಮಾಡಬಹುದು, ನಾವು ಅಧರ್ಮಸ್ವರೂಪನು ಯಾರು ಎಂಬದರ ಕುರಿತು ವಾದವಿವಾದವನ್ನು ಮಾಡಬಹುದು, ಆದರೆ ಪೌಲನಿಂದ ಬಣ್ಣಿಸಲ್ಪಟ್ಟಿರುವ ಭಯಾನಕವಾದ ದುರಂತದ ಕುರಿತಾಗಿ ಯಾವದೇ ವಾಗ್ವಾದವಾಗಲಿ ಅಥವಾ ವಾದವಿವಾದವಾಗಲಿ ಇರುವದಿಲ್ಲ.

*ಆತನು ದೇವರನ್ನು ವಿರೋಧಿಸುತ್ತಾನೆ.* ಬರಲಿರುವವನು ದೇವರ ಸ್ಥಾನವನ್ನು ತೆಗೆದುಕೊಳ್ಳುವದಕ್ಕೆ ಹುಡುಕುತ್ತಾನೆ ಮತ್ತು ದೇವರೊಂದಿಗೆ ಪೂರ್ಣ ಪ್ರಮಾಣದಲ್ಲಿ ಯುದ್ಧದೊಳಗೆ ಪ್ರವೇಶಿಸುವನು.

*ಆತನು ದೇವರನ್ನು ವಿರೋಧಿಸುವಂತೆ ಬೇರೆಯವರನ್ನು ನಡಿಸುವನು.* ಬರಲಿರುವವನು ತನಗೆ ಸಾಧ್ಯವಾದಷ್ಟು ಹಿಂಬಾಲಕರನ್ನು ಗಳಿಸಿಕೊಳ್ಳಲು ಮುಂದಾಗುವನು. ವಾಸ್ತವದಲ್ಲಿ, ಆತನು ಕ್ರಿಸ್ತನ ಹಿಂಬಾಲಕರನ್ನು ಕೂಡಿಸಿಕೊಂಡು ದೇವರನ್ನು ವಿರೋಧಿಸುವಂತೆ ಅವರನ್ನು ನಡಿಸುವನು.

*ಆತನು ಬೇರೆಯವರನ್ನು ಮೋಸಗೊಳಿಸುವನು.* ಬರಲಿರುವವನು ತನ್ನ ರಾಜ್ಯವನ್ನು

ಮೋಸತನದ ಮೇಲೆ ಕಟ್ಟುವನು. ಅಧರ್ಮಸ್ವರೂಪನು ಯಾವನನ್ನಾದರು ದೇವರನ್ನು ವಿರೋಧಿಸುವಂತೆ ನಡಿಸಬಹುದಾದ ಏಕೈಕ ದಾರಿಯೆಂದರೆ ಅದು ಮೋಸತನದ ಮೂಲಕವೇ ಆಗಿದೆ. ಆತನು ಅವರಿಗೆ ಯಾವದು ಸತ್ಯವಲ್ಲವೋ ಅದನ್ನು ಹೇಳುವನು ಮತ್ತು ಅವರನ್ನು ಸುಳ್ಳುತನಕ್ಕೆ ತಲೆ ಬಾಗುವಂತೆ ಮಾಡುವನು.

*ಆತನು ತನ್ನನ್ನು ದೋಷಪೂರಿತವಾದದ್ದಕ್ಕೆ ಒಪ್ಪಿಸಿಕೊಳ್ಳುವನು.* ಅಧರ್ಮಸ್ವರೂಪನ ಜೀವಿತದ ಧ್ಯೇಯವು ಜನರನ್ನು ದೋಷಪೂರಿತವಾದದ್ದನ್ನು ಅಂಗೀಕರಿಸಿಕೊಂಡು, ಅದರಂತೆ ಜೀವಿಸಿ, ಮತ್ತು ಅದಕ್ಕಾಗಿ ಸಾಯುವಂತೆ ನಡಿಸುವದೇ ಆಗಿರುತ್ತದೆ.

*ಆತನು ಕೆಟ್ಟತನಕ್ಕೂ ದುಷ್ಟತ್ವಕ್ಕೂ ತನ್ನನ್ನು ಒಪ್ಪಿಸಿಕೊಳ್ಳುವನು.* ಬರಲಿಸುವವನು ಕೆಟ್ಟತನ ಸ್ವಭಾವವನ್ನು ಬಹಳ ಚೆನ್ನಾಗಿ ಅರಿತವನಾಗಿ, ಆತನು ಕೆಟ್ಟತನಕ್ಕೆ ಸಮರ್ಪಿತನಾಗಿರುತ್ತಾನೆ. ದುಷ್ಟತನವು ದೋಷಪೂರಿತವಾದದ್ದರ ಮೂಲಕ ಯಶಸ್ವಿಗೊಳ್ಳುವದು.

*ಆತನು ಬೇರೆಯವರನ್ನು ನಾಶನಕ್ಕೆ ನಡಿಸುವನು.* ಬರಲಿರುವವನು ಈಗಾಗಲೇ ಎಷ್ಟರ ಮಟ್ಟಿಗೆ ನಾಶನಕ್ಕೊಳಗಾದವನೆಂದರೆ ಆತನನ್ನು ನಾಶನಕ್ಕೆ ಅಧೀನನು (ನಾಶನ ಮಗನು) ಎಂದು ಕರೆಯಲಾಗಿದೆ. ಪೌಲನು ಅಧರ್ಮಸ್ವರೂಪನ ಅಂತ್ಯವನ್ನು ಆರಂಭದಿಂದಲೇ ಚಿತ್ರಿಸಿಕೊಂಡನು. “ಯಾವನೂ ನರಕಕ್ಕೆ ಹೋಗಬೇಕೆಂದೇ ಪಯಣವನ್ನು ಆರಂಭಿಸುವದಿಲ್ಲ,” ಆದರೆ ಈ ಅಧರ್ಮಸ್ವರೂಪನು ಹಾಗೆ ಮಾಡಿದನು ಎಂದು ಆತನು ಹೇಳುತ್ತಾನೆ.

ಯಾವನಿಗಾದರೂ ಅಂತಹ ಒಂದು ಚಳುವಳಿಯನ್ನು ಅಥವಾ ವ್ಯಕ್ತಿತ್ವವುಳ್ಳವನನ್ನು ಕಲ್ಪಿಸಿಕೊಳ್ಳುವದು ಕಷ್ಟಕರವಾಗಿರುತ್ತದೆ. ಪೌಲನು ಕಲ್ಪಿಸಿಕೊಂಡಿದ್ದು ದುಷ್ಟತನ ಮತ್ತು ನಾಶನಕ್ಕೆ ತನ್ನನ್ನು ಮಾರಿಕೊಂಡಿರುವ ಮತಭ್ರಷ್ಟತೆಯನ್ನು ಆಗಿದೆ. EC

## ಅಧರ್ಮಸ್ವರೂಪನ ನಾಶನ (2:3-9)

ಈ ಅಧರ್ಮಸ್ವರೂಪನ ಕುರಿತಾಗಿ ಅನೇಕ ಪ್ರಶ್ನೆಗಳು ಎದ್ದೇಳುತ್ತವಾದರೂ, ಈ ವಾಸ್ತವಾಂಶಗಳು ಸ್ಪಷ್ಟವಾಗಿವೆ: ಆತನು ಪೌಲನ ಕಾಲದ ನಂತರದಲ್ಲಿ ಅಸ್ತಿತ್ವಕ್ಕೆ ಬರಲಿದ್ದನು, ಮತ್ತು ಅಂತ್ಯಕಾಲದ ತನಕ ತನ್ನ ಮೋಸಕರವಾದ ಕೃತ್ಯವನ್ನು ನಡಿಸುತ್ತಾ ಉಳಿಯಲಿರುವನು.

*ಯೇಸುವಿನ ಬರೋಣದ ವೇಳೆ.* ಕ್ರಿಸ್ತನ ಪುನರಾಗಮನದಿಂದ ಅಧರ್ಮಸ್ವರೂಪನು ನಾಶಗೊಳಿಸಲ್ಪಡುವನು. ಕ್ರಿಸ್ತನು ಆತನ ಮೇಲೆ ತನ್ನ ಬಲ, ಶಕ್ತಿ, ಮತ್ತು ತನ್ನ ಬಾಯ ಉಸುರಿನಿಂದ ಆಕ್ರಮಣ ಮಾಡುವನು. ಅಧರ್ಮಸ್ವರೂಪನು ಯೇಸುವಿನ ಪ್ರಧಾನ ವೈರಿಯಾಗಿದ್ದಾನೆ. ಆತನು ಸೈತಾನನಲ್ಲ, ಆದರೆ ಸೈತಾನನಿಂದ ಚಾಲನೆಯನ್ನು ಮತ್ತು ಪ್ರೇರಣೆಯನ್ನು ಹೊಂದಿದವನು. ಅಧರ್ಮಸ್ವರೂಪನು ಕಾರು ಆಗಿದ್ದರೆ ಸೈತಾನನು ಅದಕ್ಕೆ ಇಂಧನ ಆಗಿರುವನು. ಅಧರ್ಮಸ್ವರೂಪನು ಕೊಡಲಿ ಆಗಿದ್ದಾನೆ, ಮತ್ತು ಅದನ್ನು ಬಿಸುವವನು ಸೈತಾನನಾಗಿದ್ದಾನೆ.

*ಆತನ ಬಾಯ ಉಸುರಿನ ಮೂಲಕ.* ಯೇಸು ಆತನನ್ನು ತನ್ನ ಬಾಯ ಉಸುರಿನಿಂದ

ಮತ್ತು ತನ್ನ ಪ್ರತ್ಯಕ್ಷತೆಯ ಪ್ರಕಾಶದಿಂದ ಕೊಲ್ಲುವನು. ಈ ವಾಸ್ತವಾಂಶವು ಯೇಸು ಆತನನ್ನು ಎಷ್ಟು ಸುಲಭವಾಗಿ ನಾಶಗೊಳಿಸುವನೆಂಬುದನ್ನು ತೋರಿಸುತ್ತದೆ. ಕರ್ತನ ಬಾಯಿಂದ ಹೊರಡುವ ಒಂದೇ ಒಂದು ಉಸುರು ಅಧರ್ಮಸ್ವರೂಪನನ್ನು ಕೊಚ್ಚಿಕೊಂಡು ಹೋಗುವದು. ಯೇಸುವಿನ ಬಾಯಿಂದ ಹೊರಡುವ ಒಂದೇ ಒಂದು ಮಾತು ಆತನನ್ನು ನಿರ್ನಾಮಗೊಳಿಸುವದು.

*ಸಂಪೂರ್ಣ ನಾಶನದೊಂದಿಗೆ.* ಅಧರ್ಮಸ್ವರೂಪನು ಸಂಪೂರ್ಣವಾಗಿ ಅಳಿಸಿ ಹಾಕಲ್ಪಡುವನು. ಕರ್ತನು ತನ್ನ ಧ್ಯೇಯಕ್ಕೆ ಎದುರಾಗುವ ಯಾವದೇ ವಿರೋಧದ ವಿರುದ್ಧ ಕ್ರಮ ಕೈಗೊಳ್ಳುವನೆಂಬ ಭರವಸೆಯೊಂದಿಗೆ ನಾವು ಇರಬಹುದು. ಈ ಮನುಷ್ಯನನ್ನು ಆತನು ಅಂತ್ಯದ ತನಕ ಇರುವಂತೆ ಅನುಮತಿಸುವನು, ಆದರೆ ಆತನ ಬರೋಣದಲ್ಲಿ ಆತನು ಮಾಡುವ ಮೊದಲ ಕಾರ್ಯವೆಂದರೆ ಈತನನ್ನು ತೆಗೆದು ಹಾಕುವದು. ಈತನು ಸೈತಾನನ ಹಾಗೂ ಆತನ ಕೆಲಸಗಾರರ ಸಂಗದ ಬೆಂಕಿಯ ಕೆರೆಗೆ ಹಾಕಲ್ಪಡುವನು. ಅಧರ್ಮಸ್ವರೂಪನನ್ನು ಹಿಂಬಾಲಿಸುವ ಯಾವನೇ ಆಗಲಿ ಆತನೊಂದಿಗೆ ನಾಶನಕ್ಕೆ ಹೋಗುವನು. EC

### ಅಧರ್ಮಸ್ವರೂಪನು ಯಾವಾಗ ಬರುವನು? (2:3-9)

ಒಬ್ಬನು 2:3-9 ವಚನಗಳನ್ನು ಓದಿದಾಗ ಮತ್ತು ಆತನ ದುರಂತವನ್ನು ಕಂಡು ನಡುಗುವವನಾಗಿ, ಈ ಅಧರ್ಮಸ್ವರೂಪನು ಈಗಾಗಲೆ ಲೋಕದಲ್ಲಿದ್ದಾನೋ ಎಂದು ಚಕಿತಗೊಳ್ಳುವನು. ಈ ವಿಚಾರಣೆಯ ಕುರಿತಾಗಿ, ಪೌಲನು ನಾಲ್ಕು ವಾಸ್ತವಾಂಶಗಳನ್ನು ಮುಂದಿಡುತ್ತಾನೆ.

*ಪೌಲನು ಬರೆಯುವ ವೇಳೆ ಅಧರ್ಮಸ್ವರೂಪನು ಅಡ್ಡಿ ಮಾಡಲ್ಪಡುತ್ತಿದ್ದನು.* ಯಾವದೋ ಒಂದು ಅಧಿಕಾರವು-ಬಹುಶಃ ಅದ್ಭುತಕರ ಯುಗ ಅಥವಾ ರೋಮನ್ ಸಾಮ್ರಾಜ್ಯ-ಆತನಿಗೆ ಅಡ್ಡಿ ಮಾಡುತ್ತಿತ್ತು ಮತ್ತು ಕಾಲದ ವೇದಿಕೆಯೊಳಗೆ ಪೂರ್ಣ ಶಕ್ತಿಯೊಂದಿಗೆ ಪ್ರವೇಶಿಸುವಂತೆ ಅನುಮತಿಸಲಿಲ್ಲ. ಹೇಗೂ, ಭವಿಷ್ಯದ ಒಂದು ಕಾಲದಲ್ಲಿ ಅಡ್ಡಿ ಮಾಡುವವನು ತೆಗೆದು ಹಾಕಲ್ಪಡುವನೆಂದು, ಮತ್ತು ಅಧರ್ಮಸ್ವರೂಪನು "ತನ್ನ ಕಾಲದಲ್ಲಿ" ಬೈಲಿಗೆ ಬರುವನೆಂದು ಪೌಲನು ಹೇಳುತ್ತಾನೆ.

*ಪೌಲನ ದಿನದಲ್ಲಿ ಅಧರ್ಮವು ಗುಪ್ತವಾಗಿ ಆಗಲೇ ಕಾರ್ಯ ಮಾಡುತ್ತಿತ್ತು.* ಪೌಲನು ಥೆಸಲೋನಿಕದವರಿಗೆ ಪತ್ರಿಕೆಯನ್ನು ಬರೆಯುವ ವೇಳೆ ಮಹಾ ಮತಭ್ರಷ್ಟತೆಯ ಆರಂಭಗಳ ಸೂಚನೆಗಳನ್ನು ಪೌಲನು ಕಾಣಬಹುದಿತ್ತು.

*ಅಧರ್ಮಸ್ವರೂಪನು ಪೌಲನ ನಂತರ ಕಾಲದ ಒಂದು ಘಟ್ಟದಲ್ಲಿ ಬಯಲಿಗೆ ಬರಲಿದ್ದನು.* ಸಮರ್ಪಕವಾದ ಕಾಲದಲ್ಲಿ, ಅಡ್ಡಿ ಮಾಡುವವನು ತೆಗೆದು ಹಾಕಲ್ಪಟ್ಟಾಗ, ಅಧರ್ಮಸ್ವರೂಪನು ಕಾಣಿಸಿಕೊಳ್ಳುವನು. ಅಧರ್ಮವು ಗುಪ್ತವಾಗಿ ಪೌಲನ ಕಾಲದಲ್ಲಿ ಕಾರ್ಯವನ್ನು ಆರಂಭಿಸಿತ್ತು.

*ಅಧರ್ಮಸ್ವರೂಪನು ಪ್ರತ್ಯಕ್ಷನಾಗುವಾಗ, ಆತನು ಲೋಕಾಂತ್ಯದ ತನಕ ನೆಲೆಗೊಳ್ಳುವನು.* ಅಧರ್ಮಸ್ವರೂಪನು ಲೋಕದಲ್ಲಿ ಉಳಿಯುವನು ಮತ್ತು

ಲೋಕಾಂತ್ಯದಲ್ಲಿ ಯೇಸುವು ಪ್ರತ್ಯಕ್ಷನಾಗುವಾಗ ಆತನು ನಾಶಗೊಳ್ಳುವನು. ಕನಿಷ್ಠ ನಾವು ಅಧರ್ಮಸ್ವರೂಪನು ಪೌಲನ ಕಾಲದ ನಂತರದಲ್ಲಿ ಬಂದನೆಂದು ದೃಢವಿಶ್ವಾಸದಿಂದ ಹೇಳಬಲ್ಲೆವು. ಆದುದರಿಂದ, ಆತನು ಈಗ ಲೋಕದಲ್ಲಿದ್ದಾನೆಂಬ ಭರವಸೆಯೊಂದಿಗೆ ನಾವು ಇರಬಹುದು. ಆತನು ಎಲ್ಲಿದ್ದಾನೆ? ಅಲ್ಲದೆ ಅಧರ್ಮಸ್ವರೂಪನು ಜನರನ್ನು ದೇವರಿಂದ ವಿಮುಖರನ್ನಾಗಿ ತಿರುಗಿಸಲು ತನ್ನ ಮುಖ್ಯ ಗಮನವನ್ನು ಕೊಡುತ್ತಾನೆಂಬದಾಗಿ ಸಹ ನಾವು ದೃಢವಿಶ್ವಾಸದಿಂದ ಹೇಳಬಲ್ಲೆವು. ಇದು ಎಲ್ಲಿ ಮಾಡಲ್ಪಡುತ್ತಿದೆ? ಅದು ಪೋಪಾಧಿಕಾರ ಮತ್ತು ಇತರ ಸತ್ಯದಿಂದ ವಿಮುಖವಾಗಿರುವಂತಹ, ಬೃಹತ್ ಧಾರ್ಮಿಕ ಪಂಥಗಳ ವ್ಯವಸ್ಥೆಯಲ್ಲಿ ಸಂಭವಿಸುತ್ತಿಲ್ಲವೋ?

ಇಂದು ಹೋರಾಟ ಮಾಡಲ್ಪಡುತ್ತಿರುವ ಅತ್ಯಂತ ದೊಡ್ಡ ಯುದ್ಧಗಳಲ್ಲೊಂದೆಂದರೆ ಈ ಅಧರ್ಮಸ್ವರೂಪನ ವಿರುದ್ಧದ ಯುದ್ಧವೇ. ಯಾವನು ಆತನೊಂದಿಗೆ ಸೇರಿಕೊಳ್ಳುತ್ತಾನೋ ಅವನು ಸಹ ಆತನಿಗೆ ನೇಮಕವಾದ ಅಂತ್ಯಾವಸ್ಥೆಯನ್ನು ಹೊಂದಿಕೊಳ್ಳುತ್ತಾನೆ. EC

## ಅಧರ್ಮಸ್ವರೂಪನ ಕೈಯೊಳಗಿಂದ ನಮ್ಮ ಬಿಡುಗಡೆ (2:10-12)

ಅಧರ್ಮಸ್ವರೂಪನ ಪ್ರತ್ಯಕ್ಷತೆಯ ಕುರಿತ ಈ ಭಯಾನಕ ಚಿತ್ರಣವನ್ನು ನೋಡಿದ ಬಳಿಕ ಮತ್ತು ಆತನು ಈಗಾಗಲೆ ಲೋಕದಲ್ಲಿದ್ದಾನೆಂಬದನ್ನು ಗ್ರಹಿಸಿಕೊಂಡ ಬಳಿಕ, ನಾವು "ನಾನು ಹೇಗೆ ಆತನಿಂದ ದೂರವಾಗಿರಬಲ್ಲೆನು? ಆತನನ್ನು ನನ್ನನ್ನು ವಶಪಡಿಸಿಕೊಳ್ಳದಂತೆ ನಾನು ಹೇಗೆ ಜಾಗ್ರತೆಯನ್ನು ವಹಿಸಬಲ್ಲೆನು?" ಎಂದು ಕೇಳಿಕೊಳ್ಳುವ ಮೂಲಕ ನಾವು ಹಿಮ್ಮೆಟ್ಟುತ್ತೇವೆ. ಪೌಲನು ಆತನಿಂದ ಬಿಡುಗಡೆಗೊಳ್ಳುವ ದಾರಿಯನ್ನು ತೋರಿಸಿದನು.

*ಸತ್ಯದ ಮೇಲಿನ ಒಂದು ಪ್ರಾಮಾಣಿಕವಾದ ಪ್ರೀತಿ.* ಸತ್ಯವನ್ನು ಪ್ರೀತಿಸದವರನ್ನು ಅಧರ್ಮಸ್ವರೂಪನು ಮೋಸಗೊಳಿಸುವನು (ವ. 10). ಸತ್ಯವನ್ನು ಪ್ರೀತಿಸದವರ ಮೇಲೆ ದೇವರು ಅಸತ್ಯವನ್ನು ನಡಿಸುವ ಭ್ರಮೆಯನ್ನು ಕಳುಹಿಸುವನು, ಹೀಗೆ ಅವರು ಸುಳ್ಳನ್ನ ನಂಬುವವರಾಗುವರು (ವ. 11). Raymond C. Kelcy ಹೀಗೆ ಬರೆಯುತ್ತಾನೆ, "ದೇವರು ಒಬ್ಬನನ್ನು ತಾನು ಏನನ್ನು ಇಷ್ಟಪಡುತ್ತಾನೋ ಅದಕ್ಕೆ ಒಪ್ಪಿಸಿ ಕೊಡುವಾಗ ಪಾಪದ ಪ್ರಗತಿಯ ಒಂದು ಕಾಲವಿರುತ್ತದೆ."[36]

ಪೌಲನು ರೋಮಾ 1:24, 26, 28ರಲ್ಲಿ ಜನರನ್ನು ಅವರ ಪಾಪಕ್ಕೆ ಒಪ್ಪಿಸಿ ಕೊಡುವ ಒಂದು ತತ್ವದ ಕುರಿತು ಪ್ರಸ್ತಾಪಿಸುತ್ತಾನೆ:

> ಆದಕಾರಣ ಅವರು ಮನಸ್ಸಿನ ದುರಾಶೆಗಳಂತೆ ನಡೆದು ತಮ್ಮ ದೇಹಗಳನ್ನು ಮಾನಹೀನಮಾಡಿಕೊಳ್ಳಲಿ ಎಂದು ದೇವರು ಅವರನ್ನು ಹೊಲಸಾದ ನಡತೆಗೆ ಒಪ್ಪಿಸಿದನು (ರೊಮಾ 1:24).
>
> ಅವರು ಇಂಥದನ್ನು ಮಾಡಿದ್ದರಿಂದ ದೇವರು ಅವರನ್ನು ಕೇವಲ ತುಚ್ಛವಾದ ಕಾಮಾಭಿಲಾಷೆಗೆ ಒಪ್ಪಿಸಿದನು. ಹೇಗಂದರೆ ಅವರ ಹೆಂಗಸರು ಸ್ವಾಭಾವಿಕವಾದ ಭೋಗವನ್ನು ಬಿಟ್ಟು ಸ್ವಭಾವಕ್ಕೆ ವಿರುದ್ಧವಾದ ಭೋಗವನ್ನು ಅನುಸರಿಸಿದರು (ರೋಮಾ 1:26).

ಇದಲ್ಲದೆ ದೇವರ ಜ್ಞಾನವು ಅವರಿಗೆ ಇಷ್ಟವಿಲ್ಲದ್ದರಿಂದ ಅಲ್ಲದೆ ಕೃತ್ಯಗಳನ್ನು ನಡಿಸುವವರಾಗುವಂತೆ ದೇವರು ಅವರನ್ನು ಅನಿಷ್ಟಭಾವಕ್ಕೆ ಒಪ್ಪಿಸಿದನು (ರೋಮಾ 1:28).

ದೇವರು ಕ್ರಮೇಣದಲ್ಲಿ ಒಬ್ಬ ಮನುಷ್ಯನನ್ನು ಆತನು ಬಯಸುವ ಮತ್ತು ಇಷ್ಟ ಪಡುವ ಸುಳ್ಳಿನಿಂದ ಸೆರೆ ಹಿಡಿಯಲ್ಪಡುವಂತೆ ಒಪ್ಪಿಸುವನು. ಸತ್ಯವನ್ನ ಪ್ರೀತಿಸದವರು ಮತ್ತು ಅನೀತಿಯಲ್ಲಿ ಆನಂದಿಸುವವರು ಅಧರ್ಮಸ್ವರೂಪನಿಂದ ಮನವೊಲಿಸಲ್ಪಡುವರು. ಆತನು ಅವರನ್ನು ನಿಯಂತ್ರಣದಲ್ಲಿಟ್ಟುಕೊಳ್ಳುವನು ಮತ್ತು ಅವರನ್ನು ನಾಶನದೊಳಕ್ಕೆ ನಡಿಸಿಕೊಂಡು ಹೋಗುವನು.

*ಸತ್ಯಕ್ಕೆ ಒಂದು ಪ್ರಾಮಾಣಿಕವಾದ ವಿಧೇಯತೆ.* ಖಂಡಿತವಾಗಿಯೂ, ಸತ್ಯವನ್ನು ಪ್ರೀತಿಸುವದರಲ್ಲಿ ಅದಕ್ಕೆ ನಿಜವಾಗಿ ಮತ್ತು ಪ್ರಾಮಾಣಿಕವಾಗಿ ವಿಧೇಯರಾಗುವದು ಸೇರಿಸುತ್ತದೆ. ಸತ್ಯವನ್ನು ಪ್ರೀತಿಸುವ ಕುರಿತು ಪೌಲನು ಹೇಳಿರುವಂಥದರಲ್ಲಿ ಈ ಸ್ವಭಾವದ ಗುಣವು ಸೂಚ್ಯಾರ್ಥವಾಗಿರುತ್ತದೆ. ಸತ್ಯಕ್ಕೆ ವಿಧೇಯರಾಗುವ ಮತ್ತು ಅದರಲ್ಲಿ ನೆಲೆಗೊಳ್ಳುವದರ ಮೂಲಕ ಮಾತ್ರವೇ ನಮಗೆ ಅಧರ್ಮಸ್ವರೂಪನ ವಿರುದ್ಧ ಸುರಕ್ಷತೆಯಿರುತ್ತದೆ.

ಅಧರ್ಮಸ್ವರೂಪನು ಯಾರಾಗಿದ್ದಾನೆಂಬ ಬಗ್ಗೆ ನಮಗೆ ಪ್ರತಿಯೊಂದು ವಿವರಗಳು ತಿಳಿಯದಿರಬಹುದು, ಆದರೆ ಎಲ್ಲಿಯ ವರೆಗೆ ನಾವು ಸತ್ಯವನ್ನು ಪ್ರೀತಿಸಿ ಅದಕ್ಕೆ ವಿಧೇಯರಾಗುತ್ತೇವೋ ಅಲ್ಲಿಯ ವರೆಗೆ ಆತನ "ವಶಕ್ಕೊಳಗಾಗುವದಿಲ್ಲ" ಅಥವಾ ಆತನ ಪ್ರಲೋಭನೆಗೆ ಒಳಗಾಗುವದಿಲ್ಲ ಎಂಬ ಸತ್ಯದಲ್ಲಿ ನಾವು ನಿಶ್ಚಿಂತೆಯಿಂದಿರಬಹುದು. ನಮ್ಮ ಕೃಪಾಭರಿತನಾದ ದೇವರು ಈ ನಿತ್ಯವಾದ ಸತ್ಯವನ್ನು ನಮಗೆ ಪ್ರೀತಿಸಿ, ಹೃದಯದಲ್ಲಿಟ್ಟುಕೊಂಡು, ಅದರಂತೆ ಜೀವಿಸಬೇಕೆಂದು, ಹೀಗೆ ಎಲ್ಲಾ ಸುಳ್ಳಿನಿಂದ ನಮ್ಮನ್ನು ಕಾಪಾಡಬೇಕೆಂದು ಕೊಟ್ಟಿರುತ್ತಾನೆ. EC

## ಸತ್ಯವನ್ನು ಪ್ರೀತಿಸದಿರುವದರ ದುರಂತ (2:10-12)

ಒಬ್ಬನು ದೇವರ ಸತ್ಯವನ್ನು ಪ್ರೀತಿಸದಿರುವದರ ದುರಂತವನ್ನು ಪೌಲನು ತಿಳಿಸುತ್ತಾನೆ. ಈ ವಿಫಲತೆಯು ಒಬ್ಬನು ಅನುಭವಿಸಬಹುದಾದ ಅತ್ಯಂಥ ಕೆಟ್ಟದ್ದರಲ್ಲೊಂದಾಗಿದೆ.

*ಸತ್ಯವನ್ನು ಪ್ರೀತಿಸದವನು ಮೋಸಗೊಳಿಸಲ್ಪಡುವನು.* ಸತ್ಯವನ್ನು ಪ್ರೀತಿಸದವರು ಅಧರ್ಮಸ್ವರೂಪನಿಗೆ ಬೇಟೆಯಾಗುತ್ತಾರೆ. ಮತಭ್ರಷ್ಟತೆಯ ಬೃಹತ್ ವ್ಯವಸ್ಥೆಯು ಆತನನ್ನು ನುಂಗಿ ಬಿಡುವದು ಮತ್ತು ಆತನನ್ನು ನಾಶನದೊಳಕ್ಕೆ ಕರೆದೊಯ್ಯುವದು. ಒಬ್ಬ ವ್ಯಕ್ತಿಗೆ ಸಂಭವಿಸಬಹುದಾದ ಅತಿ ಕೆಟ್ಟ ಸಂಗತಿಯಲ್ಲೊಂದೆಂದರೆ ಆತನು ದೇವರ ಸತ್ಯದ ವಿಷಯದಲ್ಲಿ ಮೋಸಕ್ಕೊಳಗಾಗುವದೇ.

*ಸತ್ಯದ ಮೇಲೆ ಪ್ರೀತಿಯನ್ನಿಡದವನು ಸುಳ್ಳನ್ನು ಸತ್ಯವೇನೋ ಎಂಬಂತೆ ನಂಬುವನು.* ನಾವು ಮೋಸ ಹೋಗುವದು ಮಾತ್ರವಲ್ಲದೆ, ನಾವು ಸುಳ್ಳನ್ನು ಒಂದು ಸತ್ಯವೋ ಎಂಬಂತೆ ನಂಬುವವರಾಗುವೆವು. ಕೆಟ್ಟತನದ ಸ್ವಾಭಾವಿಕವಾದ ಕೃತ್ಯಗಳು ಅಧಿಕಾರ

ವಹಿಸಿಕೊಳ್ಳುವದು. ಪೌಲನು ಇದನ್ನು "ಅಸತ್ಯ ನಡಿಸುವ" ಎಂಬದಾಗಿ ಬಣ್ಣಿಸುತ್ತಾನೆ. ಅದು ಒಂದು ರೀತಿಯಲ್ಲಿ ಆತನನ್ನು ತಾನು ಆರಿಸಿಕೊಂಡ ಸುಳ್ಳಿಗೆ ಒಪ್ಪಿಸುವಂತಿರುತ್ತದೆ. ಆತನು ಸುಳ್ಳಿನಲ್ಲಿ ನಡೆಯುವವನಾಗಿ ತನು ಸತ್ಯದಂತೆಯೇ ಜೀವಿಸುತ್ತಿದ್ದೇನೆಂದು ಮನವರಿಕೆಯನ್ನು ಹೊಂದಿರುವನು.

*ಸತ್ಯವನ್ನು ಪ್ರೀತಿಸದವನು ಅನೀತಿಯಲ್ಲಿ ಆನಂದವನ್ನು ಕಂಡುಕೊಳ್ಳುವನು.* ಈ ವ್ಯಕ್ತಿಯು ಸುಳ್ಳಿನಲ್ಲಿ ಅದೊಂದು ಸತ್ಯವೋ ಎಂಬಂತೆ ಆನಂದಿಸುವನು. ಆತನು ಅದರಂತೆ ನಡೆಯುವದರಿಂದ ಮತ್ತು ಅದಕ್ಕಾಗಿ ತ್ಯಾಗ ಮಾಡುವ ಮೂಲಕ ಅದರಲ್ಲಿ ಆನಂದವನ್ನು ಕಂಡುಕೊಳ್ಳುವನು.

*ಆತನಿಗೆ ಸತ್ಯಕ್ಕನುಗುಣವಾಗಿ ತೀರ್ಪು ಆಗುವದು.* ದೇವರು ಪ್ರತಿ ಮನುಷ್ಯನಿಗೂ ಸತ್ಯದ ಪ್ರಕಾರವಾಗಿ ನ್ಯಾಯತೀರಿಸುವನು. ಮನುಷ್ಯರು ಸತ್ಯವನ್ನು ಸ್ವೀಕರಿಸಿಕೊಳ್ಳುವ ಅವಕಾಶವಿದ್ದರೂ ಅದನ್ನು ತಿಸ್ಕರಿಸುವಾಗ, ಅವರು ಯಾವದನ್ನು ತಿರಸ್ಕರಿಸಿದ್ದಾರೋ ಅದೇ ಅವರಿಗೆ ನ್ಯಾಯತೀರಿಸುವದು.

ಒಬ್ಬನು ದೇವರ ಸತ್ಯವನ್ನು ತಿರಸ್ಕರಿಸಿದಾಗ ಹೆಚ್ಚು ನಿರೀಕ್ಷೆರಹಿತ ಕಂದಕದಲ್ಲಿ ಬೀಳುವ ಪ್ರಕಾರ ಬೇರೆ ಯಾವ ಸಂದರ್ಭದಲ್ಲಿಯೂ ಬೀಳುವದಿಲ್ಲವೇನೋ ಅನ್ನಿಸುತ್ತದೆ. ಅವನು ಹಾಗೆ ಮಾಡುವಾಗ, ಆತನು ತನ್ನನ್ನು ಅಧರ್ಮಸ್ವರೂಪನಿಗೆ, ಸುಳ್ಳಿನ ಶಕ್ತಿಗೆ, ಮತ್ತು ದೇವರ ನ್ಯಾಯತೀರ್ಪಿಗೆ ತೆರೆದಿಟ್ಟುಕೊಳ್ಳುವವನಾಗುತ್ತಾನೆ. ಆತನಿಗಿರುವ ಏಕೈಕ ನಿರೀಕ್ಷೆಯೆಂದರೆ ಸತ್ಯದ ಕಡೆಗೆ ಪುನಃ ತಿರುಗಿಕೊಳ್ಳುವದೇ. EC

## ದೇವರಿಂದ ಆದುಕೊಂಡವರು (2:13, 14)

ಪೌಲನು ಥೆಸಲೋನಿಕದವರ ನಿಮಿತ್ತ ದೇವರಿಗೆ ಕೃತಜ್ಞತಾಸ್ತುತಿಯನ್ನು ಸಲ್ಲಿಸುವದಕ್ಕೆ ಒತ್ತಾಯಿಸಲ್ಪಟ್ಟನು. ಆ ಕೃತಜ್ಞತಾಸ್ತುತಿಗೆ ಮೂಲಕಾರಣವೇನೆಂದರೆ ಅವರು ದೇವರಿಂದ ಆರಿಸಿಕೊಳ್ಳಲ್ಪಟ್ಟಿದ್ದರು. ಅದೊಂದು ಇಮ್ಮಡಿ ಆರಿಸಿಕೊಳ್ಳುವಿಕೆಯಾಗಿತ್ತು- ದೇವರು ಅವರನ್ನು ಸುವಾರ್ತೆಯ ಆಮಂತ್ರಣದ ಮೂಲಕ ಆರಿಸಿಕೊಂಡನು, ಮತ್ತು ಅವರು ದೇವರ ಆಮಂತ್ರಣವನ್ನು ಅಂಗೀಕರಿಸಿಕೊಳ್ಳುವ ಮೂಲಕ ಆದುಕೊಂಡವರೊಳಗೆ ಸೇರಿರುವವರಾಗಿರುವದಕ್ಕೆ ಆರಿಸಿಕೊಂಡರು.

*ರಕ್ಷಣೆಯನ್ನು ಹೊಂದುವದಕ್ಕೆ ಆರಿಸಿಕೊಂಡವರು.* ಪ್ರತಿ ಕ್ರೈಸ್ತನು ಸಹ ಸುವಾರ್ತೆಗೆ ವಿಧೇಯನಾಗುವಾಗ ಆ ಸುವಾರ್ತೆಯ ಮೂಲಕ ರಕ್ಷಣೆಯೊಳಗೆ ಕರೆಯಲ್ಪಡುತ್ತಾನೆ (ವ. 14). ಥೆಸಲೋನಿಕದವರು ಸುವಾರ್ತೆಗೆ ವಿಧೇಯರಾಗಿದ್ದರು ಮತ್ತು ಈ ರಕ್ಷಣೆಯೊಳಗೆ ಬಂದಿದ್ದರು. ಅವರು ಪಾಪದಿಂದ ರಕ್ಷಿಸಲ್ಪಟ್ಟಿದ್ದರೆಂಬುದು ಪೌಲನಿಗೆ ಸಂತೋಷ ಪಟ್ಟು ಸ್ತೋತ್ರಗಳನ್ನು ಸಲ್ಲಿಸುವಂತೆ ಮಾಡಿತ್ತು.

*ಶುದ್ಧೀಕರಿಸಲ್ಪಡುವದಕ್ಕೆ ಆರಿಸಿಕೊಳ್ಳಲ್ಪಟ್ಟವರು.* ಅವರು ಕ್ರೈಸ್ತರಾದ ವೇಳೆಯಲ್ಲಿ ಶುದ್ಧೀಕರಣವನ್ನು ಪಡೆದುಕೊಂಡರು, ಮತ್ತು ಅವರು ಅದರಲ್ಲಿ ಬೆಳೆಯುವದನ್ನು ಮುಂದುವರೆಸಿದರು. ಪರಿವರ್ತನೆಗೊಂಡವರು ದೇವರಲ್ಲಿ ಹೆಚ್ಚೆಚ್ಚು ಭಕ್ತಿವಂತರಾಗುತ್ತಿದ್ದಾರೆಂಬುದಕ್ಕಿಂತಲೂ ಒಬ್ಬ ಬೋಧಕನಿಗೆ ಇನ್ನಾವದೂ

ಸಂಭ್ರಮವನ್ನುಂಟು ಮಾಡಲಾರದು.

*ಸತ್ಯದಲ್ಲಿ ನಂಬಿಕೆಯಿಡುವದಕ್ಕೆ ಆರಿಸಿಕೊಳ್ಳಲ್ಪಟ್ಟವರು.* ಥೆಸಲೋನಿಕದವರು ಸತ್ಯದ ಪ್ರಕಾರ ಜೀವಿಸುವದಕ್ಕೆ ಪ್ರತ್ಯೇಕಿಸಲ್ಪಟ್ಟಿದ್ದಾರೆಂಬುದಕ್ಕಾಗಿ ಪೌಲನು ದೇವರನ್ನು ಸ್ತುತಿಸಿದನು. ದೇವರು ಲೋಕದಲ್ಲಿ ತನ್ನ ವಾಕ್ಯವನ್ನು ಗೌರವಿಸುವ ಒಂದು ಜನರ ತಂಡವನ್ನು ಹುಡುಕುತ್ತಾನೆ. ಅವರು ದೇವರ ಸತ್ಯವನ್ನು ನಂಬುವವರಾಗುವಂತೆ ಆರಿಸಿಕೊಳ್ಳಲ್ಪಟ್ಟವರು.

*ಕ್ರಿಸ್ತನ ಮಹಿಮೆಗೋಸ್ಕರ ಆರಿಸಿಕೊಳ್ಳಲ್ಪಟ್ಟವರು.* ಥೆಸಲೋನಿಕದಲ್ಲಿ ಹೊಸದಾಗಿ ಪರಿವರ್ತನೆಗೊಂಡವರು ಪರಲೋಕದ ದಾರಿಯಲ್ಲಿದ್ದರು, ಮಹಿಮೆಗೆ ನೇಮಕವಾಗಿದ್ದರು. ಅವರು ಒಂದು ದಿನ ಯೇಸು ಕ್ರಿಸ್ತನ ಮಹಿಮೆಯನ್ನು ಹೊಂದಿಕೊಂಡು ಅದರಲ್ಲಿ ಪಾಲುಗಾರರಾಗಲಿರುವರು.

ದೇವರಿಂದ ಆರಿಸಿಕೊಳ್ಳಲ್ಪಡುವ ಈ ಅದ್ಭುತವಾದ ಸತ್ಯವು ಇನ್ನು ಹಲವಾರು ಸತ್ಯಗಳನ್ನು ಸೂಚಿಸುತ್ತದೆ: ರಕ್ಷಣೆ, ಶುದ್ಧೀಕರಣ ಸತ್ಯದ ನಂಬಿಕೆ, ಮತ್ತು ಕ್ರಿಸ್ತನ ಮಹಿಮೆಯನ್ನು ಹೊಂದಿಕೊಳ್ಳುವದಕ್ಕೆ ಸಾಗುತ್ತಿರುವದು. ಕ್ರೈಸ್ತನಾಗಿರುವ ಯಾವದೇ ವ್ಯಕ್ತಿಯ ನಿಮಿತ್ತವಾಗಿ ಆನಂದಿಸಿರಿ ಯಾಕೆಂದರೆ ಅವರು ಥೆಸಲೋನಿಕದವರು ಹೊಂದಿಕೊಳ್ಳಲಿದ್ದ ಅದೇ ಆಶೀರ್ವಾದಗಳನ್ನು ಹೊಂದಿಕೊಳ್ಳುವ ಅದೇ ಸಾಲಿನಲ್ಲಿರುತ್ತಾರೆ. EC

**ಈಗ ಏನು ಮಾಡುವದು? (2:15)**

ಥೆಸಲೋನಿಕದವರು ಈಗ ಏನು ಮಾಡಬೇಕಿತ್ತು? ಅವರು ಹಿಂಸೆಗಳನ್ನೆಲ್ಲಾ ತಾಳಿಕೊಂಡು ನಿಂತಿದ್ದರು, ನಂಬಿಕೆಯಲ್ಲಿ ಮತ್ತು ಪ್ರೀತಿಯಲ್ಲಿ ಅಭಿವೃದ್ಧಿಗೊಂಡಿದ್ದರು, ಎರಡನೆಯ ಬರೋಣದ ಕುರಿತು ಒಂದು ಆಳವಾದ ತಿಳುವಳಿಕೆಯನ್ನು ಪಡೆದುಕೊಂಡಿದ್ದರು. ಈಗ ಮುಂದೆ ಏನು ಮಾಡುವದು? ನಾವು ನಮ್ಮ ಕ್ರೈಸ್ತ ಜೀವಿತವನ್ನು ಜೀವಿಸುವದರಲ್ಲಿ ಎಲ್ಲಾ ರೀತಿಯಲ್ಲಿ ಉತ್ತಮತೆಯನ್ನು ಸಾಧಿಸಿದಾಗ, ನಾವು ಮುಂದೇನು ಮಾಡಬೇಕು?

*ನಂಬಿಕೆಯಲ್ಲಿ ದೃಢವಾಗಿ ನಿಲ್ಲಿರಿ* (ವ. 15). ಅವರು ಯೇಸು ಮತ್ತು ದೇವರ ಕುರಿತ ಸತ್ಯವನ್ನು ನಂಬಿದ್ದರು, ಮತ್ತು ಅವರು ಆ ನಂಬಿಕೆಯಲ್ಲಿ ನಿಲ್ಲಬೇಕಿತ್ತು ಅಥವಾ ನೆಲೆಯಾಗಿರಬೇಕಿತ್ತು. ಅವರು ತಮ್ಮ ನಂಬಿಕೆಯನ್ನು ಹಿಡಿದುಕೊಳ್ಳುವದಾದರೆ ಅದು ಅವರನ್ನು ಹಿಡಿದುಕೊಳ್ಳುವದಾಗಿತ್ತು.

*ಸತ್ಯದಲ್ಲಿ ದೃಢವಾಗಿ ನಿಲ್ಲಿರಿ.* ಅವರಿಗೆ ಮಾತಿನಿಂದಲೂ ಪತ್ರಿಕೆಯಿಂದಲೂ ಅಪೊಸ್ತಲರ ಸಂಪ್ರದಾಯಗಳನ್ನು (ಬೋಧನೆಗಳನ್ನು) ಕಲಿಸಲಾಗಿತ್ತು (ವ. 15). ಹೊಸ ಒಡಂಬಡಿಕೆಯಲ್ಲಿ, "ಸಂಪ್ರದಾಯ" (παράδοσις, *paradosis*) ಎಂಬ ಪದವು ಕೆಲವು ಸಾರಿ ಪ್ರೇರಿತ ಬರಹಗಳು ಹಾಗೂ ಬೋಧನೆಯನ್ನು ಸೂಚಿಸುವದಕ್ಕೆ ಬಳಸಲ್ಪಟ್ಟಿದ್ದರೆ, ಇನ್ನು ಕೆಲವು ಸಾರಿ ಅದು ಮನುಷ್ಯರ ಆಜ್ಞೆಗಳನ್ನು ಸೂಚಿಸುತ್ತದೆ (ಮತ್ತಾಯ 15:2, 3). ಅದರರ್ಥವು "ಹಸ್ತಾಂತರಿಸಲ್ಪಟ್ಟಿರುವ ಒಂದು ಸಂಗತಿ" ಎಂದಾಗಿದೆ. ಇಲ್ಲಿ ಅದು ಪ್ರೇರಿತ

ಬರಹಗಳನ್ನು ಸೂಚಿಸಿ ಬಳಸಲ್ಪಟ್ಟಿದೆ. ಥೆಸಲೋನಿಕದವರು ಪೌಲನಿಂದ ಪ್ರೇರಿತವಾದ ಪತ್ರಿಕೆಗಳನ್ನು ಪಡಕೊಂಡಿದ್ದರು, ಮತ್ತು ಅವರು ಅವುಗಳನ್ನು ಓದಬೇಕಿತ್ತು, ಮತ್ತು ಆತನ ಬೋಧನೆಗಳಲ್ಲಿ ನೆಲೆಗೊಳ್ಳಬೇಕಿತ್ತು.

ಕ್ರೈಸ್ತತ್ವವು ಒಬ್ಬ ಚಿಕ್ಕ ಮಗುವು ಸಹ ನೀರಿನಲ್ಲಿ ನಡೆಯುವಷ್ಟರ ಮಟ್ಟಿಗೆ ಆಳವಿಲ್ಲದ್ದಾಗಿದೆ, ಆದರೆ ಒಂದು ಆನೆಯು ಈಜುವದಕ್ಕಾಗುವಷ್ಟು ಆಳವೂ ಸಹ ಇರುತ್ತದೆ. ನಾವು ಈ ವಚನದಲ್ಲಿ ಕ್ರೈಸ್ತೀಯ ಜೀವನದ ಸರಳತೆಯನ್ನು ಕಂಡಿದ್ದೇವೆ. ಎರಡು ಹೆಜ್ಜೆಗಳು ಒಂದಾಗಿ ಕೂಡಿಸಲ್ಪಟ್ಟಿರುತ್ತವೆ: ನಂಬಿಕೆಯನ್ನು ಕಾಪಾಡಿಕೊಳ್ಳುವದು ಮತ್ತು ಸತ್ಯದೊಂದಿಗೆ ನೆಲೆಯಾಗಿರುವದು. EC

**ಒಂದು ಸುಂದರವಾದ ಅಂತ್ಯಾಶೀರ್ವಾದ (2:16, 17)**

ಪೌಲನು ಥೆಸಲೋನಿಕದವರ ಮೇಲೆ ಒಂದು ಸುಂದರವಾದ ಅಂತ್ಯಾಶೀರ್ವಾದವನ್ನು ಉಚ್ಚರಿಸುವ ಮೂಲಕ ಅಧರ್ಮಸ್ವರೂಪನ ಕುರಿತ ತನ್ನ ಚರ್ಚೆಯನ್ನು ಮುಕ್ತಾಯಗೊಳಿಸುತ್ತಾನೆ.

*"ನಿಮಗೆ ನಿತ್ಯವಾದ ಆದರಣೆ ಉಂಟಾಗಲಿ."* ಅವರಿಗೆ ಈ ಜೀವನವನ್ನು ಮೀರಿ ಹೋಗುವ ಮತ್ತು ಅವರನ್ನು ನಿತ್ಯತ್ವದೊಳಗೆ ಕರೆ ತರುವಂತಹ ಆದರಣೆಯು ಸಿಕ್ಕಬೇಕೆಂಬುದು ಆತನ ಬಯಕೆಯಾಗಿತ್ತು. ಬೇರೆಯವರಿಗೆ ದೈಹಿಕ ಆದರಣೆ ಸಿಕ್ಕಬೇಕೆಂದು ಹಾರೈಸುವದು ಒಂದು ರೀತಿ, ಆದರೆ ಅವರು ನಿತ್ಯವಾದ ಆದರಣೆಯನ್ನು ಹೊಂದಲಿ ಎಂದು ಹಾರೈಸುವದು ಬೇರೆಯೇ ಆಗಿರುತ್ತದೆ. ನಾವು ನಮ್ಮ ಸಹೋದರರಿಗೆ ನಿತ್ಯವಾದ ಆದರಣೆಯು ಸಿಕ್ಕಬೇಕೆಂದು ಹಾರೈಸುವವರಾಗೋಣ.

*"ನಿಮಗೆ ಕೃಪೆಯ ಮೂಲಕ ಉತ್ತಮವಾದ ನಿರೀಕ್ಷೆಯು ಸಿಕ್ಕಲಿ."* ಅವರು ದೇವರ ಕೃಪೆಯ ಮೇಲೆ ಆಧಾರವಾಗಿರುವ ನಿರೀಕ್ಷೆಯನ್ನು ಹೊಂದಿಕೊಳ್ಳಬೇಕೆಂದು ಪೌಲನು ಬಯಸಿದನು. ಈ ನಿರೀಕ್ಷೆಯು ನಿಜವಾದದ್ದು ಮತ್ತು ಸಜೀವವಾದದ್ದು, ಅದು ಸತ್ತದ್ದೂ ಜೀವವಿಲ್ಲದೂ ಆಗಿರುವದಿಲ್ಲ. ನಾವು ನಮ್ಮ ಸಹೋದದರಿಗೆ ಕೃಪೆಯ ಮೂಲಕ ಬರುವಂಥ ನಿರೀಕ್ಷೆಯು ಸಿಕ್ಕಲೆಂದು ಹಾರೈಸುವವರಾಗೋಣ.

*"ನೀವು ಸಕಲ ಸತ್ಕಾರ್ಯಗಳಲ್ಲಿ ಮತ್ತು ಸಕಲ ಸದ್ವಾಕ್ಯಗಳಲ್ಲಿ ದೃಢಪಡಿಸಲ್ಪಡುವಂತಾಗಲಿ."* ಅವರು ಸತ್ಕಾರ್ಯಗಳಲ್ಲಿಯೂ ಒಳ್ಳೇ ಸಂಭಾಷಣೆಯಲ್ಲಿಯೂ ದೃಢವಾಗಿ ನೆಲೆಗೊಳಿಸಲ್ಪಡಬೇಕೆಂದು, ಸರಿಯಾಗಿ ನಡೆಯುವವರು ಮತ್ತು ಸರಿಯಾಗಿ ಮಾತಾಡುವವರು ಆಗಿರಬೇಕೆಂದು ಆತನು ಬಯಸಿದನು. ಕ್ರಿಸ್ತನು ಅವರ ಕೃತ್ಯಗಳನ್ನು ಮತ್ತು ಸಂಭಾಷಣೆಯನ್ನು ನಿಯಂತ್ರಿಸುವಂತಾಗಲೆಂದು ಆತನು ಪ್ರಾರ್ಥನೆ ಮಾಡಿದನು. ನಮ್ಮ ಸಹೋದರರು ಸಕಲ ಸತ್ಕಾರ್ಯಗಳಲ್ಲಿ ಮತ್ತು ಸದ್ವಾಕ್ಯಗಳಲ್ಲಿ ದೃಢಪಡಿಸಲ್ಪಡಲೆಂದು ನಾವು ಹಾರೈಸುವವರಾಗೋಣ.

ನಿಮಗೆ ಸ್ಪಷ್ಟವಾಗಿ ಕಾಣಿಸುವ ಪ್ರಕಾರ, ಈ ಹಾರೈಕೆಯು ಒಂದು ಅತ್ಯುನ್ನತ ರೀತಿಯ ಕ್ರೈಸ್ತೀಯ ಜೀವನ ನಡಿಸುವದರಲ್ಲಿ ಫಲಿತಗೊಳ್ಳುವದು. ಪ್ರತಿಯೊಬ್ಬ ಕ್ರೈಸ್ತನು ಸಹ

ತಿಳಿದುಕೊಳ್ಳತ ಅತ್ಯುನ್ನತವಾದ ಮತ್ತು ಅತ್ಯುತ್ತಮ ಬೆಳವಣಿಗೆಯನ್ನು ವ್ಯಕ್ತಪಡಿಸಿದನು. ಕ್ರಿಸ್ತನಲ್ಲಿರುವ ಪ್ರಿಯರಿಗೋಸ್ಕರ ನೀವು ಏನನ್ನು ಹಾರೈಕೆ ಮಾಡುವಿರಿ? EC

**ಕ್ರೈಸ್ತನ ಕರೆ (2:13-17)**

1947 ರಲ್ಲಿ, Missouriಯ Nevadaದ ಹತ್ತಿರ ಒಂದು ವ್ಯವಸಾಯದ ಕೆಲಸವನ್ನು ನಡಿಸುತ್ತಿದ್ದನು. ನನ್ನ ಹಿರಿಯ ಅಣ್ಣನು ಈ ಮುಂಚೆಯೇ ಮಿಲಿಟರಿ ಸೇವೆಯಲ್ಲಿ ಸೇರ್ಪಡೆಗೊಳಿಸಲ್ಪಟ್ಟಿದ್ದನು, ಮತ್ತು ನನ್ನ ತಂದೆಯು ಹೃದಯದ ಸಮಸ್ಯೆಗಳಿಂದ ಬಳಲುತ್ತಿದ್ದನು. ಆದದರಿಂದ, ಬಹಳಷ್ಟು ಪಾಲು ಕೆಲಸವು ಹತ್ತೊಂಬತ್ತು ವಯಸ್ಸಿನ ಸಹೋದರ ಮತ್ತು ನನ್ನ ಮೇಲೆ ಬಿದ್ದಿತ್ತು. ನನಗೆ ಹದಿನಾಲ್ಕು ವರ್ಷ ವಯಸ್ಸು ಮತ್ತು ಆಗಷ್ಟೆ ನಾನು ಹೈಸ್ಕೂಲ್ ಸೇರಿಕೊಂಡಿದ್ದೆನು, ಆದರೆ ನಾನು ಸ್ಕೂಲಿನಿಂದ ಬಂದ ಬಳಿಕ ಕೆಲಸ ಮಾಡುವದಕ್ಕೆ ಶಕ್ತನಾಗಿದ್ದೆನು. ಆ ಬಳಿಕ ಸರ್ಕಾರವು ನನ್ನ ಹತ್ತೊಂಬತ್ತು ವರ್ಷದ ಸಹೋದರನನ್ನು ಮಿಲಿಟರಿ ಸೇವೆಗೆ ಬರಬೇಕೆಂದು ಕರೆಯಿತು. ಆ ಕರೆಯ ನೆನಪು ಈಗಲೂ ನನಗೆ ಕಣ್ಣಿಗೆ ಕಟ್ಟಿದಂಥೆ ಇದೆ ಯಾಕೆಂದರೆ ಅದರಿಂದಾಗಿ ನಾನು ಒಂದು ವರ್ಷ ಸ್ಕೂಲ್ ಬಿಟ್ಟು ಜಮೀನಿನ ಬಹುಪಾಲು ಕೆಲಸದ ಭಾರವನ್ನು ಹೊರಬೇಕಾಯಿತು.

ಎಲ್ಲಾ ಕ್ರೈಸ್ತರು ಸೇವೆಗಾಗಿ ಕರೆಯಲ್ಪಟ್ಟಿದ್ದಾರೆ. ಪೌಲನು ಹೀಗೆ ಬರೆಯುತ್ತಾನೆ, "ಕರ್ತನಿಗೆ ಪ್ರಿಯರಾಗಿರುವ ಸಹೋದರರೇ, ನೀವು ಪವಿತ್ರಾತ್ಮನಿಂದ ಶುದ್ಧೀಕರಿಸಲ್ಪಟ್ಟವರಾಗಿ ಸತ್ಯದ ಮೇಲೆ ನಂಬಿಕೆಯನ್ನಿಟ್ಟು ರಕ್ಷಣೆಯನ್ನು ಪಡೆಯುವದಕ್ಕಾಗಿ ದೇವರು ನಿಮ್ಮನ್ನು ಆದಿಯಿಂದ *ಆರಿಸಿಕೊಂಡದರಿಂದ* ನಿಮ್ಮ ವಿಷಯದಲ್ಲಿ ಯಾವಾಗಲೂ ದೇವರಿಗೆ ಕೃತಜ್ಞತಾಸ್ತುತಿ ಮಾಡುವದಕ್ಕೆ ಬದ್ಧರಾಗಿದ್ದೇವೆ. ನೀವು ಹೀಗೆ ರಕ್ಷಿಸಲ್ಪಟ್ಟು ನಮ್ಮ ಕರ್ತನಾದ ಯೇಸು ಕ್ರಿಸ್ತನ ಪ್ರಭಾವವನ್ನು ಸಂಪಾದಿಸಿಕೊಳ್ಳಬೇಕೆಂದು ದೇವರು ನಮ್ಮ ಸುವಾರ್ತೆಯ ಮೂಲಕವಾಗಿ ನಿಮ್ಮನ್ನು *ಕರೆದನು*" (ವಚನಗಳು 13, 14; ಒತ್ತಿ ಹೇಳಿದ್ದು ನನ್ನದು). ಹಿಂದಿನ ಕಾಲದಲ್ಲಿ ದೇವರು ಒಂದು ಹಂತದಲ್ಲಿ ನಮ್ಮನ್ನು ತನ್ನ ಕುಟುಂಬದ ಭಾಗವಾಗಿರುವದಕ್ಕಾಗಿ ಕರೆದನು.[37]

ಥೆಸಲೋನಿಕದವರು "ಕರ್ತನಿಕೆ ಪ್ರಿಯರಾಗಿರುವ ಸಹೋದರರು" ಆಗಿದ್ದರು. ಎಲ್ಲಾ ಮನುಷ್ಯರು ದೇವರಿಂದ ಪ್ರೀತಿಸಲ್ಪಡುತ್ತಾರೆ (ಯೋಹಾನ 3:16). "ಕರೆಯಲ್ಪಟ್ಟಿರುವ" ಕ್ರೈಸ್ತರು ಒಂದು ವಿಶಿಷ್ಟವಾದ ರೀತಿಯಲ್ಲಿ ದೇವರ ಪ್ರೀತಿಯಲ್ಲಿರುತ್ತಾರೆ (ಯೂದನು 21). ಒಬ್ಬನು ಹೇಗೆ ದೇವರಿಂದ ಆರಿಸಿಕೊಂಡವನು ಅಥವಾ ಕರೆಯಲ್ಪಟ್ಟವನು ಆಗುತ್ತಾನೆ? ಆತನು ಏಕೆ ಎಲ್ಲಾ ಜನರನ್ನು ಆರಿಸಿಕೊಂಡಿಲ್ಲ? ದೇವರು ನಮ್ಮನ್ನು ತನ್ನ ಮನಸ್ಸಿಗೆ ತೋಚಿದವರನ್ನು ಆರಿಸಿಕೊಳ್ಳುತ್ತಾನೋ? ಈ ಮೂರು ಪ್ರಶ್ನೆಗಳಿಗೆ ಉತ್ತರವೇನೆಂದರೆ ದೇವರು ವಿಧೇಯರಾಗುವವರನ್ನು ಆರಿಸಿಕೊಳ್ಳುತ್ತಾನೆ ಎಂಬದೆ. ಇಬ್ರಿಯ 5:9 ಹೀಗೆ ಹೇಳುತ್ತದೆ, "ಆತನು . . . ತನಗೆ *ವಿಧೇಯರಾಗುವವರೆಲ್ಲರಿಗೂ* ನಿರಂತರವಾದ ರಕ್ಷಣೆಗೆ ಕಾರಣನಾದನು" (ಒತ್ತಿ ಹೇಳಿದ್ದು ನನ್ನದು). ಬದಲಾಗಿ ಕ್ರಿಸ್ತನನ್ನು ತಿರಸ್ಕರಿಸುವವರು ದೇವರ ದಂಡನೆಯನ್ನು ಅನುಭವಿಸುವರು. ದೇವರೊಂದಿಗಿನ ನಮ್ಮ ಸಂಬಂಧದಲ್ಲಿ, ಎರಡು ಗುಂಪುಗಳಿರುತ್ತವೆ: ವಿಧೇಯರು ಮತ್ತು ಅವಿಧೇಯರು. ನಾವು ಯಾವ

ಗುಂಪಿನೊಳಗೆ ಇರುತ್ತೇವೆ?

ಥೆಸಲೋನಿಕದಲ್ಲಿನ ಸಭೆಯು ದೇವರಿಗೆ ವಿಧೇಯವಾಗುವದಕ್ಕೆ ತೀರ್ಮಾನಿಸಿತ್ತು; ಆದ್ದರಿಂದ ಅವರು ದೇವರ ಪ್ರೀತಿಯಲ್ಲಿದ್ದರು. ಇದರ ಕಾರಣದಿಂದ, ಪೌಲನು "ಕೃತಜ್ಞತಾಸ್ತುತಿಗಳನ್ನು ಅರ್ಪಿಸುವದಕ್ಕೆ" ಒತ್ತಾಯಿಸಲ್ಪಟ್ಟನು. ಆತನು ದೇವರ ಕುಟುಂಬದ ಎಲ್ಲರಿಗಾಗಿಯೂ ಕೃತಜ್ಞತಾಸ್ತುತಿಯನ್ನು ಅರ್ಪಿಸುವನು.

*ನಮ್ಮನ್ನು ಆಯ್ಕೆ ಮಾಡಿಕೊಳ್ಳುವದರಲ್ಲಿ ದೇವರ ಪಾತ್ರವೇನು?* KJV ಮತ್ತು NASBಗಳಲ್ಲಿ ದೇವರು ತನ್ನ ಜನರನ್ನಾಗಿ ಆರಿಸಿಕೊಂಡ ಕಾಲದ ಅವಧಿಯಾಗಿ "ಆದಿಯಿಂದ" ಎಂದು ಇರುತ್ತದೆ. NASB ಯಲ್ಲಿರುವ ಅಡಿಟಿಪ್ಪಣಿಯು ಹೀಗೆ ಇರುತ್ತದೆ, "ಪ್ರಾಚೀನ ಹಸ್ತ ಪ್ರತಿಗಳಲ್ಲೊಂದು ಪ್ರಥಮ ಫಲಗಳು ಎಂದು ಹೇಳುತ್ತದೆ." UBSಯು "ದೇವರು ನಿಮ್ಮನ್ನು ಪ್ರಥಮ ಫಲಗಳಾಗಿ ಆರಿಸಿಕೊಂಡಿದ್ದಾನೆ" ಎಂಬುದಕ್ಕೆ ಒಲವು ತೋರುತ್ತದೆ. ಬಹುಶಃ ಇದು ಸರಿಯಾದದ್ದು. ದೇವರು ಮಕೆದೋನ್ಯದ ಆ ಭಾಗದ ತನ್ನ ಪೈರಿನಲ್ಲಿ ಥೆಸಲೋನಿಕದವರನ್ನು ತನ್ನ "ಪ್ರಥಮ ಫಲಗಳನ್ನಾಗಿ" ಮಾಡಿಕೊಂಡಿದ್ದನು (ನೋಡಿರಿ ಧರ್ಮೋಪದೇಶಕಾಂಡ 26:1-4).

ಕರೆಯುವಿಕೆಯು ಹೇಗೆ ಸಂಭವಿಸುತ್ತದೆ? ಆರಿಸಿಕೊಳ್ಳಲ್ಪಟ್ಟವರು ಭಾಗಶಃ "ಪವಿತ್ರಾತ್ಮನಿಂದ" ಶುದ್ಧೀಕರಿಸಲ್ಪಡುತ್ತಾರೆ. ಶುದ್ಧೀಕರಣದಲ್ಲಿ ಪವಿತ್ರರಾಗಿ ಮಾಡಲ್ಪಡುವಿಕೆಯು ಸೇರಿರುತ್ತದೆ. "ಆತ್ಮನು" ಪವಿತ್ರಾತ್ಮನಾಗಿದ್ದು ಆತನ ಮೂಲಕವೇ ಲಿಖಿತ ವಾಕ್ಯವು ಪ್ರಕಟಿಸಲ್ಪಟ್ಟಿರುತ್ತದೆ (ಯೋಹಾನ 16:13; ನೋಡಿರಿ ಯೋಹಾನ 17:17; ಎಫೆಸ 6:17). ನಾವು ಮೊದಲು ದೀಕ್ಷಾಸ್ನಾನ ಮಾಡಿಸಿಕೊಳ್ಳುವ ವೇಳೆ ಶುದ್ಧೀಕರಿಸಲ್ಪಡುತ್ತೇವೆ ಅಥವಾ ಶುಚಿಗೊಳಿಸಲ್ಪಡುತ್ತೇವೆ (ಅಪೊಸ್ತಲರ ಕೃತ್ಯಗಳು 2:38). ನಾವು ಪಾಪಕ್ಕಾಗಿ ಪಶ್ಚಾತ್ತಾಪ ಪಡುವಾಗ ನಿರಂತರವಾಗಿ ಶುದ್ಧೀಕರಿಸಲ್ಪಡುತ್ತೇವೆ ಮತ್ತು ಕ್ರಿಸ್ತನ ರಕ್ತದಿಂದ ಶುಚಿಗೊಳಿಸಲ್ಪಡುತ್ತೇವೆ (1 ಯೋಹಾನ 1:7).

ಆರಿಸಿಕೊಳ್ಳಲ್ಪಟ್ಟವರು "ಸತ್ಯದ ಮೇಲೆ ನಂಬಿಕೆಯನ್ನಿಟ್ಟ" ಮೂಲಕ ಸಹ ಶುದ್ಧೀಕರಿಸಲ್ಪಡುತ್ತಾರೆ. 14ನೇ ವಚನದಲ್ಲಿ, ಪೌಲನು ಈ ಸತ್ಯವನ್ನು "ನಮ್ಮ ಸುವಾರ್ತೆ" ಎಂದು ಕರೆದನು. ದೇವರು ಆತನ ಸಂದೇಶವು ಥೆಸಲೋನಿಕದವರ ಬಳಿಗೆ ಕೊಂಡೊಯ್ಯಲ್ಪಡುವಂತೆ ಮಾಡಿದನು. ಪೌಲನು ತನ್ನ ಪ್ರಯಾಣಗಳಲ್ಲಿ ಪ್ರಚುರಪಡಿಸಿದ ದೇವರ ಸಂದೇಶವು "ಸುವಾರ್ತೆ" ಆಗಿರುತ್ತದೆ.

ಸುವಾರ್ತೆಯನ್ನು ಕೇಳುವವರೆಲ್ಲರೂ ಅದನ್ನು ಅಂಗೀಕರಿಸಿಕೊಳ್ಳುವದಿಲ್ಲ. ಅದನ್ನು ಅಂಗೀಕರಿಸಿದವರು ಮಾತ್ರವೇ ಅತ್ಯಂಥ ಪೂರ್ಣವಾದ ಅರ್ಥದಲ್ಲಿ "ಕರೆಯಲ್ಪಟ್ಟವರು." ಕೆಲವರು "ಸತ್ಯದ ಮೇಲಿನ ಪ್ರೀತಿಯನ್ನು" (ವ. 10) ಸ್ವೀಕರಿಸಿಕೊಳ್ಳುವದಕ್ಕೆ ತೀರ್ಮಾನಿಸಿಕೊಳ್ಳುತ್ತಾರೆ, "ಸುಳ್ಳನ್ನು" (ವ. 11) ನಂಬುವವರಾಗುತ್ತಾರೆ. ಥೆಸಲೋನಿಕದ ಕ್ರೈಸ್ತರು "ಸತ್ಯದ ಮೇಲೆ ನಂಬಿಕೆಯನ್ನು" ಹೊಂದಿದ್ದರು. ಆದದರಿಂದ, ಅವರು ಕರೆಯಲ್ಪಟ್ಟಿದ್ದರು. Weatherly ಹೀಗೆ ಬರೆಯುತ್ತಾನೆ, "ಆತನು ಅವರ ನಂಬಿಕೆಯ ಆಧಾರದ ಮೇಲೆ ಶರತ್ತುಬದ್ಧವಾಗಿ ಆರಿಸಿಕೊಳ್ಳುತ್ತಾನೆ."[38]

ಕ್ರೈಸ್ತರು ಯಾವುದಕ್ಕಾಗಿ ಕರೆಯಲ್ಪಡುತ್ತಾರೆ? ನಾವು "ರಕ್ಷಣೆ" ಯನ್ನು

ಪಡೆಯುವದಕ್ಕಾಗಿ ಕರೆಯಲ್ಪಟ್ಟಿದ್ದೇವೆ, ಅಥವಾ ನಾವು ನಮ್ಮ ಪಾಪಗಳಿಂದ ವಿಮೋಚಿಸಲ್ಪಡುವವರು. ಅಲ್ಲದೆ ನಾವು "ನಮ್ಮ ಕರ್ತನಾದ ಯೇಸು ಕ್ರಿಸ್ತನ ಪ್ರಭಾವವನ್ನು ಸಂಪಾದಿಸಿಕೊಳ್ಳುವದಕ್ಕೆ" ಸಹ ಕರೆಯಲ್ಪಟ್ಟಿದ್ದೇವೆ (ವ. 14; ನೋಡಿರಿ 1 ಥಸಲೋನಿಕ 5:9). ಸ್ವಲ್ಪ ಮಟ್ಟಿನ ಮೀತಿಯುಳ್ಳ ಅರ್ಥದಲ್ಲಿ, ನಾವು ಈ ಜೀವನದಲ್ಲಿ ಕ್ರಿಸ್ತನ ಪ್ರಭಾವವನ್ನು ಸಂಪಾದಿಸಿಕೊಳ್ಳುತ್ತೇವೆ (2 ಕೊರಿಂಥ 3:18). ಹೇಗೂ, ನಾವು ಆ ಪ್ರಭಾವದೊಳಗೆ ಇನ್ನಷ್ಟು ಹೆಚ್ಚಾದ ವಿಧವಾಗಿ ಪರಲೋಕದಲ್ಲಿ ಪಾಲುಗಾರರಾಗುವೆವು (ರೋಮಾ 8:18; ಫಿಲಿಪ್ಪಿ 3:20, 21). ದೇವರು ನಮ್ಮನ್ನು ಕರೆದಿರುವನಾದ್ದರಿಂದ ಇದೆಲ್ಲವೂ ಸಾಧ್ಯವಿರುತ್ತದೆ.

*ನಮ್ಮ ಆಯ್ಕೆಯಲ್ಲಿ ನಮಗಿರುವ ಪಾತ್ರವೇನು*? ನಾವು ನಮ್ಮ ಕರೆಯುವಿಕೆಯಲ್ಲಿ "ದೃಢವಾಗಿ ನಿಲ್ಲಬೇಕು." ಪೌಲನು ಹೀಗೆ ಬರೆಯುತ್ತಾನೆ, "ಹೀಗಿರುವದರಿಂದ ಸಹೋದರರೇ, ದೃಢವಾಗಿ ನಿಲ್ಲಿರಿ. ನಾವು ಮಾತಿನಿಂದಾಗಲಿ ಪತ್ರಿಕೆಯಿಂದಾಗಲಿ ನಿಮಗೆ ತಿಳಿಸಿದ ಬೋಧನೆಗಳನ್ನು ನೀವು ಭದ್ರವಾಗಿ ಹಿಡಿದುಕೊಂಡಿರ್ರಿ" (ವ. 15). ಸುಳ್ಳು ಆತ್ಮಗಳಿಂದ ಅಥವಾ ನಕಲಿ ಪತ್ರಿಕೆಗಳಿಂದ "ಬೇಗನೆ ಬುದ್ದಿಗೆಟ್ಟು ಚಂಚಲರಾಗಿ" ಅಥವಾ "ಕಳವಳ" ಪಡುವ ಬದಲಾಗಿ (2:2), ಅವರು "ದೃಢವಾಗಿ ನಿಲ್ಲಬೇಕಿತ್ತು." ಇದು ಪೌಲನಿಂದ ಆಗಾಗ್ಗೆ ಬಳಸಲ್ಪಟ್ಟ ಮಾತಾಗಿರುತ್ತದೆ (ನೋಡಿರಿ 1 ಥೆಸಲೋನಿಕ 3:8; 1 ಕೊರಿಂಥ 16:13).

ಪೌಲನು "ಮಾತಿನಿಂದ" ಕಲಿಸಲ್ಪಟ್ಟ "ಸಂಪ್ರದಾಯಗಳನ್ನು" (ಬೋಧನೆಗಳನ್ನು) ಭದ್ರವಾಗಿ ಹಿಡಿದುಕೊಳ್ಳಬೇಕೆಂದು ಥೆಸಲೋನಿಕದವರಿಗೆ ಹೇಳುತ್ತಾನೆ. ಈ "ಮಾತಿನಿಂದ" ಎಂಬ ಪದಗುಚ್ಛವು ಪೌಲನು ಅವರ ಸಂಗಡ ಇದ್ದ ವೇಳೆ *ಪೌಲನು* ಮೌಖಿಕವಾಗಿ ಕಲಿಸಿದ ಕಾರ್ಯಗಳನ್ನು ಸೂಚಿಸುತ್ತದೆ.

"ಪತ್ರಿಕೆಯಿಂದ" ಕಲಿಸಲ್ಪಟ್ಟ "ಸಂಪ್ರದಾಯಗಳನ್ನು" ಭದ್ರವಾಗಿ ಹಿಡಿದುಕೊಂಡಿರಬೇಕೆಂದು ಸಹ ಪೌಲನು ಅವರಿಗೆ ಹೇಳುತ್ತಾನೆ. ಇದರಲ್ಲಿ ಆತನು ಕೆಲವು ತಿಂಗಳುಗಳ ಹಿಂದೆ ಅವರಿಗೆ ಬರೆದಂಥ 1 ಥೆಸಲೋನಿಕದವರಿಗೆ ಬರೆದ ಪತ್ರಿಕೆ ಸಹ ಸೇರಿರುತ್ತದೆ. ನಮಗೆ ಸಹ, ಅಪೊಸ್ತಲ ಪೌಲನು ಮತ್ತು ಇತರ ಪ್ರೇರಿತ ಬರಹಗಾರರು ಬಿಟ್ಟು ಹೋಗಿರುವ ಹಲವಾರು ಪುಸ್ತಕಗಳನ್ನು ಮತ್ತು ಪತ್ರಿಕೆಗಳನ್ನು ನಮ್ಮ ಕಣ್ಣಾರೆ ಓದುವ ಪ್ರಯೋಜನವು ಇರುತ್ತದೆ. ಶಾಸ್ತ್ರಗಳು ದೈವಪ್ರೇರಿತವಾದವುಗಳು, ಪವಿತ್ರಾತ್ಮನಿಂದ ಪ್ರೇರಿತವಾದವುಗಳಾಗಿವೆ. ಅವುಗಳು ಉಪದೇಶಿಸುತ್ತವೆ, ಖಂಡಿಸುತ್ತವೆ, ತಿದ್ದುತ್ತವೆ, ಮತ್ತು ನಮ್ಮನ್ನು ನೀತಿಯಲ್ಲಿ ಪ್ರವೀಣರನ್ನಾಗಿ ಮಾಡುತ್ತವೆ (2 ತಿಮೊಥೆ 3:16).

ನಾವು ಕೈಕೊಂಡು ನೆಡಯುವ ಅಗತ್ಯವಿಲ್ಲದ ಸಂಪ್ರದಾಯಗಳಿಗೆ ಬೆಂಬಲವನ್ನು ನೀಡುವದಕ್ಕಾಗಿ ಕೆಲವರು 15 ನೇ ವಚನಕ್ಕೆ ಅಪಾರ್ಥ ಕಲ್ಪಿಸುತ್ತಾರೆ. ಎಲ್ಲಾ ಸಂಪ್ರದಾಯಗಳು ಸಹ ಪ್ರಯೋಜನಕರ ಅಥವಾ ಪ್ರೇರಿತವಾದವುಗಳಲ್ಲ. ನಾವು ಪೌಲನ ಸಲಹೆಯನ್ನು ಪರಿಶೀಲನೆ ಮಾಡಬೇಕು. ಒಳ್ಳೇ ಸಂಪ್ರದಾಯಗಳಿರುತ್ತವೆ ಮತ್ತು ಕೆಟ್ಟ ಸಂಪ್ರದಾಯಗಳು ಇರುತ್ತವೆ (1 ಕೊರಿಂಥ 11:2ನ್ನು ಮತ್ತಾಯ 15:6 ರೊಂದಿಗೆ ಹೋಲಿಸಿರಿ). ಇವರೆಡರ ನಡುವಿನ ವ್ಯತ್ಯಾಸವೆಂದರೆ ಅವುಗಳ ಮೂಲವೇ ಆಗಿದೆ. ಒಳ್ಳೇ ಸಂಪ್ರದಾಯಗಳು, ಪವಿತ್ರಾತ್ಮನಿಂದ ಪ್ರೇರಿತರಾದ ಅಪೊಸ್ತಲರಿಂದ ಹಸ್ತಾಂತರಿಸಲ್ಪಟ್ಟಿ

ರುತ್ತವೆ. ಕೆಟ್ಟ ಸಂಪ್ರದಾಯಗಳು ವಿವಿಧ ಜನರಿಂದ ಬೇರೆಯವರಿಗೆ ಕಲಿಸಲ್ಪಟ್ಟಿರುವ ಪ್ರೇರಿತವಲ್ಲದ ಧಾರ್ಮಿಕ ಆಜ್ಞೆಗಳಾಗಿರುತ್ತವೆ. ಪವಿತ್ರಾತ್ಮನು ಅಪೊಸ್ತಲರಿಗೆ ಮಾರ್ಗದರ್ಶನ ಮಾಡಲಿದ್ದನೆಂಬುದನ್ನು ಹೊಸ ಒಡಂಬಡಿಕೆಯು ಪ್ರಮಾಣೀಕರಿಸುತ್ತದೆ. ಅವರಿಗೆ ದೇವರಿಂದ ವಿಶೇಷವಾದ ಜ್ಞಾನವು ಕೊಡಲ್ಪಟ್ಟಿತ್ತು, ಅದು ಬೇರೆ ಪುರುಷರು ಮತ್ತು ಸ್ತ್ರೀಯರಿಗಿಲ್ಲದಂಥದ್ದು (ನೋಡಿರಿ ಯೋಹಾನ 16:13; 1 ಕೊರಿಂಥ 14:37; 2 ಪೇತ್ರ 1:13-21).

ನಾವು ಕೈಕೊಂಡು ನಡೆಯಬೇಕಾಗಿರುವ ಎಲ್ಲಾ ಸಂಪ್ರದಾಯಗಳು ಪ್ರೇರಿತ ಅಪೊಸ್ತಲರಿಂದ ಬಂದವುಗಳಾಗಿವೆ. ಅನೇಕರು ಕಳೆದ ಎರಡು ಸಾವಿರ ವರ್ಷಗಳಲ್ಲಿ ಮನುಷ್ಯರಿಂದ ಬಂದಂಥ ಸಂಪ್ರದಾಯಗಳನ್ನು ಹಿಂಬಾಲಿಸಿರುತ್ತಾರೆ. ಇಂದು ಅನುಸರಿಸಬೇಕಾದ ಎಲ್ಲಾ ಸಂಪ್ರದಾಯಗಳು ಶಾಸ್ತ್ರಗಳಲ್ಲಿ ಬರೆಯಲ್ಪಟ್ಟಿರುತ್ತವೆ. ಮೌಖಿಕವಾದ ಅಥವಾ ಅನಂತರದಲ್ಲಿ ಬಂದ ಸಂಪ್ರದಾಯಗಳನ್ನು ತಿರಸ್ಕರಿಸತಕ್ಕದ್ದು.

ಕ್ರಿಸ್ತನ ಹಿಂಬಾಲಕರಾಗಿ, ನಾವು ನಮ್ಮ ಕರೆಯುವಿಕೆಯಲ್ಲಿ "ದೃಢವಾಗಿ ನಿಲ್ಲುವದಕ್ಕೆ" ಜವಾಬ್ದಾರರಾಗಿದ್ದೇವೆ. ಅದರರ್ಥವು ನಾವು ಶಾಸ್ತ್ರಗಳನ್ನು ಅರಿತುಕೊಂಡವರು ಮತ್ತು ಅವಶ್ಯಕವಾದಲ್ಲಿ ಅವುಗಳನ್ನು ಸಮರ್ಥನೆ ಮಾಡಬೇಕು ಎಂದಾಗಿರುತ್ತದೆ. ನಾವು ನಮ್ಮ ಅರ್ಥನಿರೂಪಣೆಯ ವಿಷಯದಲ್ಲಿ ಹಠಮಾರಿಗಳಾಗಿರಬಾರದು, ಆದರೆ ನಮ್ಮ ಸ್ವಂತ ಕಾರ್ಯಸೂಚಿಯ ಬದಲಾಗಿ ಪವಿತ್ರಾತ್ಮನ ಕಾರ್ಯಸೂಚಿಯನ್ನು ಅನುಸರಿಸುವವರಾಗಿ, ನಾವು ಯಾವಾಗಲೂ ಬೈಬಲಿನ ಅಧಿಕಾರಕ್ಕೆ ಅತ್ಯಂಥ ಗೌರವವನ್ನು ಹೊಂದಿದವರಾಗಿರಬೇಕು. ನಾವು ನಮ್ಮ ಪೀಳಿಗೆಗಾಗಿ ಮತ್ತು ಬರಲಿರುವ ಪೀಳಿಗೆಗಳ ಪ್ರಯೋಜನಕ್ಕಾಗಿ ಪ್ರೇರಿತ ಬೋಧನೆಗಳನ್ನು ಎತ್ತಿ ಹಿಡಿಯಬೇಕು.

*ನಮ್ಮ ಕರೆಯುವಿಕೆಗೆ ನಂಬಿಗಸ್ತರಾಗಿರುವಂತೆ ದೇವರು ನಮಗೆ ನಿರಂತರವಾಗಿ ಸಹಾಯವನ್ನು ಮಾಡುವನು.* ದೇವರು ನಮ್ಮನ್ನು ಆರಿಸಿಕೊಂಡು ಶುದ್ಧೀಕರಿಸುವ ಮೂಲಕ ಈಗಾಗಲೆ ನಮಗೆ ಸಹಾಯವನ್ನು ಮಾಡಿದ್ದಾನೆ (ವ. 13), ಆದರೆ ನಮ್ಮ ಕರೆಯುವಿಕೆಯಲ್ಲಿ "ದೃಢವಾಗಿ ನಿಲ್ಲುವದಕ್ಕೆ" ಸಹ ನಮಗೆ ಸಹಾಯದ ಅಗತ್ಯವಿರುತ್ತದೆ. ಈ ಕೆಲಸದಲ್ಲಿ ನಮ್ಮ ಮಾನವ ಕಡೆಯಿಂದ ಭದ್ರವಾಗಿ ಹಿಡಿದುಕೊಳ್ಳುವದಕ್ಕೆ ನಮಗೆ ಸಹಾಯವನ್ನು ಮಾಡುವದಕ್ಕೆ ದೇವರು "ಏಕೈಕ ಶಕ್ತಿ" ಆಗಿರುತ್ತಾನೆ.[39] ಆದದರಿಂದ, ಸಹೋದರರಿಗೆ ತಮ್ಮ ಕರೆಯುವಿಕೆಯಲ್ಲಿ ನಂಬಿಗಸ್ತರಾಗಿ ಉಳಿಯುವದಕ್ಕೆ ಸಹಾಯ ಮಾಡುವಂತೆ ಪೌಲನು ಯೇಸುವನ್ನು ಮತ್ತು ದೇವರನ್ನು ವಿನಂತಿಸಿಕೊಳ್ಳುತ್ತಾನೆ (ವ. 16).

ಕ್ರೈಸ್ತರ ಹೃದಯಗಳು ದೃಢಪಡಿಸಲ್ಪಡಲಿ ಎಂಬದಾಗಿ ಆತನು ಬೇಡಿಕೊಂಡನು (ವ. 17). ಕುಂದಿ ಹೋಗಿರುವ ಜನರಿಗೆ ಪ್ರೋತ್ಸಾಹದ ಅಗತ್ಯವಿರುತ್ತದೆ. ಥೆಸಲೋನಿಕದಲ್ಲಿ, ಬಹುಶಃ ಕೆಲವರಿಗೆ ಸುಳ್ಳು ಬೋಧನೆಗಳಿಂದ ಕಳವಳಗೊಳ್ಳದಂತೆ ಪ್ರೋತ್ಸಾಹದ ಅಗತ್ಯವಿದ್ದಿರಬಹುದು. ಇಂದು, ಯಾರಾದರೊಬ್ಬರು ಜೀವನದಲ್ಲಿ ಭಯಂಕರವಾದ ಸಮಸ್ಯೆ ಅಥವಾ ಬದಲಾವಣೆಯಿಂದಾಗಿ ಕಳವಳಗೊಂಡಿರಬಹುದು. ಪೌಲನು ಆದರಣೆಯುಂಟಾಗಬೇಕೆಂದು ಪ್ರಾರ್ಥಿಸಿದನು, ಮತ್ತು ನಾವು ಸಹ, ನಮ್ಮ ಪ್ರೋತ್ಸಾಹದ ಮೂಲನಾದ ದೇವರ ಕಡೆಗೆ ತಿರುಗಿಕೊಳ್ಳತಕ್ಕದ್ದು.

ಅಲ್ಲದೆ ದೇವರು "[ಅವರ] ಹೃದಯಗಳನ್ನು ಸಂತೈಸಿ ಸಕಲ ಸತ್ಕಾರ್ಯದಲ್ಲಿಯೂ ಸದ್ವಾಕ್ಯದಲ್ಲಿಯೂ ದೃಢಪಡಿಸಲಿ" ಎಂದು ಸಹ ಪೌಲನು ಪ್ರಾರ್ಥನೆ ಮಾಡಿದನು (ವ. 17). ನಾವು ಸತ್ಕಾರ್ಯಗಳನ್ನು ಮಾಡುವಾಗಲೆಲ್ಲಾ, ನಮ್ಮ ಹೃದಯಗಳು ಸಂತೈಸಿಸಲ್ಪಟ್ಟು ಬಲಗೊಳಿಸಲ್ಪಡಬೇಕು. ನಾವು ನೋವು ಅಥವಾ ರೋಗದಲ್ಲಿರುವವರಿಗೆ ಸಹಾಯವನ್ನು ಮಾಡುವಾಗ, ಅದು ನಮ್ಮ ಜೀವಿತಗಳಿಗೆ ಬಲವನ್ನು ಮತ್ತು ಪ್ರೋತ್ಸಾಹವನ್ನು ತರತಕ್ಕದ್ದು. ನಾವು ನಮ್ಮ ನುಡಿಗಳಿಂದ ಪ್ರೋತ್ಸಾಹ, ಉಪದೇಶ, ಅಥವಾ ತಿದ್ದುವಿಕೆಯನ್ನು ಮಾಡುವಾಗ, ಇದು ಕ್ರಿಸ್ತನನ್ನು ಮತ್ತು ಆತನ ಬೋಧನೆಗಳನ್ನು ಅನುಸರಿಸುವದಕ್ಕಾಗಿ ನಮಗಿರುವ ಸಮರ್ಪಣೆಯನ್ನು ಪ್ರೋತ್ಸಾಹಿಸತಕ್ಕದ್ದು. ನಮ್ಮ ಕರೆಯುವಿಕೆಯಲ್ಲಿ ನಂಬಿಗಸ್ತರಾಗಿದ್ದು ನಾವು ಕ್ರೈಸ್ತರಾದಾಗ ತೆಗೆದುಕೊಂಡ ಜವಾಬ್ದಾರಿಗಳನ್ನು ಅಂಗೀಕರಿಸಿಕೊಳ್ಳುವಂತೆ ದೇವರು ನಮಗೆ ಮತ್ತು ಎಲ್ಲಾ ಕ್ರೈಸ್ತರಿಗೆ ಸಹಾಯ ಮಾಡುವದನ್ನು ಮುಂದುವರೆಸುವ ಹಾಗೆ ಪೌಲನ ರೀತಿಯಲ್ಲಿಯೇ ನಾವು ಸಹ ಪ್ರಾರ್ಥಿಸಬೇಕು.

ದೇವರು ನಮ್ಮನ್ನು ಒಂದು ಉದ್ದೇಶಕ್ಕಾಗಿ ಕರೆದಿದ್ದಾನೆ. ನಾವು ಜೀವನದಲ್ಲಿ ನಡೆಯುವ ಘಟನೆಗಳಿಂದ ಅಥವಾ ಬೈಬಲಿಗೆ ನಿಷ್ಠೆಯಿಲ್ಲದಂಥ ಮನುಷ್ಯರ ಬೋಧನೆಗಳಿಂದಾಗಿ ನಾವು ಚಂಚಲಚಿತ್ತರಾಗಬಾರದು. ನಾವು "ದೇವರು ಕ್ರಿಸ್ತನ ಮೂಲಕವಾಗಿ ನಮ್ಮನ್ನು ಮೇಲಕ್ಕೆ ಕರೆದು ನಮ್ಮ ಮುಂದಿಟ್ಟಿರುವ ಬಿರುದನ್ನು ಗುರಿಮಾಡಿಕೊಂಡು ಓಡುತ್ತಾ" ಇರಬೇಕು (ಫಿಲಿಪ್ಪಿ 3:14). EE

## ದೇವರ ಸತ್ಯ ಮತ್ತು ಮಾನವನ ಸುಳ್ಳು (2:1-12)

ಅನೇಕ ಜನರ ದೃಷ್ಟಿಯಲ್ಲಿ, ವಯಸ್ಸಿನಲ್ಲಿ ಬೆಳೆಯುವದೆಂದರೆ ಬಲ ಮತ್ತು ಸಾಮರ್ಥ್ಯಗಳು ಕಡಿಮೆಯಾಗುತ್ತವೆ, ಬಂಧುಗಳನ್ನು ಮತ್ತು ಸ್ನೇಹಿತರನ್ನು ಕಳೆದುಕೊಳ್ಳುವದು ಎಂದರ್ಥವಾಗಿರುತ್ತದೆ. ಈ ಸಂದರ್ಭದಲ್ಲಿ, ನಿರಂತರವಾದ, ನಿತ್ಯವಾದ ಪ್ರಯೋಜನಗಳು ಹೆಚ್ಚು ಸ್ಪಷ್ಟಗೊಳ್ಳುತ್ತವೆ ಮತ್ತು ಸಂತೋಷ ಪಡತಕ್ಕವುಗಳಾಗುತ್ತವೆ. ಕ್ರೈಸ್ತರಿಗಾದರೋ, ಈ ಜೀವನದ ಅಂತ್ಯವು ಗೌರವ ಮತ್ತು ಮಹಿಮೆಯ ಪರಾಕಾಷ್ಠೆಯಾಗಿರುತ್ತದೆ. ನಾವು ಸಾಯುವದಕ್ಕೆ ಮುನ್ನವೇ ಯೇಸು ಬಂದಾಗ್ಯೂ, ನಾವು ಒಂದು ಮಹಿಮಕರವಾದ ಪುನರ್ಮಿಲನವನ್ನು ಎದುರು ನೋಡಬಹುದು.

ಥೆಸಲೋನಿಕದಲ್ಲಿ ಕೆಲವು ಕ್ರೈಸ್ತರು ಈಗಾಗಲೆ ಮರಣಿಸಿರುವ ತಮ್ಮ ಪ್ರಿಯರು ಯೇಸುವಿನೊಂದಿಗಿನ ಈ ಮಹಿಮಕರವಾದ ಪುನರ್ಮಿಲನವನ್ನು ತಪ್ಪಿಸಿಕೊಂಡಿದ್ದಾರೇನೋ ಎಂದು ಚಿಂತೆಗೀಡಾಗಿದ್ದರು. ಮರಣವು ಯಾವೊಬ್ಬ ನಂಬಿಗಸ್ತ ಕ್ರೈಸ್ತನನ್ನು ಸಹ ಯೇಸುವಿನ ಪುನರ್ಮಿಲನದ ಆನಂದಪರವಶತೆಯನ್ನು ಅನುಭವಿಸದಂತೆ ತಡೆಯಲಾರದು ಎಂದು ಅವರಿಗೆ 1 ಥೆಸಲೋನಿಕದವರಿಗೆ ಬರೆದ ಪತ್ರಿಕೆಯಲ್ಲಿ ಭರವಸೆಯನ್ನು ಕೊಡಲಾಯಿತು.

2 ಥೆಸಲೋನಿಕದವರಿಗೆ ಪತ್ರಿಕೆಯನ್ನು ಬರೆಯುವ ಹೊತ್ತಿಗೆ ಥೆಸಲೋನಿಕದಲ್ಲಿರುವ

ಕ್ರೈಸ್ತರು ಯೇಸು ಈಗಾಗಲೆ ಹಿಂದಿರುಗಿ ಬಂದಿದ್ದಾನೆಂಬ ವರದಿಗಳಿಂದ ಬೇಸರಗೊಂಡಿದ್ದರು. ಅದು ನಿಜವೇ ಆಗಿದ್ದಲ್ಲಿ, ಅವರು ಮತ್ತು ಈ ಮುಂಚೆಯೇ ಮರಣಿಸಿದ್ದ ಅವರ ಸಹೋದರರು ಆತನೊಂದಿಗೆ ಆ ಪುನರ್ಮಿಲನವನ್ನು ತಪ್ಪಿಸಿಕೊಂಡಿದ್ದರು ಎಂದಾಗುತ್ತದೆ. ಮೊದಲ ಪತ್ರಿಕೆಯ ರೀತಿಯಲ್ಲಿಯೇ, ಎರಡನೆಯ ಪತ್ರಿಕೆಯು ಅವರನ್ನು ಕ್ರಿಸ್ತನ ಪುನರಾಗಮನದ ಕುರಿತಾಗಿ ಆದರಣೆಯನ್ನು ನೀಡುವದಕ್ಕಾಗಿ ಬರೆಯಲ್ಪಟ್ಟಿತ್ತು. ಸುಳ್ಳಿಗೆ ತದ್ವಿರುದ್ಧವಾಗಿ, ಈ ಸತ್ಯವು ಕ್ರೈಸ್ತನ ಭವಿಷ್ಯತ್ತು ಖಾತ್ರಿಯಾದದ್ದೆಂಬುದನ್ನು ತೋರಿಸುತ್ತದೆ.

ಯಾವಾಗಲೂ ಹಾನಿಯನ್ನುಂಟು ಮಾಡುವ, ಸುಳ್ಳು ಬೋಧನೆಯು ಕ್ರೈಸ್ತರನ್ನು ಜೀವದ ದಾರಿಯನ್ನು ಬಿಟ್ಟು ಹೋಗುವಂತೆ ಮಾಡಬಲ್ಲದು. ಅದು ಹೆಚ್ಚು ಮೌಲ್ಯವಿರುವಂತದ್ದರ ಕಡೆಯಿಂದ ಅವರ ಚಿತ್ತವನ್ನು ಚಂಚಲಗೊಳಿಸಿ ದೇವರ ಧ್ಯೇಯಗಳನ್ನು ಸಾಧಿಸುವದರ ಕಡೆಗೆ ಗಮನ ತೊಡಗಿಸಿಕೊಳ್ಳಬೇಕಾದ ಸಂಪನ್ಮೂಲಗಳನ್ನು ವ್ಯರ್ಥಮಾಡಿಕೊಳ್ಳುವಂತೆ ಮಾಡುತ್ತದೆ. ಸುಳ್ಳು ಬೋಧನೆಯು ಹಾನಿಯನ್ನುಂಟು ಮಾಡದಂತೆ ನಾವು ಹೇಗೆ ತಡೆಯಬಲ್ಲೆವು? ಅದು ತಂದೊಡ್ಡುವ ಗಂಡಾಂತರವನ್ನು ನಾವು ಹೇಗೆ ಸಂಧಿಸಬಲ್ಲೆವು?

*ಸುಳ್ಳು ಬೋದನೆಯನ್ನು ಕಂಡು ಹಿಡಿಯಿರಿ (2:1-5).* ಸಭೆಯ ಇತಿಹಾಸದಲ್ಲಿ ಅನೇಕ ಸಾರಿ, ವ್ಯಕ್ತಿಗಳು ಹೊಸ ಸಿದ್ಧಾಂತಗಳನ್ನು ಕಲಿಸಿರುತ್ತಾರೆ, ಕೆಲವು ಸಾರಿ ಆಘಾತಕರವಾದ ಭಿನ್ನ ಸಿದ್ಧಾಂತಗಳನ್ನು ಉಪದೇಶಿಸಿರುತ್ತಾರೆ. ಸತತವಾಗಿ, ಈ ಬೋಧನೆಗಳು ಪ್ರವಾದನೆಗಳ ನೆರವೇರಿಕೆಯ ಕುರಿತಾದವುಗಳಾಗಿವೆ. ಅವುಗಳಲ್ಲಿ ಬಹುಪಾಲು ಹಳೆಯ ಒಡಂಬಡಿಕೆಯ ಪ್ರವಾದನೆ, ತನ್ನ ರಾಜ್ಯವನ್ನು ಸ್ಥಾಪಿಸುವದಕ್ಕೆ ಕರ್ತನ ಬರೋಣ, ಅಥವಾ ನ್ಯಾಯತೀರ್ಪು ಮಾಡುವವನಾಗಿ ಕರ್ತನ ಬರೋಣದಂಥಹ ಹೊಸ ಒಡಂಬಡಿಕೆಯ ಪ್ರವಾದನೆ ಮೇಲೆ ಮುಖ್ಯ ಗಮನವನ್ನು ಹರಿಸಿರುತ್ತವೆ.

ಅನೇಕ ಸಂದರ್ಭಗಳಲ್ಲಿ ಜನರು ಯೇಸು ಇನ್ನೇನು ಬರಲಿದ್ದಾನೆ ಅಥವಾ ಈಗಾಗಲೆ ಒಂದು ರಹಸ್ಯವಾದ ಶೈಲಿಯಲ್ಲಿ ಬಂದಿರುತ್ತಾನೆಂಬುದಾಗಿ ಮುಂತಿಳಿಸಿರುತ್ತಾರೆ. ಜನರು ಈ ಪ್ರಕಟನೆಯಿಂದ ಆಶ್ಚರ್ಯಗೊಳ್ಳಬಹುದು ಮತ್ತು ತಮ್ಮ ನಂಬಿಕೆಗಳನ್ನು ಹಾಗೂ ಜೀವಿತಗಳನ್ನು ಬದಲಾಯಿಸಿಕೊಳ್ಳುವಷ್ಟರ ಮಟ್ಟಿಗೆ ಹೆದರಿದವರಾಗಬಲ್ಲರು. ನಾವು ಅಂಥ ಸುಳ್ಳನ್ನು ಹೇಗೆ ಕಂಡು ಹಿಡಿದು ಅದರ ವಿರುದ್ಧವಾಗಿ ನಮ್ಮನ್ನು ಕಾಪಾಡಿಕೊಳ್ಳಬಲ್ಲೆವು?

ಮೊದಲನೆಯದಾಗಿ, ನಾವು ಸುಳ್ಳಿನ ಮೂಲವನ್ನು ಗುರುತಿಸಬೇಕು. ಒಬ್ಬನು ಬೇರೆ ಯಾರೂ ಕಂಡು ಹಿಡಿಯದಿರುವಂತಹ ಉಪದೇಶವೊಂದನ್ನು ಪರಿಚಯಿಸುವಾಗ, ಒಬ್ಬನು ತನಗೆ ವಿಶೇಷವಾದ ಪ್ರಕಟನೆ ಅಥವಾ ತಿಳುವಳಿಕೆಯು ಕೊಡಲ್ಪಟ್ಟಿತೆಂದು ಹೇಳಿಕೊಳ್ಳುವಾಗ, ನಾವು ಎಚ್ಚರವನ್ನು ವಹಿಸಬೇಕು. ವಿಶೇಷವಾಗಿ ಒಬ್ಬನು ತಾನು ನೀಡುವ ಮಾಹಿತಿಯು ಸಕಲ ಜ್ಞಾನವನ್ನು ಅಥವಾ ಎಲ್ಲಾ ಪ್ರಕಟನೆಗಳನ್ನು ಬಿಚ್ಚಿಡುವ ಬೀಗದ ಕೈ ಆಗಿದೆಯೆಂದು ಹೇಳುವಾಗ, ಅಥವಾ ಮಿಕ್ಕ ಎಲ್ಲರೂ ತಪ್ಪು ಎಂದು ಆತನು ಹೇಳಿಕೊಳ್ಳುವದಾದರೆ ನಾವು ಎಚ್ಚರಿಕೆಯನ್ನು ವಹಿಸಬೇಕು. ಅನೇಕ ಸಾರಿ ಈ ಬೋಧನೆಗಳು ಹೊಸ ಒಡಂಬಡಿಕೆಯ ಅಪೊಸ್ತಲರು ಹಾಗೂ ಪ್ರವಾದಿಗಳ ಮೂಲಕ

ಕೊಡಲ್ಪಟ್ಟಿರುವ ಪೂರ್ಣವಾದ ಮತ್ತು ಅಂತಿಮ ಪ್ರಕಟನೆಯ ಬದಲಾಗಿ, ಬೈಬಲಿನಲ್ಲಿರುವ ಒಂದು ಅಸ್ಪಷ್ಟವಾದ ಅಥವಾ ಸಾಂಕೇತಿಕ ವಾಕ್ಯಭಾಗವನ್ನಾಧರಿಸಿ ಹುಟ್ಟು ಹಾಕಲ್ಪಟ್ಟವುಗಳಾಗಿರುತ್ತವೆ.

ಥೆಸಲೋನಿಕದಲ್ಲಿನ ಕ್ರೈಸ್ತರಿಗೆ ಒಂದು ಹೊಸ ಪ್ರಕಟನೆಯನ್ನು ಕುರಿತು ತಿಳಿಸಲಾಗಿತ್ತು (2:1, 2), ಬಹುಶಃ ಅದಕ್ಕೆ ಅಪೊಸ್ತಲಿಕ ಅಧಿಕಾರವಿದೆಯೆಂದು ಹೇಳಿಕೊಂಡಿರಬಹುದಾಗಿದೆ. ಅವರು "ಬೇಗನೆ ಬುದ್ಧಿಗೆಟ್ಟು" ಹೋಗದಿರುವಂತೆ ಎಚ್ಚರಿಸಲ್ಪಟ್ಟರು, ಯಾಕೆಂದರೆ ಅದೊಂದು ಮೋಸವಾಗಿತ್ತು. ಅವರು ಎಚ್ಚರದಿಂದರಬೇಕು. ಅದೇ ರೀತಿಯಲ್ಲಿಯೇ, ಒಂದು ಹೊಸ ಉಪದೇಶವು ಎಷ್ಟೇ ರೋಮಾಂಚಕರವಾಗಿದ್ದರೂ ಸರಿಯೇ, ನಾವು ಅದರ ವಿಷಯದಲ್ಲಿ ಎಚ್ಚರಿಕೆಯಿಂದಿರಬೇಕು. ಅದೊಂದು ಮಾನವ ಬುದ್ಧಿಯಿಂದ ಉಂಟಾದ ಉತ್ಪನ್ನವಾಗಿರಬಹುದೇ, ಹೊರತು ದೇವರ ಪ್ರಕಟನೆಯಿಂದ ಬಂದದ್ದಲ್ಲ.

ಎರಡನೆಯದಾಗಿ, ನಾವು ಸ್ವತಃ ಉಪದೇಶವನ್ನು ಪರೀಕ್ಷಿಸಬೇಕು. ಅದು ನಮಗೆ ತಿಳಿದಿರುವಂತೆ ಕರ್ತನಾದ ಯೇಸು ಮತ್ತು ಆತನ ಪ್ರೇರಿತ ಬೋಧಕರಿಂದ ಬಂದ ಉಪದೇಶದೊಂದಿಗೆ ಒಮ್ಮತವನ್ನು ಹೊಂದಿರುತ್ತದೋ? ಒಂದು ವೇಳೆ ಅದು ಹೊಸ ಒಡಂಬಡಿಕೆಯು ಕಲಿಸುವಂಥದಕ್ಕೆ ವಿರುದ್ಧವಾಗಿದ್ದಲ್ಲಿ, ಅದು ಸತ್ಯವಲ್ಲ ಎಂಬುದನ್ನು ನಾವು ತಿಳಿಯಬಹುದು. ನಮಗೆ ಸುಳ್ಳು ಬೋಧನೆಯನ್ನು ಅರ್ಥಮಾಡಿಕೊಳ್ಳುವದಕ್ಕೆ ಕಷ್ಟಕರವೇನಿಸಬಹುದು; ಆದರೆ ನಮಗೆ ಸತ್ಯವು ತಿಳಿದಿರುವದಾದರೆ ಮತ್ತು ಅದಕ್ಕೆ ಹೊಸ ಉಪದೇಶವು ವಿರುದ್ಧವಾಗಿರುತ್ತದೆಂಬುದನ್ನು ತಿಳಿದಿರುವದಾದರೆ, ಆ ಉಪದೇಶವು ತಪ್ಪಾದದ್ದು ಎಂದು ಅರ್ಥವಾಗಿದೆ.

ಥೆಸಲೋನಿಕದವರು ಚಿಂತೆಗೊಂಡಿದ್ದರು ಮತ್ತು ಬೇಸರವಾಗಿದ್ದರು, ಆದರೆ ಅವರಿಗೆ ಈಗಾಗಲೆ ಯೇಸುವಿನ ಬರೋಣದ ಕುರಿತ ಸತ್ಯವು ತಿಳಿಸಲ್ಪಟ್ಟಿದೆಯೆಂಬುದನ್ನು ಜ್ಞಾಪಿಸಲಾಯಿತು (2 ಥೆಸಲೋನಿಕ 2:5). ಅವರಿಗೆ ಈಗಾಗಲೆ ತಿಳಿಸಲಾಗಿದ್ದ ಸತ್ಯವನ್ನು ಅವರು ಅರಿತುಕೊಂಡವರಾಗಿದ್ದಲ್ಲಿ, ಅವರಿಗೆ ಸುಳ್ಳನ್ನು ಕಂಡುಹಿಡಿಯುವದು ಸಾಧ್ಯವಿತ್ತು. ಅವರಿಗೆ ಸರಿಯಾಗಿ ಯಾವಾಗ ಈ ಸುಳ್ಳು ಬೋಧನೆ ಎದ್ದೇಳುವದು ಅಥವಾ ಅದನ್ನು ಯಾರು ಪ್ರಚಾರ ಮಾಡುವರು ಎಂಬದರ ಬಗ್ಗೆ ಹೇಳಲ್ಪಟ್ಟಿರಲಿಲ್ಲ, ಆದರೆ ಅದು ಸುಳ್ಳಾದದ್ದು ಮತ್ತು ಅದನ್ನು ಬೋಧಿಸುವವನು ಸ್ವತಃ ದೇವರಿಗೆ ವಿರುದ್ಧವಾಗಿರುವವನಾಗಿದ್ದಾನೆ ಎಂಬುದನ್ನು ತಿಳಿಯುವದಕ್ಕೆ ಅವರಿಗೆ ಸಾಧ್ಯವಿತ್ತು.

ದೇವರ ಸತ್ಯವನ್ನು ವಿರೋಧಿಸುವವರು ದೇವರನ್ನೇ ವಿರೋಧಿಸುವವರಾಗಿದ್ದಾರೆ. ಅವರು ತಮ್ಮನ್ನು ಧರ್ಮದಲ್ಲಿ ಅಧಿಕಾರಿಯನ್ನಾಗಿ ಮಾಡಿಕೊಳ್ಳುತ್ತಾರೆ ಮತ್ತು ಜನರ ಮನಸ್ಸಿನಲ್ಲಿ ದೇವರ ಸ್ಥಾನವನ್ನು ಆಕ್ರಮಿಸಿಕೊಳ್ಳಲು ಪ್ರಯತ್ನಿಸುತ್ತಾರೆ. ಅವರನ್ನು ದೇವರ ವಿರೋಧಿಯೆಂದು ಗುರುತಿಸಲ್ಪಡುವ ಅಗತ್ಯವಿದೆ, ಆದರೆ ದೇವರ ಜನರಿಗೆ ಸತ್ಯವು ತಿಳಿದಿರುವದಾದರೆ ಮಾತ್ರವೇ ಇದು ಸಾಧ್ಯವಿರುತ್ತದೆ.

ಸತ್ಯವನ್ನು ಅಧ್ಯಯನ ಮಾಡುವದು, ಸತ್ಯವನ್ನು ಕಲಿತುಕೊಳ್ಳುವದು, ಮತ್ತು ಸತ್ಯದೊಂದಿಗೆ ಉಳಿಯುವದು ಸುಳ್ಳಿನ ವಿರುದ್ಧ ನಮ್ಮನ್ನು ಕಾಪಾಡಿಕೊಳ್ಳಲು ಉತ್ತಮ ರಕ್ಷಣೆಯಾಗಿರುತ್ತದೆ! ಬೈಬಲಿನ ಅಜ್ಞಾನ, ನಿರ್ಲಕ್ಷ, ಮತ್ತು ದೇವರ ವಾಕ್ಯದ ಕುರಿತು

ಆಲಸ್ಯತನ ಇವುಗಳು ಅನೇಕ ಸಾರಿ ಸುಳ್ಳು ಬೋಧನೆಗೆ ದ್ವಾರಗಳಾಗಿರುತ್ತವೆ. ನಾವು ಸತ್ಯವನ್ನು ತಿಳಿದಿರತಕ್ಕದ್ದು. ಸತ್ಯವು ಮಾತ್ರವೇ ನಮ್ಮನ್ನು ಬಿಡುಗಡೆಗೊಳಿಸಬಲ್ಲದು (ಯೋಹಾನ 8:32).

*ಸತ್ಯವಾದ ಬೋಧನೆಯನ್ನು ಬಲವರ್ಧಿಸು (2:6-9).* ಸತ್ಯವು ಯಾವಾಗಲೂ ನಿಜವಾದದ್ದು, ಆದರೆ ಅದು ಮರೆತು ಹೋಗಲ್ಪಡಬಲ್ಲದು, ವಿಶೇಷವಾಗಿ ಒತ್ತಡದ ಸಮಯಗಳಲ್ಲಿ ಮರೆತು ಹೋಗಲ್ಪಡುತ್ತದೆ. ನಮ್ಮ ನಂಬಿಕೆಯ ಮೂಲಭೂತಗಳನ್ನು ಅನೇಕ ಸಾರಿ ಪುನಃ ಪುನಃ ಹೇಳಬೇಕಾಗುತ್ತದೆ, ಹೀಗೆ ಕಷ್ಟಗಳು ಬರುವಾಗ ನಮಗೆ ಭರವಸೆ ಮತ್ತು ಸಮಾಧಾನ ಸಿಕ್ಕಬಲ್ಲದು. ನಾವು ಮೂಲಭೂತಗಳನ್ನು ಕುರಿತು ನಿರಂತರವಾಗಿ ಒತ್ತಿ ಹೇಳುವದಕ್ಕೆ ವಿಫಲರಾಗುವದಾದರೆ, ನಮ್ಮ ನಂಬಿಕೆಯ ಅಸ್ತಿವಾರಗಳು ಅಭದ್ರಗೊಳ್ಳುವವು.

ಉತ್ತಮ ಬೈಬಲ್ ಬೋಧಕರುಗಳು ಸತ್ಯವು ಪುನರಾವರ್ತಿಸಲ್ಪಡುವಂತೆ ಜಾಗ್ರತೆ ವಹಿಸುವರು. “ಮೊದಲು ತಿಳಿಸಿದ ಮಾತುಗಳನ್ನು ತಿರಿಗಿ ನಿಮಗೆ ಬರೆಯುವದರಲ್ಲಿ ನನಗೇನೂ ಬೇಸರವಿಲ್ಲ” (ಫಿಲಿಪ್ಪಿ 3:1b). ಪ್ರತಿಯೊಂದು ಉಪದೇಶದ ಕಾರ್ಯಕ್ರಮದಲ್ಲಿಯೂ ನಿರಂತರವಾದ ಪುನರ್ವಿಮರ್ಶೆಯನ್ನು ಒಳಗೊಂಡಿರತಕ್ಕದ್ದು. ಹೊಸ ಹಾಗೂ ಭಿನ್ನವಾದ ಉಪದೇಶವು ಮಾತ್ರವೇ ಏಕೈಕ ಉತ್ತಮ ಉಪದೇಶವೆಂದು ನಾವು ಯೋಚಿಸುವದಾದರೆ, ನಾವು ಯೇಸುವಿನಿಂದ ಮತ್ತು ಆತನ ಅಪೊಸ್ತಲರಿಂದ ಬಳಸಲ್ಪಟ್ಟ ಪ್ರಾಥಮಿಕ ವಿಧಾನವೊಂದನ್ನು-ಆತ್ಮಗಳನ್ನು ಭದ್ರವಾಗಿ ಕಾಯುವದಕ್ಕೆ ಸತ್ಯವನ್ನು ಪುನರಾವರ್ತಿಸುವದು-ತಪ್ಪಿಸಿಕೊಂಡಿದ್ದೇವೆ ಎಂದಾಗುತ್ತದೆ.

ಥೆಸೋನಿಕದವರಿಗೆ ಬರೆದ ಪತ್ರಿಕೆಗಳಲ್ಲಿ, ಈ ಆಚಾರವನ್ನು ಅನುಸರಿಸಲಾಗಿರುತ್ತದೆ. ಪೌಲನು ಹನ್ನೆರಡಕ್ಕಿಂತಲೂ ಅಧಿಕ ಸಾರಿ ಈ ಮುಂಚೆ ಕಲಿಸಲ್ಪಟ್ಟದ್ದನ್ನು ಉಲ್ಲೇಖ ಮಾಡುತ್ತಾನೆ. ಈ ಸತ್ಯವನ್ನು ಚೆನ್ನಾಗಿ ತಿಳಿದುಕೊಳ್ಳಬೇಕೆಂದು ಕೊಡಲಾಗಿತ್ತು ಮತ್ತು ಆ ಮೂಲಕ ಅವರ ಉಳಿದ ಜೀವಿತವೆಲ್ಲಾ ಪ್ರಯೋಜನಕರವಾಗಿರಬೇಕೆಂಬ ಉದ್ದೇಶಕ್ಕಾಗಿ ಆಗಿತ್ತು.

ಬರಲಿದ್ದ ಮತಭ್ರಷ್ಟತೆಯ, ಅಥವಾ ನಂಬಿಕೆಯಿಂದ ದೂರವಾಗಿ ಬಿದ್ದು ಹೋಗುವಿಕೆಯ ಕುರಿತು ಥೆಸಲೋನಿಕದವರಿಗೆ ಮುಂಚೆಯೇ ಎಚ್ಚರಿಸಲಾಗಿತ್ತು. ಯಾವನೋ ಒಬ್ಬನು ದೇವರಿಗೆ ಸವಾಲು ಹಾಕುವನೆಂಬ ಬಗ್ಗೆ ಅವರಿಗೆ ಪ್ರಕಟಗೊಳಿಸಲಾಗಿತ್ತು. ಅಲ್ಲದೆ ಅದು ಯೇಸುವಿನ ಬರೋಣಕ್ಕೆ ಮುಂಚೆ ಸಂಭವಿಸುವದೆಂದು ಸಹ ಅವರಿಗೆ ಗೊತ್ತಿತ್ತು. ಅದು ಇನ್ನೂ ನಡೆದಿರಲಿಲ್ಲವಾದ್ದರಿಂದ, ಯೇಸುವು ಈಗಾಗಲೆ ಹಿಂದಿರುಗಿ ಬಂದಿದ್ದಾನೆಂಬ ವರದಿಗಳು ಸುಳ್ಳು ಎಂದು ಅವರು ತಿಳಿದುಕೊಳ್ಳಬಹುದಿತ್ತು. ಅವರು ಅಂಥ ವರದಿಗಳಿಂದ ಗೊಂದಲಕ್ಕೊಳಗಾಗುವದಕ್ಕೆ ಕಾರಣವೇ ಇರಲಿಲ್ಲ, ಆದರೆ ಅವರಿಗೆ ದೇವರ ಮನಸ್ಸಿನಿಂದ ಬಂದಂಥ ಸತ್ಯವಾದ ಬೋಧನೆಗಳನ್ನು ಜ್ಞಾಪಕ ಪಡಿಸುವದಂತೂ ಅಗತ್ಯವಿತ್ತು.

*ಸತ್ಯವಾದ ಬೋಧನೆಯಲ್ಲಿ ನಂಬಿಕೆಯಿಡಿರಿ (2:10-12).* ಜನರು ಸುಳ್ಳು ಬೋಧನೆಯನ್ನು ಅಂಗೀಕರಿಸಿಕೊಳ್ಳುವದನ್ನು ಕಂಡಾಗ ನಾವು ಕೆಲವು ಸಾರಿ ಆಶ್ಚರ್ಯಗೊಳ್ಳುತ್ತೇವೆ. ಸಂದೇಶವು ಸುಳ್ಳು ಆಗಿದೆ ಎಂಬ ಒಂದೇ ಕಾರಣಕ್ಕಾಗಿ, ಜನರು

ಅದನ್ನು ತಿರಸ್ಕರಿಸುವರೆಂದು ನಾವು ಎದುರು ನೋಡುತ್ತೇವೆ. ಅನೇಕ ಸಾರಿ ಜನರು ಸತ್ಯವನ್ನು ತಿರಸ್ಕರಿಸಿ ಸುಳ್ಳ ಬೋಧನೆಯನ್ನು ಅಂಗೀಕರಿಸಿಕೊಳ್ಳುವವರಾಗಿದ್ದಾರೆ. ಅವರು ಹೇಗೆ ಇದನ್ನು ಮಾಡಬಲ್ಲರು?

ಇದಕ್ಕೆ ಉತ್ತರವು ಏನೆಂದರೆ ಅವರ ಮನೋಭಾವವೇ. ಸುಳ್ಳು ಆಕರ್ಷಣೆಗಳನ್ನು ಹೊಂದಿರಬಲ್ಲದು. ಒಂದು ಆಕರ್ಷಣೆಯು ಏನೆಂದರೆ ಎಲ್ಲರಿಗಿಂತ ಅತ್ಯುನ್ನವಾದ ಜ್ಞಾನವನ್ನು ಹೊಂದಿದವರೆಂದು ನೋಡಲ್ಪಡುವ ಒಂದು ಪ್ರತಿಷ್ಠೆ ಅಥವಾ ಅಂತ್ತಸ್ತು ಆಗಿರುತ್ತದೆ. ಇನ್ನೊಂದು ಆಕರ್ಷಣೆಯು ಯಾವದೆಂದರೆ ಹೊಸ ಉಪದೇಶಗಳನ್ನು ಕಂಡು ಹಿಡಿಯುವ ಸಾಹಸಕ್ಕೆ ಕೈ ಹಾಕುವ ಬಯಕೆ. ಕೆಲವು ಸಾರಿ ಸುಳ್ಳನ್ನು ಅಂಗೀಕರಿಸುವದು ಒಬ್ಬನನ್ನು ಹೆಚ್ಚು ಪ್ರಖ್ಯಾತಗೊಳಿಸುತ್ತದೆ ಯಾಕೆಂದರೆ ಸುಳ್ಳು ಸಿದ್ಧಾಂತವು ಹೆಚ್ಚು ವ್ಯಾಪಕವಾಗಿ ಅಂಗೀಕರಿಸಲ್ಪಡುತ್ತದೆ. ನಮಗೆ ಬೇರೆಯವರಿಂದ ತಿರಸ್ಕರಿಸಲ್ಪಡುವ ಭಯವಿರುವದರಿಂದ, ಸತ್ಯವನ್ನು ಅಂಗೀಕರಿಸಿಕೊಂಡು ಬೇರೆಯವರಿಂದ ತಿರಸ್ಕರಿಸಲ್ಪಡುವವರಾಗುವದಕ್ಕಿಂತ ಅವರೊಂದಿಗೆ ಒಮ್ಮತವನ್ನು ವ್ಯಕ್ತ ಪಡಿಸುವದು ನಮಗೆ ಎಷ್ಟೋ ಹೆಚ್ಚು ಹಿತಕರವಾಗಿರುವದು. ಕೆಲವು ಸಾರಿ ಜನರು ತಮ್ಮ ನಂಬಿಕೆಯಿಂದುಂಟಾಗುವ ಪರಿಣಾಮಗಳೇನೆಂಬದನ್ನು ಕಾಣುವದಕ್ಕೆ ವಿಫಲರಾಗುವದರಿಂದಾಗಿ ಸುಳ್ಳನ್ನು ಅಂಗೀಕರಿಸಿಕೊಳ್ಳುತ್ತಾರೆ. ಸುಳ್ಳು ಬೋಧನೆಯು ಹೇಗೆ ದೇವರ ವಾಕ್ಯಕ್ಕೆ ವಿರುದ್ಧವಾಗಿರುತ್ತದೆ ಮತ್ತು ಅವರ ಆತ್ಮಗಳಿಗೆ ಹಾನಿಯನ್ನುಂಟು ಮಾಡುತ್ತದೆಂಬುದನ್ನು ಕಾಣುವದಕ್ಕೆ ಅವರು ವಿಫಲರಾಗುತ್ತಾರೆ.

ಸತ್ಯದ ಮೇಲೆ ಪ್ರೀತಿಯ ಕೊರತೆಯು ಯಾವಾಗಲೂ ಸುಳ್ಳಿನ ಹಿಂದಿರುವ ಕಾರಣವಾಗಿರುತ್ತದೆ. ಸುಳ್ಳು ಬೋಧನೆಯನ್ನು ಅಂಗೀಕರಿಸುವವರಿಗೆ ಸತ್ಯದ ಮೇಲಿನ ಪ್ರೀತಿಯನ್ನಿಡುವದು ಒಂದು ಆದ್ಯತೆಯಾಗಿರುವದಿಲ್ಲ; ಅವರು ಸುಳ್ಳನ್ನು ಹೆಚ್ಚು ಆಕರ್ಷಣೀಯವಾಗಿ ಕಾಣುತ್ತಾರೆ. ಅವರ ಮಟ್ಟಿಗಾದರೋ, ಸುಳ್ಳಿನೊಂದಿಗೆ ಸಂಬಂಧ ಹೊಂದಿರುವ ಪ್ರತಿಷ್ಠೆ, ಜನಪ್ರಿಯತೆ, ಮತ್ತು ಅಂಗೀಕಾರಗಳು ಸತ್ಯಕ್ಕಿಂತಲೂ ಹೆಚ್ಚು ಪ್ರಾಮುಖ್ಯವಾಗಿರುತ್ತವೆ. ಆ ರೀತಿಯಾಗಿ ಸತ್ಯದ ಮೇಲೆ ಪ್ರೀತಿಯಿಲ್ಲದಿರುವಿಕೆಯ ದುರಂತಕರ ಫಲಿತವು ನಾಶನದಲ್ಲಿರುವ ಆತ್ಮಗಳೇ ಆಗಿರುತ್ತದೆ. TP

### ದೇವರ ಸತ್ಯದ ಮೌಲ್ಯ (2:13-3:5)

ಬೋಧಕರು ಶಾಸ್ತ್ರಗಳ ಪ್ರಾಮುಖ್ಯವಾದ ಮೂಲಭೂತಗಳನ್ನು ತಿಳಿದಿರತಕ್ಕದ್ದು. ಶ್ರೋತೃಗಳು ತಮ್ಮ ಸ್ವಂತ ನಂಬಿಕೆಯ ತಳಹದಿಯಾಗಿ ಈ ಬೋಧನೆಗಳನ್ನು ಕಲಿಯುವದಕ್ಕೆ ಭಾಗ್ಯವಂತರು ಹಾಗೂ ಹಂಗಿನಲ್ಲಿರುವವರು ಆಗಿದ್ದಾರೆ

1 ಮತ್ತು 2 ತಿಮೊಥೆಯನಿಗೆ ಬರೆದ ಪತ್ರಿಕೆಗಳು ಹಾಗೂ ತೀತನಿಗೆ ಬರೆದ ಪತ್ರಿಕೆಯಲ್ಲಿ-ವಿಶೇಷವಾಗಿ ಬೋಧಕರನ್ನುದ್ದೇಶಿಸಿ ಬರೆಯಲಾಗಿರುವ ಮೂರು ಪತ್ರಿಕೆಗಳು-ನಾವು ಹನ್ನೊಂದು ಸಾರಿ "ಸ್ವಸ್ಥ ಬೋಧನೆ" (1 ತಿಮೊಥೆ 1:10), "ಸ್ವಸ್ಥ ಸಿದ್ಧಾಂತ" (1 ತಿಮೊಥೆ 4:6; 2 ತಿಮೊಥೆ 4:3; ತೀತನಿಗೆ 1:9; 2:1), "ಉಪದೇಶದಲ್ಲಿ ಯಥಾರ್ಥತ್ವ" (ತೀತನಿಗೆ 2:7), "ಸ್ವಸ್ಥವಾದ ಮಾತುಗಳು" (1 ತಿಮೊಥೆ 6:3; 2 ತಿಮೊಥೆ 1:13), "ಕ್ರಿಸ್ತನಂಬಿಕೆಯಲ್ಲಿ ಸ್ವಸ್ಥ"

(ತೀತನಿಗೆ 1:13; ಅಲ್ಲದೆ2:2ನ್ನು ಸಹ ನೋಡಿರಿ), ಮತ್ತು "ನಂಬತಕ್ಕ ವಾಕ್ಯ" (ತೀತನಿಗೆ 1:9) ಅಂತಹ ಮಾತುಗಳನ್ನು ಕಾಣುತ್ತೇವೆ. ನಮ್ಮಲ್ಲಿ ಒಬ್ಬೊಬ್ಬರು ಸಹ ದೇವರ ವಾಕ್ಯವನ್ನು ಉಪಯೋಗಿಸುವದರಲ್ಲಿ ಆತನಿಂದ ಸನ್ನದ್ಧುಗೊಳಿಸಲ್ಪಡುವ ಹಾಗೆ ದೇವರ ವಾಕ್ಯದ ಮೂಲಭೂತಗಳನ್ನು ತಿಳಿದುಕೊಂಡಿರತಕ್ಕದ್ದು.

2 ಥೆಸಲೋನಿಕ 2:15ರಲ್ಲಿ, ಪೌಲನು ದೇವರ ವಾಕ್ಯದೊಂದಿಗೆ ತಮ್ಮ ಸಂಬಂಧವನ್ನು ಕಾಪಾಡಿಕೊಳ್ಳಬೇಕೆಂದು ಥೆಸಲೋನಿಕದ ದೇವಜನರನ್ನು ಪ್ರೋತ್ಸಾಹಿಸುತ್ತಾನೆ. ಅವರಿಗೆ ಮತ್ತು ನಮಗೆ ಶಾಸ್ತ್ರಾಧಾರಿತ ಉಪದೇಶವು ಪ್ರಾಮುಖ್ಯವಾದದ್ದು? ದೇವರ ಸತ್ಯದ ಮೌಲ್ಯವೇನು?

*ದೇವರು ನಮ್ಮನ್ನು ರಕ್ಷಿಸುವದಕ್ಕೆ ಸತ್ಯವನ್ನು ಬಳಸುತ್ತಾನೆ (2:13, 14).* ಜನರನ್ನು ಸೈತಾನನ ಪಕ್ಷದಲ್ಲಿರುವ ನಶಿಸಿ ಹೋಗುತ್ತಿರುವ ಆತ್ಮಗಳ ಸ್ಥಿತಿಯಿಂದ ರಕ್ಷಿಸಲ್ಪಟ್ಟಿರುವ ದೇವರ ಮಕ್ಕಳನ್ನಾಗಿ ಯಾರು ಪರಿವರ್ತಿಸುತ್ತಾರೆ? ದೇವರು ಮಾಡುತ್ತಾನೆ. ಆತನು ನಶಿಸಿ ಹೋಗುತ್ತಿರುವ ಆತ್ಮಗಳನ್ನು ರಕ್ಷಿಸುವದಕ್ಕೆ ಏನನ್ನು ಬಳಸುತ್ತಾನೆ? ಆತನ ವಾಕ್ಯವನ್ನು ಬಳಸುತ್ತಾನೆ.

ನಾವು ಜೀವವುಳ್ಳ ವಾಕ್ಯವಾಗಿರುವ ಯೇಸು ಕ್ರಿಸ್ತನ ಸುವಾರ್ತೆಯ ಮೂಲಕ ಕರೆಯಲ್ಪಟ್ಟಿದ್ದೇವೆ. ದೇವರು ನಮಗೆ ವ್ಯಕ್ತಿರೂಪದಲ್ಲಿ ಸಂದೇಶವನ್ನು ಕಳುಹಿಸಿದನು- ಯೇಸುವಿನ ವ್ಯಕ್ತಿರೂಪದಲ್ಲಿ. ಆದ್ದರಿಂದಲೇ ಯೇಸುವು ದೇವರ ವಾಕ್ಯವೆಂದು ಕರೆಯಲ್ಪಟ್ಟಿದ್ದಾನೆ (ಯೋಹಾನ 1:1). ಆತನು ನಮಗೋಸ್ಕರ ದೇವರ ಸಂದೇಶವಾಗಿದ್ದಾನೆ. ದೇವರು ಸುವಾರ್ತೆಯ ಮೂಲಕ ನಮ್ಮನ್ನು ಪ್ರಭಾವಕ್ಕೆ ಕರೆಯುತ್ತಾನೆ (2 ಥೆಸಲೋನಿಕ 2:14). ದೇವರಿಂದ ಕರೆಯಲ್ಪಡುವದಕ್ಕೆ ಬೇರೆ ಇನ್ನಾವ ದಾರಿಯೂ ಇರುವದಿಲ್ಲ. ಆದ್ದರಿಂದ ಅಪೊಸ್ತಲರಿಗೆ "ಜಗತ್ತಿಗೆಲ್ಲಾ ಸುವಾರ್ತೆಯನ್ನು ಸಾರಿರಿ" ಎಂದು ಹೇಳಲಾಯಿತು (ಮಾರ್ಕ 16:15). ದೇವರಿಗೆ ಪ್ರತಿಯಾಗಿ ಸ್ಪಂದಿಸುವದಕ್ಕೆ ಮತ್ತು ಆತನ ಆತ್ಮೀಕ ಆಶೀರ್ವಾದಗಳಲ್ಲಿ ಪಾಲುಗಾರರಾಗುವದಕ್ಕೆ ಬೇರೆ ಇನ್ನಾವ ದಾರಿಯೂ ಇರುದಿಲ್ಲ.

ನಾವು ದೇವರ ವಾಕ್ಯದಿಂದ ಕರೆಯಲ್ಪಟ್ಟಿದ್ದೇವೆ; ಅಲ್ಲದೆ ನಾವು ದೇವರ ವಾಕ್ಯದಿಂದಲೇ ರಕ್ಷಿಸಲ್ಪಟ್ಟಿದ್ದೇವೆ ಮತ್ತು ಶುದ್ಧೀಕರಿಸಲ್ಪಟ್ಟಿದ್ದೇವೆ. "ನೀವು ಪವಿತ್ರಾತ್ಮನಿಂದ ಶುದ್ಧೀಕರಿಸಲ್ಪಟ್ಟವರಾಗಿ ಸತ್ಯದ ಮೇಲೆ ನಂಬಿಕೆಯನ್ನಿಟ್ಟು ರಕ್ಷಣೆಯನ್ನು ಪಡೆಯುವದಕ್ಕಾಗಿ ದೇವರು ನಿಮ್ಮನ್ನು ಆದಿಯಿಂದ ಆರಿಸಿಕೊಂಡನು" (2:13a) ನಾವು ಸತ್ಯದಲ್ಲಿಡುವ ನಂಬಿಕೆಯು ನಮ್ಮನ್ನು ದೀಕ್ಷಾಸ್ನಾನ ಮಾಡಿಸಿಕೊಳ್ಳುವಂತೆ ನಡಿಸುವವೇಳೆ ನಾವು ದೇವರ ಪವಿತ್ರಾತ್ಮನಿಂದ ಶುಚಿಗೊಳಿಸಲ್ಪಡುತ್ತೇವೆ ಅಥವಾ ಶುದ್ಧೀಕರಿಸಲ್ಪಡುತ್ತೇವೆ. ನಾವು ದೀಕ್ಷಾಸ್ನಾನ ಮಾಡಿಸಿಕೊಳ್ಳಬೇಕೆಂಬ ಆಜ್ಞೆಗೆ ವಿಧೇಯರಾಗುವಾಗ ದೇವರು ನಮ್ಮನ್ನು ತನ್ನ ಪವಿತ್ರಾತ್ಮನಿಂದ ರಕ್ಷಿಸುತ್ತಾನೆ. ಅನನೀಯನು ಪೌಲ/ಸೌಲನಿಗೆ ಹೀಗೆ ಹೇಳುತ್ತಾನೆ, "ಈಗ ನೀನೇಕೆ ಸಾವಕಾಶ ಮಾಡುತ್ತೀ? ಎದ್ದು ಆತನ ಹೆಸರನ್ನು ಹೇಳಿಕೊಳ್ಳುವವನಾಗಿ ದೀಕ್ಷಾಸ್ನಾನ ಮಾಡಿಸಿಕೊಂಡು ನಿನ್ನ ಪಾಪಗಳನ್ನು ತೊಳೆದುಕೋ" (ಅಪೊಸ್ತಲರ ಕೃತ್ಯಗಳು 22:16). ದೀಕ್ಷಾಸ್ನಾನದ ವೇಳೆ ನಾವು ಪಾಪಗಳಿಂದ ತೊಳೆಯಲ್ಪಟ್ಟು ದೇವರೊಂದಿಗೆ ಐಕ್ಯಗೊಳಿಸಲ್ಪಡುತ್ತೇವೆ.

ಹಾಗಾದರೆ, ರಕ್ಷಣೆಯನ್ನು ಎರಡು ಕರೆಯುವಿಕೆಗಳೆಂಬದಾಗಿ ನೋಡಬಹುದಾಗಿದೆ: ದೇವರು ನಮ್ಮನ್ನು ಕರೆಯುವದು ಮತ್ತು ನಾವು ದೇವರನ್ನು ಕರೆಯುವದು. ಮೊದಲನೆಯ ಕರೆಯುವಿಕೆ ಯಾವಾಗವೆಂದರೆ ದೇವರು ನಮ್ಮನ್ನು ಆತನ ಬಳಿಕೆ ಕರೆಯುವದಕ್ಕೆ ತನ್ನ ವಾಕ್ಯವನ್ನು ಬಳಸುವ ಸಂದರ್ಭ. ನಮಗೆ ಸುವಾರ್ತೆಯು ಕಲಿಸಲ್ಪಡುವಾಗ ಇದು ಸಂಭವಿಸುತ್ತದೆ. ಎರಡನೆಯದ್ದು ಯಾವಾಗವೆಂದರೆ ನಾವು ಸುವಾರ್ತೆಗೆ ಪ್ರತ್ಯುತ್ತರವನ್ನು ಕೊಡುವ ಸಂದರ್ಭ. ನಮಗೆ ವಾಕ್ಯವು ಕಲಿಸಲ್ಪಡುವಾಗ ಮತ್ತು ನಮಗೆ ರಕ್ಷಣೆಯ ಅಗತ್ಯವಿದೆಯೆಂಬುದನ್ನು ನಾವು ಗ್ರಹಿಸಿಕೊಳ್ಳುವಾಗ, ನಾವು ನಮ್ಮ ವಿಶ್ವಾಸ ಅಥವಾ ನಂಬಿಕೆಯನ್ನು ವಾಕ್ಯದಲ್ಲಿ ಇಡುವ ಮೂಲಕ ನಮ್ಮನ್ನು ರಕ್ಷಿಸಬೇಕೆಂದು ದೇವರನ್ನು ಕರೆಯುತ್ತೇವೆ, ಆ ವಾಕ್ಯವು ಪಶ್ಚಾತ್ತಾಪ ಮತ್ತು ದೀಕ್ಷಾಸ್ನಾನದ ಮೂಲಕ ಸಂದೇಶಕ್ಕೆ ವಿಧೇಯರಾಗುವವರಿಗೆ ರಕ್ಷಣೆಯ ವಾಗ್ದಾನವನ್ನು ಮಾಡುತ್ತದೆ.

ನಾವು ದೇವರ ಬೋಧನೆಗೆ ತೋರುವ ವಿಧೇಯತೆಯೇ ಒಂದು ದಾರಿಯಾಗಿದ್ದು ಅದರ ಮೂಲಕ ನಾವು ದೇವರ ರಕ್ಷಣೆಯ ಕೊಡುಗೆಯನ್ನು ಸ್ವೀಕರಿಸಿಕೊಳ್ಳುತ್ತೇವೆ. "ಆದರೆ ನೀವು ಮುಂಚೆ ಪಾಪಕ್ಕೆ ದಾಸರಾಗಿದ್ದರೂ ನಿಮಗೆ ಕಲಿಸಲ್ಪಟ್ಟ ಬೋಧನೆಗೆ ನೀವು ಮನಃಪೂರ್ವಕವಾಗಿ ಅಧೀನರಾದದರಿಂದಲೂ ಪಾಪದಿಂದ ಬಿಡುಗಡೆಯನ್ನು ಹೊಂದಿ ನೀತಿಗೆ ದಾಸರಾದದರಿಂದಲೂ ದೇವರಿಗೆ ಸ್ತೋತ್ರವಾಗಲಿ" (ರೋಮಾ 6:17, 18).

*ದೇವರು ನಮ್ಮನ್ನು ಬಲಪಡಿಸುವದಕ್ಕೆ ಸತ್ಯವನ್ನು ಬಳಸುತ್ತಾನೆ (2:15).* ಒಮ್ಮೆ ನಾವು ರಕ್ಷಣೆ ಹೊಂದಿದ ಮೇಲೆ, ದೇವರು ನಮ್ಮನ್ನು ಪ್ರೋತ್ಸಾಹಿಸಿ ಬಲಪಡಿಸುವದಕ್ಕೆ ತನ್ನ ವಾಕ್ಯವನ್ನು ಬಳಸುತ್ತಾನೆ. ಅದು ನಮಗೆ ಬೆಳೆಯುವಂತೆ, ಅಭಿವೃದ್ಧಿಗೊಳ್ಳುವಂತೆ, ಮತ್ತು ನಮ್ಮ ಜೀವಿತಗಳಲ್ಲಿ ಫಲವನ್ನು ಬಿಡುವಂತೆ ಸಹಾಯ ಮಾಡಬಲ್ಲದು.

ಇದು ಹೇಗೆ ಸಂಭವಿಸುತ್ತದೆ? ಉತ್ತರವು 2:15ರಲ್ಲಿ ಇರುತ್ತದೆ: "ಹೀಗಿರುವದರಿಂದ ಸಹೋದರರೇ, ದೃಢವಾಗಿ ನಿಲ್ಲಿರಿ. ನಾವು ಮಾತಿನಿಂದಾಗಲಿ ಪತ್ರಿಕೆಯಿಂದಾಗಲಿ ನಿಮಗೆ ತಿಳಿಸಿದ ಬೋಧನೆಗಳನ್ನು ನೀವು ಭದ್ರವಾಗಿ ಹಿಡಿದುಕೊಂಡಿರ್ರಿ." ಈ "ಸಂಪ್ರದಾಯಗಳು" ಮನುಷ್ಯ ಯೋಚನೆಗಳಾಗಿರಲಿಲ್ಲ; ಅವುಗಳು ಪ್ರೇರಿತ ಬೋಧನೆಗಳಾಗಿದ್ದವು.

ಕ್ರೈಸ್ತರಿಗೆ ಅವರ ಬೆಳವಣಿಗೆಗಾಗಿ ಮತ್ತು ಬಲಕ್ಕಾಗಿ ದೇವರ ಬೋದನೆಯ ಅಗತ್ಯವಿದೆ. ಈ ಬೋಧನೆಯು ಈಗಾಗಲೇ ಕೊಡಲ್ಪಟ್ಟಿದೆ; ಆದರೆ ಕೆಲವು ಜನರಿಗೆ ದೇವರ ವಾಕ್ಯದಲ್ಲಿ ತಿಳಿಸಲ್ಪಟ್ಟಿರುವ ಈ ಸತ್ಯವು ಸಾಕಾಗುವದಿಲ್ಲ. ಅವರಿಗೆ ಹೊಸದಾದ ಮತ್ತು ಭಿನ್ನವಾದ ಮಾಹಿತಿಯ ಅಗತ್ಯವಿರುತ್ತದೆ; ಅವರಿಗೆ ದೇವರು ಈಗಾಗಲೆ ಕೊಟ್ಟಿರುವದರಲ್ಲಿ ಸಂತೃಪ್ತಿಯಿರುವದಿಲ್ಲ. ಅದರ ಫಲಿತವಾಗಿ, ಅವರು ದೇವರ ವಾಕ್ಯವನ್ನು ನಿರ್ಲಕ್ಷಿಸುತ್ತಾರೆ ಮತ್ತು ದೇವರ ವಾಕ್ಯದ ಸ್ಥಾನವನ್ನು ಬೇರೊಂದಕ್ಕೆ ಕೊಡುತ್ತಾರೆ ಮತ್ತು ದೇವರ ಶಕ್ತಿಯನ್ನು ಕಳಕೊಳ್ಳುತ್ತಾರೆ. ಒಂದು ಭಿನ್ನವಾದ ಸಂದೇಶವು ಆಕರ್ಷಕವಾಗಿ ತೋರಬಹುದು; ಆದರೆ ಅದು ಶಕ್ತಿಹೀನವಾದದ್ದು, ಯಾಕೆಂದರೆ ಅದು ದೇವರ ಸಂದೇಶವಾಗಿರುವದಿಲ್ಲ. ದೇವರಿಗೆ ಮಾತ್ರವೇ ಶಕ್ತಿಯಿರುತ್ತದೆ. ನಮ್ಮನ್ನು ರಕ್ಷಿಸಿ ಬಲಪಡಿಸುವದಕ್ಕೆ ದೇವರು ಮಾತ್ರವೇ ತನ್ನ ವಾಕ್ಯವನ್ನು ಬಳಸಬಲ್ಲನು!

ಕ್ರೈಸ್ತರಿಗೆ ಅವರ ನಿರಂತರವಾದ ಬೆಳವಣಿಗಾಗಿ, ಪೋಷಣೆಗಾಗಿ, ಮತ್ತು ಫಲವನ್ನು

ಕೊಡುವದಕ್ಕಾಗಿ ದೇವರ ವಾಕ್ಯದ ಅಗತ್ಯವಿರುತ್ತದೆ. ಲೂಕ 8ನೇ ಅಧ್ಯಾಯದಲ್ಲಿ ಯೇಸುವು ತಿಳಿಸಿದ ನೆಲಗಳ ಸಾಮ್ಯದಲ್ಲಿ, ಮೊಳೆತು, ಬೆಳೆದು ಅಭಿವೃದ್ಧಿಗೊಂಡ ಜನರು ಯಾರೆಂದರೆ ದೇವರ ವಾಕ್ಯವನ್ನು ತಮ್ಮ ಹೃದಯಗಳಲ್ಲಿ ಪೂರ್ಣವಾಗಿ ಬಳಸಿಕೊಂಡವರೇ ಆಗಿದ್ದಾರೆ. ಅದೇ ರೀತಿಯಲ್ಲಿ, ನಾವು ಆತನಿಗೆ ಮೆಚ್ಚಿಕೆಯಾಗುವ ರೀತಿಯಲ್ಲಿ ಬೆಳವಣಿಗೆಗೊಳ್ಳಲು ಬಯಸುವದಾದರೆ ನಮ್ಮನ್ನು ಮಾರ್ಗದರ್ಶಿಸುವಂತೆ ನಾವು ಆತನ ವಾಕ್ಯವನ್ನು ಬಳಸಿಕೊಳ್ಳಬೇಕಾಗಿರುತ್ತದೆ.

*ದೇವರು ನಮ್ಮನ್ನು ಸಂತೈಸುವದಕ್ಕೆ ಸತ್ಯವನ್ನು ಬಳಸುತ್ತಾನೆ (2:16, 17).* ದೇವರ ವಾಕ್ಯವು ನಮಗೆ ಆತನು ಬಯಸುವದನ್ನು ಮಾಡುವಂತೆ ಶಕ್ತಿಯನ್ನು ಕೊಡುವದು ಮಾತ್ರವೇ ಆಗಿರುವದಿಲ್ಲ; ಅದು ನಮಗೆ ಆದರಣೆ ಮತ್ತು ನಿರೀಕ್ಷೆಯನ್ನು ಸಹ ಕೊಡುತ್ತದೆ. ದೇವರು ತನ್ನ ವಾಕ್ಯದ ಮೂಲಕ ಕೊಡುವಂಥ ಭದ್ರತೆ ಹಾಗೂ ಗಮ್ಯತೆಯ ಮೂಲಕ ನಾವು ಪ್ರೋತ್ಸಾಹಗೊಳಿಸಲ್ಪಡಬೇಕೆಂದು ದೇವರು ಬಯಸುತ್ತಾನೆ. ನಿರಾಶೆಯಲ್ಲಿರುವವರನ್ನು ಪ್ರೋತ್ಸಾಹಿಸುವದಕ್ಕೆ ಇಡೀ ಬೈಬಲ್‌ನ್ನು ಬಳಸಬಹುದಾಗಿದೆ. ಪೌಲನು ಹೀಗೆ ಹೇಳುತ್ತಾನೆ, "ಪೂರ್ವದಲ್ಲಿ ಬರೆದದ್ದೆಲ್ಲಾ ನಮ್ಮನ್ನು ಉಪದೇಶಿಸುವದಕ್ಕಾಗಿ ಬರೆಯಲ್ಪಟ್ಟಿತು. ನಾವು ಓದಿ ಸ್ಥಿರಚಿತ್ತವನ್ನೂ ಆದರಣೆಯನ್ನೂ ಹೊಂದಿ ರಕ್ಷಣೆಯ ನಿರೀಕ್ಷೆಯುಳ್ಳವರಾಗಿರುವಂತೆ ಆ ಗ್ರಂಥಗಳು ಬರೆಯಲ್ಪಟ್ಟಿವೆ" (ರೋಮಾ 15:4).

ದೇವರ ಸಹಾನುಭೂತಿ, ದಾಕ್ಷಿಣ್ಯತೆ, ಮತ್ತು ಆರೈಕೆಯ ಸ್ವಭಾವವು "ಕನಿಕರವುಳ್ಳ ತಂದೆಯೂ ನಮ್ಮನ್ನು ಸಕಲವಿಧವಾಗಿ ಸಂತೈಸುವ ದೇವರೂ" ಎಂಬ ಬಣ್ಣನೆಯಲ್ಲಿ ಒತ್ತಿ ಹೇಳಲ್ಪಟ್ಟಿದೆ (2 ಕೊರಿಂಥ 1:3b). ಯೇಸುವಿನ ಮತ್ತು ತಂದೆಯಾದ ದೇವರ ಪ್ರೀತಿಭರಿತವಾದ ಸಂತೈಸುವಿಕೆಯು ಹಿಂಸೆಯ ಸಮಯವನ್ನು ದಾಟಿಕೊಂಡು ಹೋಗುವಂತೆ ಪ್ರೋತ್ಸಾಹಿಸುವದಕ್ಕೆ ಥೆಸಲೋನಿಕದಲ್ಲಿನ ಕ್ರೈಸ್ತರಿಗೆ ಒಂದು ಬೆಲೆಯುಳ್ಳಂಥ ಆಸ್ತಿಯಾಗಿತ್ತು. "ನಮಗೆ ನಿತ್ಯವಾದ ಆದರಣೆಯನ್ನೂ ಉತ್ತಮವಾದ ನಿರೀಕ್ಷೆಯನ್ನೂ ಕೃಪೆಯಿಂದ ಅನುಗ್ರಹಿಸಿದವರು" "ನಮ್ಮ ತಂದೆಯಾದ ದೇವರೂ ಕರ್ತನಾದ ಯೇಸು ಕ್ರಿಸ್ತನೂ" ಆಗಿದ್ದಾರೆ (2:16).

*ನಮ್ಮನ್ನು ಕಾಪಾಡುವದಕ್ಕೆ ದೇವರು ಸತ್ಯವನ್ನು ಬಳಸುತ್ತಾನೆ (3:1-5).* ನಮಗೆ ಸಹಜವಾಗಿಯೇ ನಮ್ಮ ಮಾನವ ದೇಹಗಳಿಗೆ ಯಾವದು ಹಾನಿಯನ್ನುಂಟು ಮಾಡುತ್ತದೆಂಬದು ತಿಳಿದಿರುತ್ತದೆ. ನಾವು ಸರಿಯಾದ ಆಹಾರಗಳನ್ನು ತಿನ್ನುವದಕ್ಕೆ, ರಸ್ತೆಗಳಲ್ಲಿ ಸುರಕ್ಷಿತವಾಗಿ ಪ್ರಯಾಣಿಸುವದಕ್ಕೆ ಪ್ರಯತ್ನಿಸುತ್ತೇವೆ, ಮತ್ತು ನಮ್ಮ ದೇಹಗಳನ್ನು ಕಾಪಾಡಿಕೊಳ್ಳುವದಕ್ಕೆ ಇತರ ಕ್ರಮಗಳನ್ನು ತೆಗೆದುಕೊಳ್ಳುತ್ತೇವೆ. ಆತ್ಮಗಳು ಸಹ ಹಾನಿಗೊಳಗಾಗಬಹುದಾಗಿದೆ. ನಮ್ಮ ಆತ್ಮಗಳಿಗೆ ಹಾನಿಯನ್ನುಂಟು ಮಾಡುವ ಗುರಿಯೊಂದಿಗೆ ಸೈತಾನನು ಒಂದು ದುಷ್ಟ ಪ್ರಭಾವಗಳ ಸಂಗ್ರಹದ ಮೇಲ್ವಿಚಾರಣೆಯನ್ನು ನೋಡಿಕೊಳ್ಳುತ್ತಾನೆ. ವಾಸ್ತವದಲ್ಲಿ ನಮಗೆ ಹಾನಿಯನ್ನುಂಟು ಮಾಡಬಹುದಾದ ಆಚಾರಗಳು ಒಳ್ಳೆಯವುಗಳೆಂದು ಆತನು ಹೇಳುವನು. ಆತನು ಸುಳ್ಳನ್ನು ಸತ್ಯವೆಂಬದಾಗಿ ಹೇಳುತ್ತಾನೆ. ಸೈತಾನನು ಜನರನ್ನು, ವಸ್ತುಗಳನ್ನು, ಮತ್ತು ಯೋಚನೆಗಳನ್ನು ತಿರುಚಿ ಅವುಗಳನ್ನು ನಮಗೆ ಹಾನಿಯನ್ನುಂಟು ಮಾಡುವದಕ್ಕೆ ಬಳಸಬಲ್ಲನು. ನಮ್ಮ ಆತ್ಮಗಳ

ಮೇಲೆ ದಾಳಿ ಮಾಡುವದಕ್ಕಾಗಿ ಸೈತಾನನು ಯಾವದನ್ನೇ ಆಗಲಿ ಮತ್ತು ಯಾರನ್ನೇ ಆಗಲಿ ಬಳಸಿಕೊಳ್ಳುವನು!

ನಮ್ಮ ಆತ್ಮಗಳ ಮೇಲಾಗುವ ಈ ದಾಳಿಯನ್ನು ಸಹಿಸಿಕೊಳ್ಳುವದಕ್ಕೆ ಯಾರಿಗೆ ಶಕ್ತಿಯಿರುತ್ತದೆ? ದೇವರು ಮಾತ್ರವೇ ಯೇಸು ಕ್ರಿಸ್ತನ ಮೂಲಕ ನಮ್ಮ ಆತ್ಮಗಳನ್ನು ಪಾಪದಿಂದ ರಕ್ಷಿಸಬಲ್ಲನು ಮತ್ತು ಪುನಃ ಸೈತಾನನ ಬಲೆಯಲ್ಲಿ ಸಿಕ್ಕಿಕೊಳ್ಳದಂತೆ ತಡೆಯುವದಕ್ಕೆ ನಮ್ಮ ಜೀವಿತಗಳನ್ನು ಮಾರ್ಗದರ್ಶಿಸಬಲ್ಲನು. ದೇವರ ವಾಕ್ಯವು ಮಾತ್ರವೇ ನಮ್ಮನ್ನು ಸುಳ್ಳುತನದಿಂದ ಮತ್ತು ಸೈತಾನನ ತಿರುಚುವಿಕೆಯಿಂದ ಕಾಪಾಡಬಲ್ಲದು. ದೇವರ ವಾಕ್ಯವು ಮಾತ್ರವೇ ನಮಗೆ ದೈನಂದಿನ ಜೀವಿತಕ್ಕೆ ಸರಿಯಾದ ಮಾರ್ಗದರ್ಶನವನ್ನು ಕೊಡುತ್ತದೆ: “ಆದರೆ ಕರ್ತನು ನಂಬಿಗಸ್ತನು; ಆತನು ನಿಮ್ಮನ್ನು ದೃಢಪಡಿಸಿ ನೀವು ಕೆಡುಕನ ಕೈಗೆ ಸಿಕ್ಕದಂತೆ ಕಾಪಾಡುವನು” (3:3).

ದೇವರ ವಾಕ್ಯವು ಸೈತಾನನ ವಿರುದ್ಧವಾಗಿರುವ ಏಕೈಕ ಭದ್ರತೆಯಾಗಿರುವದರಿಂದ, ನಾವು ಸಾಧ್ಯವಾದಷ್ಟು ಹೃದಯಗಳಿಗೆ ಮತ್ತು ಮೂಲಕ ದೇವರ ವಾಕ್ಯವನ್ನು ಹರಡಿಸಬೇಕು. ಅದು ಪ್ರತಿಯೊಬ್ಬರಿಗೂ ಅಗತ್ಯವಿರುತ್ತದೆ-ದೇಶದಲ್ಲಿರುವ ಅತಿ ಶ್ರೀಮಂತನಿಂದ ಕಡು ಬಡವನ ವರೆಗೂ ಎಲ್ಲರಿಗೂ ಅಗತ್ಯವಿದೆ. ವಾಕ್ಯವು ತನ್ನ ಕಾಪಾಡುವ ಪ್ರಭಾವವನ್ನು ಅವರ ಜೀವಿಗಳಲ್ಲಿ ಹರಡಿಸಿ ಅವರನ್ನು ಸೈತಾನನ ಸೇವಕರ ಪ್ರಭಾವಕ್ಕೊಳಗಾಗದಂತೆ ಕಾಯುವಂರತಾಗುವ ಹಾಗೆ ಪೌಲನು ಇತರ ಕ್ರೈಸ್ತರು ಪ್ರಾರ್ಥನೆಗಳನ್ನು ಮಾಡಬೇಕೆಂದು ಕೇಳಿಕೊಂಡನು: “ಕಡೇ ಮಾತೇನಂದರೆ, ಸಹೋದರರೇ, ನಮಗೋಸ್ಕರ ಪ್ರಾರ್ಥನೆ ಮಾಡಿರಿ. ಕರ್ತನ ವಾಕ್ಯವು ನಿಮ್ಮಲ್ಲಿ ಹಬ್ಬಿದ ಪ್ರಕಾರ ಎಲ್ಲೆಲ್ಲಿಯೂ ಬೇಗನೆ ಹಬ್ಬಿ ಪ್ರಖ್ಯಾತಿ ಹೊಂದುವ ಹಾಗೆಯೂ ದೇವರು ನಮ್ಮನ್ನು ಮೂರ್ಖರಾದ ದುಷ್ಟಜನರ ಕೈಯಿಂದ ತಪ್ಪಿಸುವ ಹಾಗೆಯೂ ಪ್ರಾರ್ಥಿಸಿರಿ; ಎಲ್ಲರಲ್ಲಿ ಕ್ರಿಸ್ತ ನಂಬಿಕೆಯಿಲ್ಲವಲ್ಲಾ” (3:1, 2).

*ಮುಕ್ತಾಯ.* ಸತ್ಯವು ಯಾವಾಗಲೂ ಸತ್ಯವೇ, ಆದರೆ ದೇವರ ಸತ್ಯವು ಅದಕ್ಕಿಂತಲೀ ಎಷ್ಟೋ ಹೆಚ್ಚಾದದ್ದು. ಅದು ಜೀವಕ್ಕೆ ದಾರಿ ಮತ್ತು ಪಾಪದಿಂದ ಬಿಡುಗಡೆ ಆಗಿರುತ್ತದೆ. ಅದು ರಕ್ಷಿಸುವದಕ್ಕೆ, ಪೋಷಿಸುವದಕ್ಕೆ ಮತ್ತು ಆದರಣೆಗೆ ಶಕ್ತಿಯಾಗಿದೆ. ಯೇಸು ಹೀಗೆ ಹೇಳಿದನು, “ನೀವು ನನ್ನ ವಾಕ್ಯದಲ್ಲಿ ನೆಲೆಗೊಂಡವರಾದರೆ ನಿಜವಾಗಿ ನನ್ನ ಶಿಷ್ಯರಾಗಿದ್ದು ಸತ್ಯವನ್ನು ತಿಳಿದುಕೊಳ್ಳುವಿರಿ; ಮತ್ತು ಸತ್ಯವು ನಿಮ್ಮನ್ನು ಬಿಡುಗಡೆಮಾಡುವದು” (ಯೋಹಾನ 8:31, 32). ನಿಜವಾದ ಶಿಷ್ಯರು ಯಾವ ಸತ್ಯವನ್ನು ಪ್ರಕಟಗೊಳಿಸುವದಕ್ಕೆ ಯೇಸುವು ಬಂದನೋ ಆ ಸತ್ಯವನ್ನು ಬೆಲೆಯನ್ನು ತಿಳುಕೊಳ್ಳುವರು. ನಾವು ದೇವರ ಸತ್ಯವನ್ನು ಕಂಡುಕೊಳ್ಳಬೇಕು, ನಂಬಬೇಕು, ಮತ್ತು ಅಮೂಲ್ಯವೆಂದೆಣಿಸಬೇಕು!

ನಾವು ಆತನ ವಾಕ್ಯವನ್ನು ಅಧ್ಯಯನ ಮಾಡಿ ಅದನ್ನು ಹಂಚಿಕೊಳ್ಳುವಾಗ, ಫಲಿತವು ಬೇರೆಯವರಿಗೆ ಸಹಾಯ ಮಾಡುವ ಮತ್ತು ದೇವರಿಗೆ ಮಹಿಮೆಯನ್ನು ತರುವಂತಹ ಫಲವಾಗಿರುತ್ತದೆ. ಅದು ಅಮೂಲ್ಯವಾಗಿರುವಂತಹ “ಸಕಲ ಸತ್ಕಾರ್ಯ ಮತ್ತು ಸದ್ವಾಕ್ಯ” ಫಲವನ್ನುಂಟು ಮಾಡುತ್ತದೆ (2:17).

ದೇವರ ವಾಕ್ಯದಿಂದ ಸಮೃದ್ಧಗೊಳ್ಳುವ ಹೃದಯಗಳು ಭಕ್ತಿಯುಳ್ಳ ಹೃದಯಗಳಾಗಿವೆ.

ಅವುಗಳು ದೇವರ ಹೃದಯದಂತಹ ಮತ್ತು ಕ್ರಿಸ್ತನ ಹೃದಯದಂತಹ ಹೃದಯಗಳಾಗುವವು. ಅವುಗಳ ತಮ್ಮ ಯೋಚನೆಗಳಲ್ಲಿ, ಸಂಭಾಷಣೆಯಲ್ಲಿ ಮತ್ತು ಕ್ರಿಯೆಗಳಲ್ಲಿ ದೇವರ ಮತ್ತು ಕ್ರಿಸ್ತನ ಸ್ವಭಾವವನ್ನು ಹಂಚಿಕೊಳ್ಳುವ ಹೃದಯಗಳಾಗುವವು. ಅವುಗಳು ಶಕ್ತಿ, ಪ್ರೀತಿ, ಮತ್ತು ಆದರಣೆಯ ಹೃದಯಗಳಾಗಿರುವವು! ಬೇರೆಯವರಿಗೆ ಒಂದು ಹೊಸ ಆತ್ಮೀಕ ಜೀವಿತವನ್ನು ಹೇಗೆ ಆರಂಭಿಸಬೇಕು, ಬಲ ಹಾಗೂ ಆದರಣೆಯೊಂದಿಗೆ ಬೆಳೆಯಬೇಕು, ಕೆಟ್ಟತನದಿಂದ ಕಾಪಾಡಲ್ಪಡಬೇಕು, ಹಾಗೂ ದೇವರಿಗಾಗಿ ಅಮೂಲ್ಯವಾದ ಫಲವನ್ನು ಹೇಗೆ ಕೊಡುವವರಾಗಬೇಕೆಂದು ಕಲಿಸುವದಕ್ಕಾಗಿ ತನ್ನ ವಾಕ್ಯವನ್ನು ಬಳಸುವಂತೆ ದೇವರು ನಮಗೆ ಸಹಾಯವನ್ನು ಮಾಡುವನು. "ದೇವರ ಪ್ರೀತಿಯಲ್ಲಿಯೂ ಕ್ರಿಸ್ತನ ತಾಳ್ಮೆಯಲ್ಲಿಯೂ ಸೇರುವಂತೆ ಕರ್ತನೇ ನಿಮ್ಮನ್ನು ನಡಿಸಲಿ" (3:5). TP

---

**ಅಡಿಟಿಪ್ಪಣಿಗಳು**

[1]ನೋಡಿರಿ A. T. Robertson, *The Epistles of Paul*, vol. 4, Word Pictures in the New Testament (Nashville: Broadman Press, 1931), 47. [2]Raymond C. Kelcy, *The Letters of Paul to the Thessalonians*, The Living Word Commentary, vol. 13 (Austin, Tex.: R. B. Sweet Co., 1968), 150. [3]C. F. Hogg and W. E. Vine, *The Epistles of Paul the Apostle to the Thessalonians* (Shreveport, La.: Lambert Publishing Co., 1977), 243. [4]ಪೌಲ ಹಾಗೂ ಯಾಕೋಬನ ದೃಷ್ಟಿಯಲ್ಲಿ, "ಸಮೀಪವಾಗಿದೆ" ಎಂದರೆ ಒಂದು ದಶಕ ಅಥವಾ ಒಂದು ಶತಮಾನದೊಳಗೆ ಎಂದು ಸಹ ಅರ್ಥವಾಗಿರಲಿಲ್ಲ. ಅವರ ತಾತ್ಪರ್ಯವು ಕ್ರಿಸ್ತನ ಬರೋಣಕ್ಕೆ ಮುಂಚಿನ ಕಡೇ ಯುಗವು (ಕ್ರೈಸ್ತ ಯುಗ) ಆರಂಭಗೊಂಡಿರುತ್ತದೆ ಎಂದಾಗಿತ್ತು. [5]Bruce M. Metzger, *A Textual Commentary on the Greek New Testament: A Companion Volume to the United Bible Societies' Greek New Testament*, 2d ed. (New York: United Bible Societies, 1994), 567. [6]F. F. Bruce, *1 & 2 Thessalonians*, Word Biblical Commentary, vol. 45 (Waco, Tex.: Word Books, 1982), 168. [7]Albert Barnes, *Notes on the New Testament, Explanatory and Practical: Thessalonians, Timothy, Titus and Philemon*, enlarged type ed., ed. Robert Frew (Grand Rapids, Mich.: Baker Book House, 1949), 80–96. [8]Ibid., 81. [9]Robertson, 51. [10]ನೋಡಿರಿ Leon Morris, *The First and Second Epistles to the Thessalonians*, The New International Commentary on The New Testament (Grand Rapids, Mich.: Wm. B. Eerdmans Publishing Co., 1959), 228–29.

[11]ನೋಡಿರಿ Hogg and Vine, 258. [12]Hugo McCord, *McCord's New Translation of the Everlasting Gospel* (Henderson, Tenn.: Freed-Hardeman University, 1988). [13]Hogg and Vine, 262. [14]Henry Alford, *The Greek Testament*, rev. Everett F. Harrison (Chicago: Moody Press, 1958), 3:291. [15]Morris, 231. [16]Robertson, 53. [17]Kelcy, 156. [18]Ibid. [19]Morris, 233. [20]Robertson, 53.

[21]Hogg and Vine, 267. [22]1 ಥೆಸಲೋನಿಕ 1:4; 2:1, 9, 14, 17; 3:7; 4:1, 9, 10 (twice), 13; 5:1, 4, 12, 14, 25-27; 2 ಥೆಸಲೋನಿಕ 2:1, 13, 15; 1:3; 3:1, 6, 13. [23]Morris, 237–38n. [24]*The Greek New Testament*, 4th rev. ed., ed. Barbara Aland, Kurt Aland, Johannes Karavidopoulos, Carlo M. Martini, and Bruce M. Metzger (Stuttgart: United Bible Societies, 1998). [25]Hogg and Vine, 273. [26]Walter Bauer, *A Greek-English Lexicon of the New Testament and Other Early Christian Literature*, 3d ed., rev. and ed. Frederick William Danker (Chicago: University of Chicago Press, 2000), 763. [27]David J. Williams, *1 and 2 Thessalonians*, New International

Biblical Commentary: New Testament Series, vol. 12 (Peabody, Mass.: Hendrickson Publishers, 1992), 136. [28]John Stott, *The Gospel and the End of Time* (Downer's Grove, Ill.: InterVarsity, 1991), 180. [29]J. W. McGarvey and Philip Y. Pendleton, *Thessalonians, Corinthians, Galatians and Romans*, The Standard Bible Commentary (Cincinnati, Ohio: Standard Publishing Foundation, 1916), 41. [30]Ibid., 41–43.

[31]David Lipscomb, "Commentary on the Second Epistle to the Thessalonians," in *A Commentary on the New Testament Epistles*, ed. J. W. Shepherd (Nashville: Gospel Advocate, 1942), 5:95–96. [32]See McGarvey and Pendleton, 38–40. [33]Merrill C. Tenney, *New Testament Times* (Peabody, Mass.: Hendrickson Publishers, 2001), 116. [34]Jon Weatherly, *2 Thessalonians*, The College Press NIV Commentary (Joplin, Mo.: College Press Publishing Co., 1996), 252. [35]Isaac Watts, "How Shall the Young Secure Their Hearts?," *Songs of Faith and Praise*, comp. and ed. Alton H. Howard (West Monroe, La.: Howard Publishing Co., 1994). [36]Kelcy, 157. [37]Hogg and Vine, 273. [38]Weatherly, 276. [39]Frame, 285.